ಕರ್ನಾಟಕ ಲಲಿತಕಲಾ ಅಕಾಡೆಮಿ

ಹುಟ್ಟು ಬೆಳವಣಿಗೆ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಸಂಶೋಧನ ಸಂಪ್ರಬಂಧ

ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೧೫೦೩೦೦೨೭

ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೦೯

ಕರ್ನಾಟಕ ಲಲಿತಕಲಾಅಕಾಡೆಮಿ

ಹುಟ್ಟು - ಬೆಳವಣಿಗೆ

(ಎಂ.ಫಿಲ್. ಪದವಿಗಾಗಿಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಸಂಪ್ರಬಂಧ)

ಸಂಶೋಧಕರು

ನೋಂ ಸಂಖ್ಯೆ : ೧೮೦೧೧೫೦೩೦೦೨೭

(ಎಂ.ಫಿಲ್ ವಿದ್ಯಾರ್ಥಿ)

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಕರ್ನಾಟಕ ಲಲಿತಕಲಾ ಅಕಾಡೆಮಿ

- ಹುಟ್ಟು ಮತ್ತು ಬೆಳವಣಿಗೆ

ಪರಿವಿಡಿ



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಟ್ಟಡದ ಹೊರ ನೋಟ



ಕರ್ನಾಟಕ ಲಲಿತಕಲಾ ಅಕಾಡೆಮಿಯ ಹೊರ ನೋಟ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಈಗ ಸಿಕ್ಕಿರುವದು ಎಲ್ಲಾ ಗವಿ ಚಿತ್ರಗಳಲ್ಲಿ ಕಾಣಬಹುದು. ನೂತನ ಶಿಲಾಯುಗದಿಂದ ಆರಂಭವಾದ ಇಂತಹ ಸರಳವಾದ ಚಿತ್ರಕಲೆ ಬೃಹತ್ ಶಿಲಾಯುಗದ ಕಾಲದಲ್ಲೂ ಕಂಡು ಬಂದಿದ್ದು. ಸಂಗನ ಕಲ್ಲು, ತಿಕ್ಕಲಕೋಟೆ, ಸಿಡಿಲುಫಂಡಿ ಮೊದಲಾದ ಬೃಹತ್ ಶಿಲಾ ಸಮಾಧಿಗಳ ಸಮೀಪದಲ್ಲಿಯೆ ಇರುವ ಚಾಚುಬಂಡೆಗಳ ಮೇಲಿನ ಚಿತ್ರಗಳ ಮೂಲಕ ಮುಂದುವರೆದಿದೆ, ಆ ಕಾಲದ ಜನರಲ್ಲಿ ಚಿತ್ರಕಲೆಯಲ್ಲಿ ಆಸಕ್ತಿ ಇತ್ತು. ಅದು ಗವಿ ಚಿತ್ರಗಳ ಬಳಿಕ ಅವರು ಉಪಯೋಗಿಸುತ್ತಿರುವ ಮಣ್ಣಿನ ಪಾತ್ರೆಗಳ ಮೇಲೆ ಚಿತ್ರಕಲೆಗಳು ವ್ಯಕ್ತವಾಗುತ್ತಿತ್ತು ಎನ್ನುವುದು ಸ್ಪಷ್ಟವಾಗಿರುವ ವಿಷಯ.

ಮಣ್ಣಿನ ಮಡಕೆಗಳ ಮೇಲೆ ಚಿತ್ರಗಳು ಬಳಿಕೆ ತಾಮ್ರ ಶಿಲಾಯುಗದಲ್ಲಿ ಮುಂದುವರೆದು ಜನರ ಮನೆಗಳ ಮೇಲೆ ಕಂಡುಬಂತು. ಇದು ಕೂಡ ಚಾಚು ಬಂಡೆಗಳ ಕೆಳಗಿನ ಕೆಮ್ಮಣ್ಣಿನ ಚಿತ್ರಗಳನ್ನೆ ಹೇಳುತ್ತಿದ್ದು. ಇದು ಮನೆಗೋಡೆಯ ಮೇಲೆ, ಮನೆಯ ಮುಂದೆ ಹಾಕುವ ರಂಗೋಲಿಗಳಲ್ಲೂ ಕಾಣತೋಡಗಿತು.

ಚಿತ್ರಕಲೆ ನಿಂತ ನೀರಾಗದೆ ಮುಂದುವರೆಯಿತು. ಅಜಂತಾ ಗುಹೆಗಳಲ್ಲಿ ಚಿತ್ರಕಲೆ ಇನ್ನೂ ಪ್ರೌಢವಸ್ಥೆ ತಲುಪಿತು. ಅಜಂತ ಭಿತ್ತಿಚಿತ್ರ ರಚನೆ ಕ್ರಿ.ಪೂ ೨ನೇ ಶತಮಾನದಿಂದ ಶುರುವಾಗಿ ಮುಂದಿನ ಏಳು ಶತಮಾನಗಳ ಕಾಲ ನಿರಂತರವಾಗಿ ಸಾಗಿತು. ಆದರೆ ಈ ಕಾಲಘಟ್ಟರಿದಲ್ಲಿ ಕರ್ನಾಟಕದಲ್ಲಿ ಚಿತ್ರಕಲೆ ಬೆಳವಣಿಗೆ ಹೇಗೆ ಸಾಗಿತು ಎಂಬುದಕ್ಕೆ ಯಾವ ಪುರಾವೇಗಳೂ ದೊರತಿಲ್ಲ. ಇದಾದ ನಂತರ ಬಾದಾಮಿ ಚಾಲುಕ್ಯರ ಆಡಳಿತ ಅವಧಿಯಲ್ಲಿ ದೊರೆತ ಪ್ರೋತ್ಸಾಹ ಪರಿಣಾಮ ಅನೇಕ ಗುಹೆಗಳಲ್ಲಿ ಭಿತ್ತಿಚಿತ್ರಗಳು ನಿರ್ಮಾಣ-ವಾಗಿರಬೇಕೆಂದು ಅಭಿಪ್ರಾಯವಿದೆ. ಇದಕ್ಕೆ ನಿದರ್ಶನವಾಗಿ ಬಾದಾಮಿಯಲ್ಲಿ ಮೂರನೆಯ ಗುಹೆಯ ಒಳಭಾವಣಿಯಲ್ಲಿ ಕೆಲವು ಭಿತ್ತಿಚಿತ್ರಗಳು ಕಾಣಲುಸಿಗುತ್ತವೆ. ಮುಂದೆ ಚಿತ್ರಕಲೆ ಜೊತೆಗೆ ಮೂರ್ತಿ ಶಿಲ್ಪರೂಡಿಗೆ ಬಂತು. ವಾಸ್ಥವವಾಗಿ ಮೂರ್ತಿಶಿಲ್ಪಕ್ಕೆ ಹೆಚ್ಚಿನ ಪ್ರಾಧಾನ್ಯತೆ ಸಿಕ್ಕಿತು. ಹೀಗಾಗಿ ಭಿತ್ತಿಚಿತ್ರ ವರ್ಣಚಿತ್ರಗಳು ರಚನೆ ಅಪರೂಪವಾಗಿರಬೇಕು. ಆದರೆ ಚಿತ್ರಕಲಾ ಪರಂಪರೆ ಅನೂಚಾನವಾಗಿ ಮುಂದುವರೆಯುತ್ತಿತ್ತು ಎಂಬುದಕ್ಕೆ ಶಿಲಾಶಾಸನ-ತಾಮ್ರ ಶಾಸನಗಳಲ್ಲಿ ಉಲ್ಲೇಖಗಳಿವೆ. ಆದರೆ ಅದರ ಸ್ವರೂಪ ತಿಳಿಯಲು ಉದಾಹರಣೆಗಳು ಕಡಿಮೆ.

ಗವಿಚಿತ್ರಗಳಲ್ಲಿ ಕಂಡುಬಂದ ಚಿತ್ರಕಲೆ ಕೆಲವು ಗುಹೆಗಳಲ್ಲಿ ಕಾಣಿಸಿಕೊಂಡವು. ದೇವಾಲಯಗಳಲ್ಲಿ ಮೂರ್ತಿ ಶಿಲ್ಪಗಳಿಗೆ ಮನ್ನಣೆ ಸಿಕ್ಕಿತು. ಅರಮನೆಗಳಲ್ಲಿ ಗುರು ಮನೆಗಳಲ್ಲಿ ವರ್ಣಚಿತ್ರಗಳು ಹೆಚ್ಚಾಗಿ ಕಂಡು ಬಂದವು. ಇವು ಇಟ್ಟಿಗೆ, ಮರಳಿನಿಂದ ನಿರ್ಮಾಣವಾಗುತ್ತಿದ್ದ ಕಟ್ಟಡಗಳಲ್ಲಿ ಮುಡಿಬರುತ್ತಿದ್ದವು. ಇಂತಹ ಕಟ್ಟಡಗಳು ಹೆಚ್ಚು ಕಾಲ ಉಳಿಯಲಿಲ್ಲ. ಚಿತ್ರಕಲೆಯ

ನಿದರ್ಶನಗಳಿಗೆ ಹೆಚ್ಚಿನ ಕಾಲದ ಬಸದಿಗಳಲ್ಲಿ ಛಾವಣಿಗಳು, ಗೋಡೆಗಳ ವರ್ಣಚಿತ್ರಗಳನ್ನು ಹೊಂದಿದ್ದವು ಎಂಬುದಕ್ಕೆ ಪುರಾವೆಗಳಿವೆ.

ಜಿನಾಲಯದ ಛಾವಣಿ-ಗೋಡೆಗಳು ಚಿತ್ರಗಳಿಂದ ಅಲಂಕೃತವಾಗಿದ್ದಂತೆ ಆ ಕಾಲದಲ್ಲಿ ರಚನೆಗೊಂಡ ಓಲೆಗರಿ ಹಸ್ತಪ್ರತಿಗಳಲ್ಲೂ ವರ್ಣಚಿತ್ರಗಳು ಕಂಡುಬಂದಿವೆ. ೧೨ನೇ ಶತಮಾನಕ್ಕೆ ಸೇರಿರುವ ಇಂತಹ ಅನೇಕ ಓಲೆಗರಿ ಗ್ರಂಥಗಳಲ್ಲೂ ವರ್ಣಚಿತ್ರಗಳಿಗೆ ಹೆಚ್ಚಿನ ಮಾನ್ಯತೆ ದೊರೆತಿರುವುದಕ್ಕೆ ಅದರಲ್ಲಿರುವ ಚಿತ್ತಾರಗಳೇ ಸಾಕ್ಷಿ.

ವಿಜಯನಗರ ಕಾಲಕ್ಕೆ ದೇವಾಲಯಗಳಲ್ಲಿ ಮತ್ತೆ ಭಿತ್ತಿಚಿತ್ರಗಳು ಕಂಡು ಬಂದವು. ಆವಾಗ ಗೋಡೆ ಹಾಗೂ ಚಾವಣಿಗಳಲ್ಲಿ ಭಿತ್ತಿಚಿತ್ರಗಳು ಕಾಣಿಸಿಕೊಂಡವು. ಹಂಪೆಯ ವಿರೂಪಾಕ್ಷದ ದೇವಾಲಯವೂ ಸೇರಿದಂತೆ ಹಲವಾರು ದೇವಾಲಯಗಳಲ್ಲಿ ವಿಜಯನಗರ ಶೈಲಿ ಭಿತ್ತಿಚಿತ್ರಗಳು ಇದಕ್ಕೆ ಉದಾಹರಣೆ. ಇವುಗಳೆಲ್ಲಾ ವರ್ಣಚಿತ್ರಗಳು ಸತ್ವಯುತವಾದವು. ಇಲಿ ವರ್ಣವೈಭವ ಕುಂಚಗಳ ಸೂಕ್ಷ್ಮತೆ ಎದ್ದು ಕಾಣುತ್ತವೆ. ಇವುಗಳಲ್ಲಿ ಉಪಯೋಗಗೊಂಡ ವಸ್ತು ವಿಷಯ ಸಾಮಾನ್ಯವಾಗಿ ಧಾರ್ಮಿಕ ಇಲ್ಲಿರುವ ಬಣ್ಣಗಳೆಲ್ಲ ಮೂಲ ಬಣ್ಣಗಳು ಹಾಗೂ ಅವುಗಳ ಮಿಶಣ್ರದಿಂದ ರೂಪುಗೋಂಡಿವೆ.

ದೇವಾಲಯ-ಬಸದಿ-ಓಲೆಗರಿ ಹಸ್ತಪ್ರತಿಗಳಲ್ಲಿ ಕಂಡುಬರುತ್ತಿದ್ದ ಚಿತ್ರಕಲೆ ಬಹುಮನಿ ಹಾಗೂ ಬಿಜಾಪುರ ಅರಸರ ಕಾಲದಲ್ಲಿ ಕಾಗದ ಗಾಜುಗಳಲ್ಲಿ ಸ್ಥಾನ ಪಡೆಯುವ. ಆವರ ಸಂತೋಷದ ಸಮಯವನ್ನು ಅಭಿವ್ಯಕ್ತಪಡಿಸುತ್ತಿದ್ದ ಚಿತ್ರಕಲೆ ನಂತರ ಪ್ರಾಣಿಪಕ್ಷಿ, ಗಿಡಮರ. ಪುಪ್ಪಗಳನ್ನು ಒಳಗೊಂಡಿತ್ತು. ನಂತರ ಧಾರ್ಮಿಕ ವಸ್ತುಗಳೇ ಇಲ್ಲಿ ಕಾಣಿಸಿದವು. ಮಹಾಕಾವ್ಯಗಳ ಆಯ್ದ ಭಾಗಗಳು ಚಿತ್ರಗಳಾಗಿ ರೋಪಗೊಂಡಿವು. ನಂತರ ರಾಜ ಮಹಾರಾಜರು, ರಾಣಿಯರೂ ಇಂತಹ ಚಿತ್ರಗಳಲ್ಲಿ ಕಾಣತೊಡಗಿದರು.

ವಿಜಯನಗರ ಅರಸರ ಬಳಿಕ ಮೈಸೂರು ದೊರೆಗಳು ಭಿತ್ತಿಚಿತ್ರಗಳ ರಚನೆಗೆ ಪ್ರೋತ್ಸಾಹ ನೀಡಿದರು. ಅನೇಕ ಗುಡಿಗಳು, ಬಸದಿಗಳು ಇನ್ನಿತರ ಕಟ್ಟಡಗಳು ವರ್ಣಚಿತ್ರಗಳಿಂದ ಅಲಂಕೃತಗೊಂಡವು. ಅರಮನೆ ಗುರುಮನೆ, ಸಿರಿವಂತರ ವಾಡೆ.(ವಾಸಸ್ಥಳ)ಗಳಲ್ಲೂ ವರ್ಣಚಿತ್ರಗಳಿಗೆ ಸ್ಥಾನ ಸಿಕ್ಕಿತು. ಧಾರ್ಮಿಕ ವಸ್ತಗಳ ಜೊತೆಗೆ ಯುದ್ಧ, ಒಡ್ಡೋಲಗ ಚಿತ್ರಗಳು ವರ್ಣಚಿತ್ರಗಳಲ್ಲಿ ಸೇರ್ಪಡೆಯಾದ ಘಟ್ಟ ಇದು. ಪೌರಾಣಿಕ ಚಿತ್ರಗಳು, ಪ್ರಕೃತಿ ಚಿತ್ರಣ, ವ್ಯಕ್ತಿ ಚಿತ್ರಗಳು ಕಾಣಿಸಿಕೊಂಡಿದ್ದು, ಇದೇ ಸಮಯದಲ್ಲಿ ಮೈಸೂರು ಅರಸರ ಆಳ್ವಿಕೆಯಲ್ಲಿ ಪಾಚ್ರೀನ ಸಂಪ್ರದಾಯದ ವರ್ಣಚಿತ್ರಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದ್ದರಿಂದ ಅನೇಕ ಕಟ್ಟಡಗಳು ಚಿತ್ರಗಳಿಂದ ತುಂಬಿ ಕೊಂಡವು. ಇದರಲ್ಲಿ ಖಾಸಗಿ ಮನೆ, ರಾಮಮಂದಿರ, ಭಜನೆ ಮಂದಿರಗಳೂ ಸೇರಿದವು. ಆಗ ರಚನೆಗೊಂಡ ಚಿತ್ರಗಳು ಅರಮನೆ ಗುರುಮನೆ,

ಗೊಡೆಗಳಲ್ಲಿ ಪಾಧ್ಯನ್ಯತೆವಾಗಿ ಕಾಣದವು. ಪ್ರತಿಭಾವಂತ ಕಲಾವಿದರು ಬೆಳಕಿಗೆ ಬಂದಿದ್ದು ಇದೇ ಸಂದರ್ಭದಲ್ಲಿ ಎನ್ನಬಹುದು. ಇವರಿಗೆಲ್ಲ ಅರಸರ ಆಶ್ರಯವಿತ್ತು.

ಅಜಂತ ಗುಹೆಗಳಲ್ಲಿ ಅಪೂರ್ವ ಚಿತ್ರ ಸಂಪತ್ತು ಬೆಳಕಿಗೆ ಬಂದ ಮೇಲೆ ಇಡೀ ವಿಶ್ವವೇ ಭಾರತೀಯ ಕಲಾಪರಂಪರೆಯನ್ನು ಕೊಂಡಾಡಿತು. ನಮ್ಮ ಕಲಾಶ್ರೀಮಂತಿಕೆಯನ್ನು ಮೆಚ್ಚಿದವರೇ ಇರಲಿಲ್ಲಾ. ಅಜಂತಾ ಭಿತ್ತಿಚಿತ್ರಗಳು ಕಲಾಲೋಕವನ್ನು ಬೆರಗುಗೊಳಿಸಿದ್ದೇ ಅಲ್ಲದೆ ಭಾರತ ಚಿತ್ರಕಲಾ ಪ್ರಪಂಚಕ್ಕೆ ಮಾನ್ಯತೆ ದೊರಕಿಸಿತ್ತು. ಆದರೆ ಇದೇ ಸಮಯದಲ್ಲಿ ಭಾರತ ಪಾಶ್ಚಾತ್ಯರ ಆಳ್ವಿಕೆಗೆ ಸೇರಿ ಹೋಯಿತ್ತು. ಪಾಶ್ಚಾತ್ಯ ಸಂಪ್ರದಾಯ ಕಲೆ ಭಾರತೀಯ ಚಿತ್ರಕಲಾ ಹಾದಿಯನ್ನು ಮಂಕಾಗಿಸಿತ್ತು. ದೇಶದೂದ್ದಕ್ಕೂ ಪಾಶ್ಚಾತ್ಯ ಕಲಾಶಾಲೆಗಳು ಆರಂಭವಾದವು. ಸಾಂಪ್ರದಾಯಕ ಕಲಾವಿದರು ಹೊರಬಂದರು. ಇವೆರಡನ್ನೆ ಪಾಶ್ಚಾತ್ಯ ಹಾಗೂ ಭಾರತೀಯ ಸಾಂಪ್ರದಾಯಗಳ ಸಮನ್ವಯ ಕಲಾವಿದರಲ್ಲಿ ಕನ್ನಡಿಗರೂ ಇದ್ದರು. ಹೀಗಾಗಿ ಪಾಶ್ಚಾತ್ಯ ಚಿತ್ರಕಲೆಯ ಪ್ರಭಾವ ಕನ್ನಡ ನಾಡಿನಲ್ಲೂ ತೋಡಗಿತ್ತು. ಅನೇಕ ವಿದೇಶಿ ಕಲಾಸಂಪ್ರದಾಯವನ್ನು ಅಭ್ಯಾಸ ಮಾಡಿದ ಕಲಾವಿದರಾಗಿದ್ದರು ಇಲ್ಲಿ ಕಾಣಿಸಿಕೊಂಡರು. ಕೆಲವರು ವಿದೇಶಿ ಶೈಲಿಯನ್ನು ನೇರವಾಗಿ ಅನುಸರಿಸಲು ಶುರು ಮಾಡಿದರು ಇನ್ನೂ ಕಲೆಯು ಕಲಾವಿದರು ಪಾಶ್ಚಾತ್ಯರ ಉತ್ತಮ ಅಂಶಗಳನ್ನು ಬಳಸಿಕೊಂಡು ಸಮ್ಮಿಶ್ರಣ ಶೈಲಿಯನ್ನು ರೂಢಿಸಿಕೊಳ್ಳಲು ಮೂದಲಿಗರು.

ಹೀಗೆ ಕಾಲದ ಬೆಳವಣಿಗೆಯೊಂದಿಗೆ ಕಲೆಯಲ್ಲೂ ಹಲವು ಮಜಲುಗಳನ್ನು ಕಾಣಲಾಯಿತು. ಕನ್ನಡ ನಾಡಿನ ಕಲಾಚರಿತ್ರೆಯಲ್ಲಿ ದಾಖಲಾದ ಈ ಕಾಲಘಟ್ಟದಲ್ಲಿ ಹಲವು ಕಾವಲುಗಳಾಗಿ ಚಿತ್ರರಚನಾ ಸಂಪ್ರದಾಯದಲ್ಲಿ ಹುಟ್ಟಿಕೊಂಡಿತ್ತು. ವಿವಿಧ ಬಗೆಯ ವಸ್ತುವಿಷಯಗಳು ಅಭಿವ್ಯಕ್ತಗಳಲ್ಲಿ ಕಾಣಿಸಿಕೊಂಡವು. ಧಾರ್ಮಿಕ ಸಮಕಾಲೀನ ಹಾಗೂ ವಯಕ್ತಿಕ ಭಾವನೆಗಳನ್ನು ಚಿತ್ರರಚನೆಗಳು ಮೂಡಿಬಂದವು. ಭಿನ್ನ ಧಾಟಿಯಲ್ಲಿ ವಿವಿಧ ಪ್ರಕಾರಗಳಲ್ಲಿ ಕಲಾರಚನೆ ಮಾಡುತ್ತ ಕರ್ನಾಟಕದ ಹೆಸರನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕಾಣಿಸಿಕೊಳ್ಳುವಂತೆ ಮಾಡಿರುವ ಐತಿಹಾಸಿಕ ಹಿನ್ನೆಲೆಯನ್ನು ಇತಿಹಾಸದಿಂದ ತಿಳಿಯಬಹುದಾಗಿದೆ. ಹೀಗೆ ಕರ್ನಾಟಕದ ಚಿತ್ರಕಲೆಯ ಘತವೈಭವವನ್ನು ದೇಶವಿದೇಶಗಳಿಗೆ ಪರಿಸರಿಸುವ ಮಹಾತ್ವಾಕಾಂಶೇಷೆ ಲಲಿತಕಲಾ ಅಕಾಡೆಮಿಯಾಗಿದೆ.

ಅಧ್ಯಯನದ ಉದ್ದೇಶ

ಭಾರತ ದೇಶದ ಸ್ವತಂತ್ರವಾದ ನಂತರ ಕೇಂದ್ರ ಸರ್ಕಾರದಲ್ಲಿ ಲಲಿತಕಲೆಗಳಿಗೆ ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಅನೇಕ ಅಕಾಡೆಮಿಗಳನ್ನು ಹುಟ್ಟುಹಾಕಿದರು. ಅದರಲ್ಲಿ ೧೯೫೪ಳರಲ್ಲಿ ಆರಂಭಗೊಂಡ ಕೇಂದ್ರ ಲಲಿತಕಲಾ ಅಕಾಡೆಮಿಯು ಒಂದಾಗಿದೆ. ಈ

ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪ್ರಥಮವಾಗಿ ಆರಂಭವಾದದ್ದು, ಕರ್ನಾಟಕ ಸಾಹಿತ್ಯ ಅಕಾಡೆಮಿ, ನಂತರ ೧೯೬೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಸ್ಥಾಪನೆಯಾಗಿದೆ. ಲಲಿತಕಲಾ ಅಕಾಡೆಮಿಯು ಎಲ್ಲ ತರಹದ ಲಲಿತಕಲೆಗಳಿಗೂ ಅಕಾಡೆಮಿ ಆಸರೆ ನೀಡಿದ್ದು, ಅದರ ಬಹುಮುಖ ಸಾಧನೆ ಹಾಗೂ ಮೂಲ ಉದ್ದೇಶ.

ಈ ನಾಡನ್ನು ಕಟ್ಟುವಲ್ಲಿ ಅನೇಕ ಜನರ ತ್ಯಾಗ ಪರಿಶ್ರಮದ ಬೆವರಿದೆ, ಅದರಲ್ಲಿ ಕಲಾವಿದರ ಪಾತ್ರವನ್ನು ತುಂಬಾ ಮೌಲಿಕವಾಗಿದೆ. ಚಿತ್ರ, ಶಿಲ್ಪ, ಸಂಗೀತ, ಸಾಹಿತ್ಯ ಮತ್ತು ಇಂತಹ ಅನೇಕ ಲಲಿತಕಲೆಗಳಿಗೆ ಸಾವಿರಾರು ವರ್ಷದ ಚರಿತ್ರೆಯಿದೆ. ಅವುಗಳ ಸಂರಕ್ಷಣೆ, ದಾಖಲೆಕರಣ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಧ್ಯಾಯನಗಳು ನಡೆಯದೇ ಇರುವುದು ಕಂಡುಬರುತ್ತದೆ. ನಾಡಿನ ಸಾಂಸ್ಕೃತಿಕ ಪರಂಪರೆಯ ಹರಿಕಾರರಾದ ಅನೇಕ ಕಲಾವಿದರ, ಸಂಘ–ಸಂಸ್ಥೆಗಳ ಪಾತ್ರ ಅಮೂಲ್ಯ ಆಸ್ತಿಯಾಗಿವೆ. ಇವುಗಳ ಸರ್ವತೋಮುಖದ ಅಭಿವೃದ್ಧಿಗಾಗಿ ಕಲಾಶಿಬಿರ, ಪ್ರದರ್ಶನ, ವಿಚಾರಸಂಕಿರಣ, ಕಮ್ಮಟ, ಕಾರ್ಯಾಗಾರ, ಪ್ರಶಸ್ತಿ, ಪುರಸ್ಕಾರಗಳು, ಧನಸಹಾಯ, ಶಿಷ್ಯವೇತನಗಳನ್ನು ನೀಡಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರೋತ್ಸಾಹ ನೀಡುತ್ತಿದೆ.

ಪ್ರಸ್ತುತ ಪ್ರಬಂಧದಲ್ಲಿ ಐತಿಹಾಸಿಕ ಹಿನ್ನೆಲೆಯನ್ನು ಹಾಗೂ ಕರ್ನಾಟಕದ ದೃಶ್ಯಕಲಾ ಕ್ಷೇತ್ರಕ್ಕೆ ಹೊಸ ರೂಪವನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ತನ್ನದೇ ಆದ ಬಹುದೊಡ್ಡ ಪಾತ್ರವನ್ನು ಹೊಂದಿರುವ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವ ಪ್ರಮುಖ ಉದ್ದೇಶವನ್ನು ಅಧ್ಯಯನವು ಹೊಂದಲಾಗಿದೆ.

೧೯೬೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಜನ್ಮತಾಳಿ ಪ್ರಾಯೋಗಿಕ, ಸೈದ್ಧಾಂತಿಕವಾಗಿ, ಅನೇಕ ವೈವಿಧ್ಯಮಯವಾದ ಕಲಾಚಟುವಟಿಕೆಗಳು ನಿರಂತರವಾಗಿ ಆಯೋಜಿಸುತ್ತಾಬರುತ್ತಿದೆ. ಆದರೆ ಸಾಹಿತ್ಯಕವಾಗಿ ಗಮನಿಸಿದಾಗ ದಾಖಲಿಕರಣ ಕೊರತೆ ಎದ್ದುಕಾಣುತ್ತಿದೆ. ಅಕಾಡೆಮಿಯ ಕಲಾಚಟುವಟಿಕೆಗಳ ಕುರಿತು ದೃಶ್ಯಕಲಾ ಸಾಹಿತಿಗಳು ಮತ್ತು ದೃಶ್ಯಕಲೆಯ ಆಸಕ್ತಿ ಹೊಂದಿದ ಅನೇಕ ಸಾಹಿತಿಗಳು ಮತ್ತು ಪತ್ರಕರ್ತರು ಬರೆದಿರುವುದನ್ನು ಅಲ್ಲೊಂದು, ಇಲ್ಲೊಂದು ಬಿಡಿ ಲೇಖನಗಳ ಮಾತ್ರ ಕಂಡುಬರುತ್ತವೆ. ಕಲಾಚಟುವಟಿಕೆಗಳ ಸಮಗ್ರಲೇಖನಗಳು, ಪುಸ್ತಕಗಳು ಕಾಣುವುದು ತುಂಬಾ ವಿರಳ. ಸ್ವಂತಹ ಅಕಾಡೆಮಿಯೇ ಎಷ್ಟೋ ಪುಸ್ತಕಗಳು ಪ್ರಕಟಿಸಿದರು. ಅಕಾಡೆಮಿಯ ಒಟ್ಟಾರೆ ಕಲಾ ಚಟುವಟಿಕೆಗಳ ಕುರಿತು ಸಮಗ್ರ ಇತಿಹಾಸದ ಪುಸ್ತಕ ದೊರಕದೆ ಇರುವುದು ವಿಷಾದನೀಯ ಸಂಗತಿ ಎನ್ನಬಹುದು. ಇಂಥಹ ಕೊರತೆಯನ್ನು ನೀಗಿಸುವ ಉದ್ದೇಶದಿಂದ ಸಂಶೋಧನಾ ಪ್ರಬಂಧವನ್ನು ಕೈಗೆತ್ತಿಕೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಕರ್ನಾಟಕ

ಲಲಿತಕಲಾ ಅಕಡೆಮಿಯ ಕಾರ್ಯವೈಖರ್ಯದ ಕುರಿತು ಕಲಾಭಿಮಾನಿಗಳಿಗೆ, ಕಲಾವಿದರಿಗೆ, ಯುವ ಕಲಾವಿದರಿಗೆ ಮತ್ತು ವಿದ್ಯಾರ್ಥಿಗಳಿಗೆ ಇದರ ಚರಿತ್ರೆಯನ್ನು ಅರಿತುಕೊಳ್ಳಲು ತುಂಬಾ ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಪ್ರಬಂಧವು ಮೂಡಿಬಂದಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧದವು ಸಂಶೋಧನೆಯ ಅಚ್ಚುಕಟ್ಟಾಗಿ ಕೈಗೊಳ್ಳುವ ಹಿನ್ನೆಲೆಯಲ್ಲಿ ಐದು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅಧ್ಯಯಗಳ ಸ್ವರೂಪವನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ವಯಕ್ತಿಕ ಹಾಗೂ ಸಾಮಾಜಿಕ ಉದ್ದೇಶವನ್ನು ಹೊಂದಲಾಗಿದೆ. ಸಂಶೋಧನೆಯ ಅಧ್ಯಯನಕ್ಕೆ ಬಳಸುವ ವೈಧಾನಿಕತೆ ಮತ್ತು ಪ್ರಸ್ತುತ ವಿಷಯದ ಕುರಿತಂತೆ ಹಾಗೂ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮಿಕ್ಷೆಯನ್ನು ಅಧ್ಯಯನ ಮಾಡುವದರ ಮೂಲಕ ಅಧ್ಯಯನಕ್ಕೆ ಗಟ್ಟಿಯಾದ ತಳಪಾಯವನ್ನು ಹಾಕಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಹುಟ್ಟು ಬೆಳವಣಿಗೆಯ ಮುಂತಾದ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅಕಾಡೆಮಿಯ ಆರಂಭದಿಂದ ಇಂದಿನವರೆಗಿನ ಒಂದು ಸ್ಥೂಲ ಚಿತ್ರಣವನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಮಗ್ರ ಕಲಾಚಟುವಟಿಕೆಗಳ ಕುರಿತು ವರ್ಗಿಕರಣ ಮಾಡಿಕೊಂಡು ಇಲ್ಲಿ ಹಂತ ಹಂತವಾಗಿ ಚರ್ಚಿಸಲಾಗಿದೆ. ಅಕಾಡೆಮಿಯ ಆಯೋಜಿಸಿದ ಕಲಾಶಿಬಿರ, ಕಲಾಸಂಚಾರ, ಕಲಾಪ್ರದರ್ಶನ, ಕಲಾಕಮ್ಮಟ, ವಿಚಾರಸಂಕಿರಣ, ಸಮ್ಮೇಳನ, ವಿದ್ಯಾರ್ಥಿಗಳಿಗೆ ಆರ್ಥಿಕ ನೆರೆವಿಗಾಗಿ ಶಿಷ್ಯವೇತನ, ಫೆಲೋಶಿಪ್, ಕಾರ್ಯಾಗಾರ ಮುಂತಾದವುಗಳನ್ನು ಚರ್ಚಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ, ದೃಶ್ಯಕಲೆಯ ಪುಸ್ತಕ ಪ್ರಕಟಣೆಯಲ್ಲಿ ಇಡೀ ಭಾರತದ ದೇಶೀಭಾಷೆಗಳಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗಣನೀಯ ಕೆಲಸವನ್ನು ಮಾಡಿದೆ. ಅದೇ ಹಾದಿಯಲ್ಲಿ ಹಲವು ದಿಟ್ಟ ಹೆಜ್ಜೆಗಳನ್ನು ಇಡುತ್ತಾ ಸಾಗುತ್ತಿದೆ. ಕನ್ನಡದ ಹಿರಿಯ ಸಮಕಾಲೀನ ಕಲಾವಿದರನೇಕರ ಕಲೆಯ ಕುರಿತು ಪ್ರಕಟಣೆಗಳು ಸಂಖ್ಯೆಯಿಂದ ಮಾತ್ರವೇ ಅಲ್ಲವೇ ಅಲ್ಲದೆ ಗುಣ ಮೌಲ್ಯದಿಂದಲೂ ಹೆಚ್ಚಿನದನ್ನು ಸಾಧಿಸಿರುವುದು ಸಹೃದಯರಾದ ತಮಗೆಲ್ಲಾ ಪರಿಚಿತ. ಕನ್ನಡದ ದೃಶ್ಯಕಲೆಯ ಕಲಾವಿದರೆ ಅಲ್ಲದೆ ಕಲೆ, ಅದರ ಹಲವು

ಮಗ್ಗಲುಗಳ, ನೋಟ ಪಲ್ಲಟಗಳ ಕುರಿತು ಈ ಪ್ರಕಟಣೆಗಳಲ್ಲಿ ಐತಿಹಾಸಿಕತೆಯ ಜತೆ ಜತೆಗೆ ಸಮಕಾಲೀನತೆಯನ್ನೂ ಬಿಂಬಿಸಲಾಗಿದೆ. ಈ ಪ್ರಕಟಣೆಗಳು ಕಲಾವಿದ್ಯಾರ್ಥಿಗಳಷ್ಟೇ ಆಸಕ್ತ ಕಲಾಭಿಮಾನಿಗಳಿಗೂ, ಕನ್ನಡ ಕಲೆಯ ಅಧ್ಯಾಯನಶೀಲರಿಗೂ ಉಪಯುಕ್ತ ಆಕರಗಳಾಗಿಯೂ ಮೂಡಿಬಂದಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ ಗ್ರಂಥಗಳನ್ನು ಸಂಕ್ಷಿಪ್ತವಾಗಿ ವಿವೇಚಿಸುವ ಮತ್ತು ವಿಶ್ಲೇಷಣೆ ಮಾಡುವಕಾರ್ಯವನ್ನು ಮಾಡಲಾಗಿದೆ.

ಐದನೆಯ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡಂತಹ ಮಹತ್ವದ ಫಲಿತಗಳನ್ನು ಈ ಅಧ್ಯಾಯನದಲ್ಲಿ ನೀಡಲಾಗಿದೆ.

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನೆಯ ಅಧ್ಯಯನ ಪ್ರಾರಂಭ-ಗೊಂಡಿರುವುದು ತೊಂಭತ್ತರ ದಶಕದಿಂದೀಚೆಗೆ, ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್., ಪಿಎಚ್.ಡಿಯಂತಹ ಪದವಿಯ ಹಿನ್ನೆಲೆಯಲ್ಲಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಯಲು ಮುಖ್ಯಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸ್‌ಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು. ವಿಶೇಷವಾಗಿ ಈ ಎಲ್ಲಾ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತ-ವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ಕಮರ್ಶಿಯಲ್ ಆರ್ಟಿಸ್ಟಾಗಿ ವೃತ್ತಿಜೀವನವನ್ನು ನಡೆಸಿಕೊಂಡು ಬರುತ್ತಿದ್ದರು. ಈ ಐದು ವರ್ಷದ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಅವರು ಪದವಿ ತರಗತಿಗೆ ಸೇರಲೇಬೇಕೆಂದರೆ ಒಂದು ವರ್ಷದ ಬ್ರಿಡ್ಜ್‌ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ.

ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು

ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮುಖ್ಯವಾಗಿ ಹಿಂದುಳಿಯಲು ಕಾರಣವಾಯಿತು. ಪದವಿಯ ಹಂತದಲ್ಲಿ ಬೆರಳೆಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಪ್ರಾರಂಭಗೊಂಡಿದ್ದು, ಅವು ಹೆಚ್ಚಾಗಿ ಪದವಿಹಂತಕ್ಕೆ ಮಾತ್ರ ಸೀಮಿತಗೊಂಡು ಕಾರ್ಯನಿರ್ವಹಿಸಿವೆ. ಅಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ ಎನ್ನಬಹುದು.

ಧಾರವಾಡ, ಗದಗ, ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಬೆಂಗಳೂರು ಈ ಕೆಲವು ಸ್ಥಳಗಳಲ್ಲಿ ಸ್ನಾತಕೋತ್ತರ ದೃಶ್ಯಕಲಾ ಪದವಿ ಕೋರ್ಸ್‌ಗಳು ಪ್ರಾರಂಭಗೊಂಡರೂ ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವು ಈ ಹಂತದಲ್ಲಿ ಪ್ರಮುಖವಾಗಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಪ್ರಜ್ಞೆಯ ಕೊರತೆಯಿಂದಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನು ಮಾತ್ರ ವಿದ್ಯಾರ್ಥಿಗಳು ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್, ಪಿಎಚ್.ಡಿ.ಯಂತಹ ಅಧ್ಯಯನಗಳಿಗೆ ಇಲ್ಲಿ ಅವಕಾಶವಿಲ್ಲದಂತಾಗಿ ಈ ಕ್ಷೇತ್ರದ ಸಂಶೋಧನೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯಲಿಲ್ಲ.

ಈ ಪರಂಪರೆ ತೊಂಭತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿತು. ತೊಂಭತ್ತರ ದಶಕದ ನಂತರದಲ್ಲಿ ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್., ಪಿಎಚ್.ಡಿ ಸಂಶೋಧನ, ಅಧ್ಯಯನ ಪ್ರಾರಂಭ-ಗೊಳ್ಳುವುದರ ಮೂಲಕ ಈ ವಾತಾವರಣ ಸ್ವಲ್ಪ ಬದಲಾಗಿ ಸ್ನಾತಕೋತ್ತರ ಹಂತದಲ್ಲಿ ಸಂಶೋಧನಾಧ್ಯಯನಕ್ಕೆ ಅವಕಾಶ ದೊರೆಯಿತು. ಇಲ್ಲಿ ಸ್ನಾತಕೋತ್ತರ ಹಂತದಲ್ಲಿ ಪ್ರಾಯೋಗಿಕತೆಗೆ ಮತ್ತು ಸಿದ್ಧಾಂತ ಪತ್ರಿಕೆಗಳಿಗೆ ಸಮಾನಾವಕಾಶ ಸಿಕ್ಕ ಕಾರಣ ದೃಶ್ಯಕಲಾ ಸಂಶೋಧನೆಯ ಹೊಸಪರಂಪರೆಗೆ ಈ ವಿಶ್ವವಿದ್ಯಾಲಯ ಹೊಸದಾರಿಯನ್ನು ಹಾಕಿಕೊಟ್ಟಿತು. ನಂತರದಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಸಂಶೋಧನೆಯ ಅಧ್ಯಯನಕ್ಕೆ ಅವಕಾಶಗಳು ದೊರಕಿವೆ.

ಈ ಕ್ಷೇತ್ರದಲ್ಲಿ ಸಂಶೋಧನಾಧ್ಯಯನವು ಈಗ ವಿಶ್ವವಿದ್ಯಾಲಯ ಮಟ್ಟದಲ್ಲಿ ಇನ್ನುಳಿದ ವಿಷಯಗಳಂತೆ ದೃಶ್ಯಕಲೆಗಳ ಸಂಶೋಧನೆಗೆ ಪ್ರಾಧಾನ್ಯ ಸಿಕ್ಕ ಕಾರಣವಾಗಿ ಈಗ ಸಾಕಷ್ಟು

ವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾಧ್ಯಯನದಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ. ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಎಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಎಚ್.ಡಿ. ಪ್ರಬಂಧಗಳು ೨. ಎಂ.ಫಿಲ್. ಪ್ರಬಂಧಗಳು ೩. ಡಿ.ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಎಸ್. ಸಿ. ಪಾಟೀಲ ಅವರು **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ**[೨] ಎಂಬ ಕಿರುಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ಕಲಾವಿದರೊಬ್ಬರು ದೃಶ್ಯಕಲೆಯಲ್ಲಿ ನಡೆಸಿದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರುಸಂಶೋಧನಾ ಅಧ್ಯಯನವಾಗಿದೆ.

೧೯೮೭ರಲ್ಲಿ ಡಾ. ಚೂಡಾಮಣಿ ನಂದಗೋಪಾಲರ **ಡ್ಯಾನ್ಸ್ ಆಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್**[೩] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಪೂರಕವಾಗಿ ಚಿತ್ರಕಲೆಯ ಕುರಿತು ಪ್ರಸ್ತಾಪಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ "ಡಾ. ಬಿ. ಕೆ. ಹಿರೇಮಠರ **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೪] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಚರ್ಚೆಗೊಂಡಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಒಂದೆರಡು ಸಣ್ಣ ಪ್ರಯತ್ನಗಳಾಗಿವೆ.

---

೦೨. ಎಸ್. ಸಿ. ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩.

೦೩. ಡಾ. ಚೂಡಾಮಣಿ ನಂದಗೋಪಾಲ: ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂ–ಟಿಂಗ್ಸ್ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೮೭

೦೪. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೭

೧. ಪಿಹೆಚ್.ಡಿ. ಮಹಾಪ್ರಬಂಧಗಳು

ಚಿತ್ರಕಲೆಯನ್ನೇ ಕುರಿತು ಕರ್ನಾಟಕದಲ್ಲಿ ಸಂಶೋಧನಾಧ್ಯಯನವು ಪೂರ್ಣ-ಪ್ರಮಾಣದಲ್ಲಿ ಕಂಡುಬಂದಿರುವುದು ೧೯೯೧ರಲ್ಲಿ. ಇಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೫] ಈ ಮಹಾಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ. ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೬], ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು**[೭], ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ॥ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**[೮], ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ**[೯], ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ**[೧೦], ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ**[೧೧], ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ- ಕಲಾಕೃತಿಗಳು : ಒಂದು ಅಧ್ಯಯನ**[೧೨], ಡಾ. ಶಂಕ್ರಪ್ಪ ಕೋಲ್ಕಾರ್

---

೦೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ. ೧೯೯೧.

೦೬. ಡಾ. ಅ.ಲ.ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೯೮.

೦೭. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮.

೦೮. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೯೭

೦೯. ಡಾ. ಯಾದಪ್ಪ ಪರದೇಶಿ :ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೧೦. ಡಾ. ಶಿವಾನಂದ ಬಂಟನೂರು : ಕರ್ನಾಟಕ ಜನಪದ ಶಿಲ್ಪಕಲೆ-ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨.

೧೧. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ ಹಂಪಿ, ೨೦೦೨.

೧೨. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ. ಎ.ಚೆಟ್ಟಿಯವರ ಜೀವನ- ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೩], ಡಾ. ಸೌಮ್ಯಾ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೪], ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್**[೧೫], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦)**[೧೬], ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ**[೧೭], ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೧೮], ಇದು ಡಾ. ಎಸ್. ಸಿ. ಪಾಟೀಲ ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧವಾಗಿದೆ.

೨೦೦೪ರಲ್ಲಿ ಡಾ. ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦)**[೧೯], ಡಾ. ಶಿವಕುಮಾರ. ಜಿ. ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೦], ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ**[೨೧],

---

೧೩. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೪. ಡಾ. ಸೌಮ್ಯಾ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೫. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೬. ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೧೭. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೧೮. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ. ೨೦೦೨.

೧೯. ಡಾ. ಎಂ.ವ್ಹಿ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೪

೨೦. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಎಚ್.ಡಿ. ಮಹಾಪ್ರಬಂಧ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರಗಿ ೨೦೦೪.

೨೧. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, (ಅ.ಪ್ರ, ಪಿಎಚ್.ಡಿ. ಮ.ಪ್ರ), ಮೈಸೂರು ವಿ.ವಿ., ಮೈಸೂರು. ೨೦೦೪.

೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೨೨], ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೩], ಡಾ. ಎಚ್. ಎನ್. ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೪], ಡಾ. ಎಸ್. ವಿ. ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ**[೨೫], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೬], ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ**[೨೭], ಡಾ. ಗೀತಾಂಜಲಿ ಬಿ. ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**[೨೮], ಡಾ. ರಾಠೋಡ್ ಅವರ **ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ**[೨೯], ೨೦೦೮ರಲ್ಲಿ ಡಾ. ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರಕಲಾವಿದ ಡಾ. ಎಸ್. ಎಮ್. ಪಂಡಿತ್**[೩೦], ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**[೩೧], ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು**[೩೨], ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ,**[೩೩] ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ,**[೩೪] ಡಾ. ಮಂಟಗಿ ಅವರ **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ**

---

೨೨. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ.), ಕನ್ನಡ ವಿ.ವಿ., ಹಂಪಿ– ೨೦೦೪

೨೩. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ.), ಕನ್ನಡ ವಿ.ವಿ. ಹಂಪಿ–೨೦೦೪

೨೪. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೫.

೨೫. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ – ಕನ್ನಡ ವಿ.ವಿ. ಹಂಪಿ–೨೦೦೫.

೨೬. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರಗಿ–೨೦೦೬

೨೭. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರಗಿ–೨೦೦೭

೨೮. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ಹಂಪಿ–೨೦೦೭.

೨೯. ಡಾ. ಲಕ್ಷ್ಮಣಸಿಂಗ್ ಆರ್. ರಾಠೋಡ : ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ಮೈಸೂರು–೨೦೦೭.

೩೦. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮ.ಪ್ರ, ಗು.ವಿ.ವಿ, ಕಲಬುರಗಿ–೨೦೦೮.

೩೧. ಡಾ. ವಿಶ್ವನಾಥ ಎ.ಎಸ್. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೦೮.

೩೨. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೦೮.

೩೩. ಡಾ. ಪಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ – ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ–೨೦೦೮.

೩೪. ಡಾ. ಲಕ್ಷ್ಮೀಪತಿ ಜಿ. : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೦೮.

– **ಒಂದು ಅಧ್ಯಯನ,**[೩೫] ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ ಜಿಲ್ಲೆಯನ್ನು ಅನುಲಕ್ಷಿಸಿ.**[೩೬]

೨೦೧೦ರಲ್ಲಿ ಡಾ. ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು,**[೩೭] ಡಾ. ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ,**[೩೮] ಡಾ. ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ.**[೩೯] ೨೦೧೧ರಲ್ಲಿ ಡಾ. ಕಾಶಿನಾಥ ಡಿ. ವಡ್ಡರ ಅವರ **ಶಾಂತಿನಿಕೇತನದ ಭಿತ್ತಿಚಿತ್ರಗಳು,**[೪೦] ಡಾ. ಸತೀಶಕುಮಾರ ವಲ್ಲ್ಯೇಪೂರೆ ಅವರ **ಜೆ. ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು,**[೪೧] ಡಾ. ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ,**[೪೨] ೨೦೧೨ರಲ್ಲಿ ಡಾ. ಭಾರತಿ ಮರವಂತಿ ಅವರ **ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ,**[೪೩] ಡಾ. ಕಾಮಾಕ್ಷಿ ಸಿ. ಸೊಪ್ಪಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ,**[೪೪] ಡಾ. ಪರಶುರಾಮ ಪಿ. ಅವರ **ಕರ್ನಾಟಕದ ಕಲಾಗ್ಯಾಲರಿಗಳು ಒಂದು ವಿಶ್ಲೇಷಣಾತ್ಮಕ ಅಧ್ಯಯನ,**[೪೫] ಡಾ. ಷಾಹಿದ್ ಪಾಷಾ ಅವರ **ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು.**[೪೬]

---

೩೫. ಡಾ. ಮಂಟಗಿ : ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಕಲಬುರಗಿ – ೨೦೦೯

೩೬. ಡಾ. ರೆಹಮಾನ ಪಟೇಲ : ಕರ್ನಾಟಕದ ಬಿದ್ರಿಕಲೆ–ಒಂದು ಅಧ್ಯಯನ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರಗಿ–೨೦೦೯

೩೭. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ– ೨೦೧೦

೩೮. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು–ಒಂದು ಅಧ್ಯಯನ, ಪಿಎಚ್.ಡಿ. ಮ.ಪ್ರ., ಕನ್ನಡ ವಿ.ವಿ. ಹಂಪಿ ೨೦೧೦

೩೯. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ, (ಅ.ಪ್ರ ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ. ಹಂಪಿ – ೨೦೧೦.

೪೦. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನಿಕೇತನದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಕಲಬುರಗಿ–೨೦೧೧

೪೧. ಡಾ. ಸತೀಶಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮ.ಪ್ರ., ಗು.ವಿ.ವಿ., ಕಲಬುರಗಿ–೨೦೧೧.

೪೨. ಡಾ. ಶಂಕರ ಕುಂದಗೋಳ : ಕರ್ನಾಟಕದ ಗಂಜೀಫಾ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೧

೪೩. ಡಾ. ಭಾರತಿ ಮರವಂತಿ : ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಮೈಸೂರು ವಿ.ವಿ. ೨೦೧೨

೪೪. ಡಾ. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ. ೨೦೧೨

೪೫. ಡಾ. ಪರಶುರಾಮ ಪಿ. : ಕರ್ನಾಟಕದ ಕಲಾಗ್ಯಾಲರಿಗಳು – ಒಂದು ವಿಶ್ಲೇಷಣಾತ್ಮಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ. ೨೦೧೨

೪೬. ಡಾ. ಶಾಹೆದ್ ಪಾಷಾ : ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ. ೨೦೧೨

೨೦೧೩ರಲ್ಲಿ ಡಾ. ಬಿ. ಎಲ್ ಲಮಾಣಿ ಅವರ **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,**[೪೭] ಡಾ. ರೇಣುಕಾ ಮಾರ್ಕಾಂಡೆಯವರ **ಕರ್ನಾಟಕದ ವೈಷ್ಣವಪರಂಪರೆಯ ಚಿತ್ರಕಲೆ,**[೪೮] ಡಾ. ಶಶಿಕಲಾ ನಂದನಗೌಡ ಅವರ **ಕರ್ನಾಟಕದ ಹುದುಗು ಕಲೆ,**[೪೯] ಡಾ. ಕೃಷ್ಣೇಗೌಡ ಹೆಚ್. ಎನ್ ಅವರ **ಕರ್ನಾಟಕದ ಬೌದ್ಧ ಚಿತ್ರಕಲೆ,**[೫೦] ಡಾ. ಬಿ. ಎಂ. ಪಾಟೀಲ ಅವರ **ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ,**[೫೧] ಡಾ. ಕೃಷ್ಣವೇಣಿ ಅವರ **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,**[೫೨] ಡಾ. ರವಿ ವಸಾರಾಮ ನಾಯಕ ಅವರ **ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು,**[೫೩] ಡಾ. ಮಹಾಂತೇಶ ಎಂ. ಪಲದಿನ್ನಿ ಅವರ **ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು,**[೫೪] ಡಾ.ಪಿ.ಬಿ.ಗವಾನಿ ಅವರ **ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ,**[೫೫] ಡಾ. ಸುಚಿತ್ರಾ ಜಿ. ಲಿಂಗದಳ್ಳಿ ಅವರ **ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು,**[೫೬] ಡಾ. ಬಸವಯ್ಯ ಗವಿಮಠ ಅವರ **ಬಾಗಲಕೋಟ ಜಿಲ್ಲೆಯ ಚಿತ್ರಕಲೆ,**[೫೭] ಡಾ. ಸುಬ್ಬಯ್ಯ ಮಹಾದೇವಯ್ಯ ನೀಲಾ ಅವರ **ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು – ಒಂದು ಅಧ್ಯಯನ,**[೫೮] ೨೦೧೫ರಲ್ಲಿ ಡಾ. ಜ್ಯೋತಿ ಎಸ್. ವೈಧ್ಯ ಅವರ **ಉತ್ತರಕನ್ನಡ ಜಿಲ್ಲೆಯ ಚಿತ್ರಕಲೆ,**[೫೯] ಡಾ. ಪರಮಶಿವಂ ಅವರ **ಫೋಕ್ ಪೆಯಿಂಟಿಂಗ್ಸ್ ಆಫ್ ಆಂಧ್ರಪ್ರದೇಶ**[೬೦], ೨೦೧೬ರಲ್ಲಿ ಡಾ. ಅಶೋಕ ಎಸ್. ಶಟಕಾರ ಅವರ **ಡಾ. ಜೆ. ಎಸ್. ಖಂಡೇರಾವ್ ಬದುಕು ಮತ್ತು ಕಲಾಕೃತಿಗಳು**[೬೧], ೨೦೧೭ರಲ್ಲಿ

---

೪೭. ಡಾ. ಬಿ.ಎಲ್. ಲಮಾಣಿ : ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೪೮. ಡಾ. ರೇಣುಕಾ ಮಾರ್ಕಂಡೆ : ಕರ್ನಾಟಕದ ವೈಷ್ಣವ ಪರಂಪರೆಯ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೪೯. ಡಾ. ಶಶಿಕಲಾ ನಂದನಗೌಡ : ಕರ್ನಾಟಕದ ಹುದುಗುಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೦. ಡಾ. ಕೃಷ್ಣೇಗೌಡ ಹೆಚ್. ಎನ್ : ಕರ್ನಾಟಕದ ಬೌದ್ಧಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೧. ಡಾ. ಬಿ. ಎಂ. ಪಾಟೀಲ : ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ, ಪಿಎಚ್.ಡಿ. ಮ.ಪ್ರ., ಕ.ವಿ.ಹಂಪಿ. ೨೦೧೩

೫೨. ಡಾ. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೩. ಡಾ. ರವಿ ವಸಾರಾಮ ನಾಯಕ : ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೪. ಡಾ. ಮಹಾಂತೇಶ ಎಂ. ಪಲದಿನ್ನಿ : ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು, ಪಿಎಚ್.ಡಿ. ಮ.ಪ್ರ., ಕ.ವಿ.ವಿ.ಹಂಪಿ. ೨೦೧೩

೫೫. ಡಾ. ಪಿ.ಬಿ. ಗವಾನಿ : ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೬. ಡಾ. ಸುಚಿತ್ರಾ ಜಿ. ಲಿಂಗದಳ್ಳಿ : ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೭. ಡಾ. ಬಸವಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೩

೫೮. ಡಾ. ಸುಬ್ಬಯ್ಯ ಮಹಾದೇವಯ್ಯ ನೀಲಾ : ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೩

೫೯. ಡಾ. ಜ್ಯೋತಿ ಎಸ್. ವೈಧ್ಯಾ : ಉತ್ತರಕನ್ನಡ ಜಿಲ್ಲೆಯ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೫

೬೦. ಡಾ. ಪರಮಶಿವಂ : ಫೋಕ್ ಪೆಯಿಂಟಿಂಗ್ಸ್ ಆಫ್ ಆಂಧ್ರಪ್ರದೇಶ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೫

೬೧. ಡಾ. ಅಶೋಕ ಶಟಕಾರ : ಡಾ. ಜೆ. ಎಸ್. ಖಂಡೇರಾವ್ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೬

ಬಸವರಾಜ ಅನಗವಾಡಿ ಅವರ **ಬಸವಣ್ಣನವರ ಕುರಿತ ವರ್ಣಚಿತ್ರಕಲೆ ವಿಶ್ಲೇಷಣಾತ್ಮಕ ಅಧ್ಯಯನ,**[೧೨] ಸಂತೋಷಕುಮಾರ ಎಂ. ನಾಗರಾಳ ಅವರ **ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)**[೧೩], ಡಾ. ಜೈರಾಜ ಅವರ **ಕನ್ನಡ ಗ್ರಂಥಗಳ ರಕ್ಷಾಪುಟ ಚಿತ್ರಕಲೆ**[೧೪], ಡಾ. ರಾಜೀವ ಎಂ.ವೈ ಅವರ **ಕರ್ನಾಟಕ ಜೈನ ಚಿತ್ರಕಲಾ ಪರಂಪರೆ**[೧೫], ಡಾ. ಮಲ್ಲಿಕಾರ್ಜುನ ಕೆ. ಜಿ. ಅವರ **ವಿಜಯನಗರ ಚಿತ್ರಕಲಾ ಪರಂಪರೆ**[೧೬], ಡಾ. ವೈಶಾಲಿಬಾಯಿ ಕಾಂಬಳೆ ಅವರ **ಸಿ ಚಂದ್ರಶೇಖರ ಕಲಾಕೃತಿಗಳ ಅಧ್ಯಯನ**[೧೭], ಡಾ. ಡಿ. ಎಸ್. ಶ್ವೇತ ಅವರ **ಚಿ ಸು. ಕೃಷ್ಣಸೆಟ್ಟಿಯವರ ದೃಶ್ಯಕಲಾ ಸಾಹಿತ್ಯ ಮತ್ತು ಕಲಾಕೃತಿಗಳು**[೧೮], ಡಾ. ಡಿ. ಆರ್. ಸುರೇಂದ್ರನಾಥ ಅವರ **ದಕ್ಷಿಣ ಕರ್ನಾಟಕದ ಭಿತ್ತಿಚಿತ್ರಕಲೆ**[೧೯].

೨೦೧೮ರಲ್ಲಿ ಡಾ. ಸಿ. ಡಿ. ಜಟ್ಟಣ್ಣನವರ **ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳು**[೨೦], ಡಾ. ಜಿ. ಬಿ. ವೀರಾಚಾರ್ ಅವರ **ಹೈದರಾಬಾದ ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲಾವಿದರು**[೨೧] ಇವು ದೃಶ್ಯಕಲೆಗಳ ಕುರಿತು ಬಂದ ಪಿಎಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನಾಧ್ಯಯನ ಕೈಗೊಂಡಿದ್ದಾರೆ.ಇವು ದೃಶ್ಯಕಲೆಗಳ ಕುರಿತು ಬಂದ ಪಿಎಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನಾಧ್ಯಯನ ಕೈಗೊಂಡಿದ್ದಾರೆ.

೨. ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು,

---

೧೨. ಡಾ. ಬಸವರಾಜ ಅನಗವಾಡಿ : ಬಸವಣ್ಣನವರ ಕುರಿತ ವರ್ಣಚಿತ್ರಕಲೆ ವಿಶ್ಲೇಷಣಾತ್ಮಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೧೩. ಡಾ. ಸಂತೋಷಕುಮಾರ ಎಂ. ನಾಗರಾಳ : ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ (ಉತ್ತರಕರ್ನಾಟಕವನ್ನು ಅನುಲಕ್ಷಿಸಿ), ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೭

೧೪. ಡಾ. ಜೈರಾಜ : ಕನ್ನಡ ಗ್ರಂಥಗಳ ರಕ್ಷಾಪುಟ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೧೫. ಡಾ. ರಾಜೀವ ಎಂ.ವೈ : ಕರ್ನಾಟಕ ಜೈನ ಚಿತ್ರಕಲಾ ಪರಂಪರೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೧೬. ಡಾ. ಮಲ್ಲಿಕಾರ್ಜುನ ಕೆ.ಜಿ. : ವಿಜಯನಗರ ಚಿತ್ರಕಲಾ ಪರಂಪರೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೧೭. ಡಾ. ವೈಶಾಲಿಬಾಯಿ ಕಾಂಬಳೆ : ಸಿ ಚಂದ್ರಶೇಖರ ಕಲಾಕೃತಿಗಳ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೧೮. ಡಾ. ಡಿ. ಎಸ್. ಶ್ವೇತ : ಚಿ. ಸು. ಕೃಷ್ಣಸೆಟ್ಟಿಯವರ ದೃಶ್ಯಕಲಾ ಸಾಹಿತ್ಯ ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೧೯. ಡಾ. ಡಿ. ಆರ್. ಸುರೇಂದ್ರನಾಥ : ದಕ್ಷಿಣ ಕರ್ನಾಟಕದ ಭಿತ್ತಿಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

೨೦. ಸಿ. ಡಿ. ಜಟ್ಟಣ್ಣನವರ : ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಧಾರವಾಡ, ೨೦೧೮

೨೧. ಡಾ. ಜಿ. ಬಿ. ವೀರಾಚಾರ್ : ಹೈದರಾಬಾದ ಕರ್ನಾಟಕ ಸಾಂಪ್ರದಾಯಿಕ ಶಿಲ್ಪಕಲಾವಿದರು, ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ. ಹಂಪಿ. ೨೦೧೮

ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್. ಪ್ರಬಂಧಗಳು ಹೀಗಿವೆ. ೨೦೦೧ರಲ್ಲಿ ದೇವದಾಸ ಕಳಸದ ಇವರ **ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ,**[೭೨] ೨೦೦೫ರಲ್ಲಿ ಬಂದ ಆನಂದ ಪೂಜಾರರ **ಕರಾವಳಿಯ ಕಾವಿ ಚಿತ್ರಕಲೆ**[೭೩] ಡಿ.ವಿ. ಉಪಾಧ್ಯ ಅವರ **ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ,**[೭೪] ೨೦೧೦ರಲ್ಲಿ ಎಮ್.ಎಸ್. ಮೂರ್ತಿ ಅವರ **ಮಕ್ಕಳ ಮನಸ್ಸಿನ ಚಿತ್ರಗಳು,**[೭೫] ೨೦೧೩ರಲ್ಲಿ ಜಿ. ಎಸ್. ಭೂಸಗೊಂಡ ಅವರ **ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್. ಕೋಟ್ಯಾಳಕರ - ಒಂದು ಅಧ್ಯಯನ,**[೭೬] ಹೀಗೆ ಹಲವು ಡಿ.ಲಿಟ್ ಮಹಾಪ್ರಬಂಧಗಳು ಹೊರಬಂದಿವೆ. ಈ ಡಿ.ಲಿಟ್. ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಪರಿಗಣಿಸಿ, ಕನ್ನಡ ವಿಶ್ವವಿದ್ಯಾಲಯವು ತಜ್ಞರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್. ಸಂಶೋಧನ ಅಧ್ಯಯನಕ್ಕೆ ಅವಕಾಶವಿರುವುದು ಗಮನಾರ್ಹ ಅಂಶವಾಗಿದೆ.

೩. ಎಂ.ಫಿಲ್. ಅಧ್ಯಯನಗಳು

ಕರ್ನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭ-ಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ, ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್. ಸಂಶೋಧನಾ ಅಧ್ಯಯನಗಳು ಹೀಗಿವೆ. ೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **ಚಿತ್ರಕಲಾವಿದ ಜೆ.ಎಸ್. ಖಂಡೇರಾವ : ಒಂದು ಅಧ್ಯಯನ,**[೭೭] ೨೦೦೩ರಲ್ಲಿ ಎ.ಎಸ್. ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು,**[೭೮] ೨೦೦೫ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ ಎಂ.ವಿ.

---

೭೨. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೭೩. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫.

೭೪. ಡಾ. ಡಿ.ವಿ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ - ೨೦೦೫

೭೫. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೭೬. ಡಾ. ಜಿ. ಎಸ್. ಭೂಸಗೊಂಡ: ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್ ಕೋಟ್ಯಾಳಕರ - ಒಂದು ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೭೭. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ - ೨೦೦೨.

೭೮. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್. ಪ್ರ, ಕನ್ನಡ ವಿ.ವಿ. ಹಂಪಿ - ೨೦೦೩

ಮಿಣಜಗಿಯವರ **ಜೀವನ ಮತ್ತು ಕಲಾಬದುಕು,**[೭೯] ಶಂಕರ ಕುಂದಗೋಳರ **ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು,**[೮೦] ೨೦೦೬ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **ವಿಜಯನಗರದ ಭಿತ್ತಿ ಚಿತ್ರಕಲೆ,**[೮೧] ರಾಜಕುಮಾರ ಎಸ್. ಕಾಳೆ ಅವರ **ಔಂಧ್ ಗ್ಯಾಲರಿ,**[೮೨] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು,**[೮೩] ಬಿ.ಎಂ. ಪಾಟೀಲರ **ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು,**[೮೪] ಉಮೇಶ ಎ.ಎಸ್. **ಕರ್ನಾಟಕ ಜೈನ ಚಿತ್ರಕಲೆ,**[೮೫] ರವಿ ವಸಾರಾಮ ನಾಯಕರ **ಕಿನ್ನಾಳ ಕಲೆ,**[೮೬] ಶಶಿಕಾಂತ ಬಸರಿಕಟ್ಟಿಯವರ **ಕಲಘಗಿಯ ಚಿತ್ರಕಲೆ,**[೮೭] ಶೈಲಾಬರಡೋಲರ **ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು,**[೮೮] ಎಂಬ ಪ್ರಬಂಧಗಳು ಹೊರಬಂದಿವೆ.

೨೦೦೮ರಲ್ಲಿ ಕೃಷ್ಣವೇಣಿ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೮೯] ಯೋಗೀಶ ಹೆಚ್. **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ**[೯೦], ಮಹಾಕೊಟೇಶ್ವರಗೌಡ ಪಾಟೀಲ **ಬೆಳಗಾವಿ ಜಿಲ್ಲೆಯ ಚಿತ್ರಕಲೆ,**[೯೧] ಸುರೇಶ ಬಡಿಗೇರರ **ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ,**[೯೨] ಸಂತೋಷಕುಮಾರ ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ,**[೯೩] ಜಯರಾಜ ಚಿಕ್ಕಪಾಟೀಲರ **ಕರ್ನಾಟಕದ ಜಾಹೀರಾತುಗಳಲ್ಲಿಸಾಂಸ್ಕೃತಿಕ ನೆಲೆಗಳು,**[೯೪] ಮಹೇಶ ಉಮತಾರ ಅವರ **ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ,**[೯೫] ಗಿರಿಜಾ ಬಿರಾದಾರರ **ವಿಜಾಪೂರ ಜಿಲ್ಲೆಯ ಚಿತ್ರಕಲೆ,**[೯೬] ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ**

---

೭೯. ಸಿ.ಡಿ. ಜಟ್ಟೆಣ್ಣವರ: ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ-೨೦೦೫.

೮೦. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ.ಹಂಪಿ. ೨೦೦೬

೮೧. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೬.

೮೨. ರಾಜಕುಮಾರ ಎಸ್. ಕಾಳೆ : ಔಂದ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭.

೮೩. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು – ೨೦೦೭.

೮೪. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೫. ಉಮೇಶ ಎ.ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೬. ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೭. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭.

೮೮. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೯. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೮

೯೦. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೯೧. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೯೨. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೯೩. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೮

೯೪. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೮

೯೫. ಮಹೇಶ ಉಮತಾರ : ಬಿ.ಪಿ. ಬಾಯಿರಿ : ಕಲೆ ಮತ್ತು ಕಲಾಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೯೬. ಗಿರಿಜಾ ಬಿರಾದಾರ : ವಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

ಚಿತ್ರಕಲೆ,[೯೭] ಕೃಷ್ಣಗೌಡ ಹೆಚ್.ಎನ್. ಅವರ **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ,**[೯೮] ಮಹಾಂತೇಶ ಪಲದಿನ್ನಿ ಅವರ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು,**[೯೯] ಮತ್ತು ೨೦೦೯ರಲ್ಲಿ ಕಾಂತರಾಜ ಅವರ **ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ,**[೧೦೦] ರಂಗಸ್ವಾಮಿ ಅವರ **ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ,**[೧೦೧] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೧೦೨] ೨೦೧೦ ರಲ್ಲಿ ಭಾನುಮತಿ ಕೆ.ಎಲ್. ಅವರ **ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು,**[೧೦೩] ದಿನೇಶ ಬಿ. ಅವರ **ಚನ್ನಪಟ್ಟಣದ ಚಿತ್ತಾರ ಗೊಂಬೆಗಳು,**[೧೦೪] ವಾದಿರಾಜ ಎ. ಅವರ **ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು,**[೧೦೫] ಚಿಂತಾಮಣಿ ಅವರ **ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ.**[೧೦೬]

೨೦೧೨ರಲ್ಲಿ ಮಲ್ಲಿಕಾರ್ಜುನ ಕೆ.ಜಿ. ಅವರ **ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು,**[೧೦೭] ರಾಜೀವ್. ಎಂ.ವೈ ಅವರ **ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು,**[೧೦೮] ರಾಘವೇಂದ್ರ ಅವರ **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೧೦೯] ವೈಶಾಲಿ ಕೆ. ಕಾಂಬಳೆ ಅವರ **ಬೀದರ ಜಿಲ್ಲೆಯ ಚಿತ್ರಕಲೆ,**[೧೧೦] ಶಶಿಕಲಾ ಜಿ.ವಿ. ಅವರ **ಕರ್ನಾಟಕದ ವ್ಯಂಗ್ಯ ಚಿತ್ರಕಲೆ,**[೧೧೧] ಎನ್.ಜಿ. ಅಂಬರೀಶ್ ಅವರ **ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ,**[೧೧೨] ಸುರೇಂದ್ರನಾಥ ಡಿ.ಆರ್. ಅವರ **ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ,**[೧೧೩] ಶ್ವೇತಾ ಡಿ.ಎಸ್. ಅವರ **ರಾಜ**

---

೯೭. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೯೮. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೯೯. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೧೦೦. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯

೧೦೧. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯

೧೦೨. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೯

೧೦೩. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ : ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦

೧೦೪. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೧೦೫. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೧೦೬. ರೇವಣಪ್ಪ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೧೦

೧೦೭. ಮಲ್ಲಿಕಾರ್ಜುನ ಕೆ.ಜಿ. : ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೮. ರಾಜೀವ ಎಂ.ವೈ. : ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೦೯. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೧೦. ವೈಶಾಲಿ ಕೆ. ಕಾಂಬಳೆ : ಬೀದರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೧೧. ಶಶಿಕಲಾ ಜಿ.ವಿ. : ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೧೨. ಎನ್. ಜಿ. ಅಂಬರೀಶ್ : ಕರ್ನಾಟಕದ ಅಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೧೩. ಸುರೇಂದ್ರನಾಥ ಡಿ. ಆರ್. : ಕರಾವಳಿ ಕರ್ನಾಟಕದ ಕ್ರೈಸ್ತಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ,[೧೧೪] ಮಹಾದೇವಪ್ಪ ಸಣತಂಗಿಯವರ **ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ**[೧೧೫]. ೨೦೧೩ರಲ್ಲಿ ದಯಾನಂದ ಕೋಳಿ ಅವರ **ಕೊಪ್ಪಳ ಜಿಲ್ಲೆಯ ಚಿತ್ರಕಲೆ,**[೧೧೬] ಸವಿತಾಬಡಿಗೇರ ಅವರ **ಧಾರವಾಡ ಜಿಲ್ಲೆಯ ಚಿತ್ರಕಲೆ,**[೧೧೭] ಹೇಮಂತಕುಮಾರ ಅವರ **ಮೈಸೂರು ಜಿಲ್ಲೆಯ ಚಿತ್ರಕಲೆ,**[೧೧೮] ಬಸವರಾಜ ಕಲೆಗಾರ ಅವರ **ಯಾದಗಿರಿ ಜಿಲ್ಲೆಯ ಚಿತ್ರಕಲೆ**[೧೧೯], ೨೦೧೪ರಲ್ಲಿ ಡಿ. ಕೆ. ಕೀರ್ತಿವರ್ಮ ಅವರ **ಕೆ ರಾಮಚಂದ್ರನ್‌ರವರ ಕಲೆ ಮತ್ತು ಬದುಕು,**[೧೨೦] ವಿಶ್ವನಾಥ್ ಹೆಚ್. ಹಂಡಿ ಅವರ **ಕೆ. ವಿ. ಸುಬ್ರಹ್ಮಣ್ಯ ಅವರ ದೃಶ್ಯಕಲಾ ಸಾಹಿತ್ಯ,**[೧೨೧] ಗಾಯತ್ರಿ ಮಂತ ಅವರ **ಪಿ. ಎಸ್. ಕಡೇಮನಿಯವರ ಕಲೆ ಮತ್ತು ಬದುಕು,**[೧೨೨] ಎಲ್. ಟಿ. ಮಂಜುಳಾಬಾಯಿ ಅವರ **ಕೆ. ಜ್ಞಾನೇಶ್ವರ್‌ರವರ ಕಲೆ ಮತ್ತು ಬದುಕು,**[೧೨೩] ಸಾವಿತ್ರಿ ಟೆಂಕಲಿ ಅವರ **ಎಂ. ಆರ್. ಬಾಳೇಕಾಯಿಯವರ ಕಲೆ ಮತ್ತು ಬದುಕು,**[೧೨೪] ಖಾದರ್‌ಶಾಬ್ ಇ. ಗುಳೇದಗುಡ್ಡ ಅವರ **ಬಹುಮುಖ ಕಲಾಸಾಧಕ ವಿ.ಜಿ. ಅಂದಾನಿ,**[೧೨೫] ಮಾಯಾದೇವಿ ಮಮ್ಮಾ ಅವರ **ಎ. ಎಸ್. ಪಾಟೀಲ್‌ರವರ ಕಲೆ ಮತ್ತು ಬದುಕು,**[೧೨೬] ರಾಜಪ್ಪ ಹೆಚ್. ಅವರ **ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ,**[೧೨೭] ೨೦೧೫ರಲ್ಲಿ ಅಶೋಕ ಚಂ. ನಡುವಿನಮನಿ ಅವರ **ಹೈದ್ರಬಾದ ಕರ್ನಾಟಕದ ಭಾವಚಿತ್ರಕಲಾವಿದರ ಒಂದು ಅಧ್ಯಯನ**[೧೨೮], ಆಸೆಂಗಪ್ಪ ರಾ. ಗುಳೇದಗುಡ್ಡ ಅವರ **ದೃಶ್ಯಕಲಾ ಕ್ಷೇತ್ರಕ್ಕೆ ಅಕ್ಕಿಮನೆತನದ ಕೊಡುಗೆ**[೧೨೯] ನಟರಾಜ ಶಿಲ್ಪಿ ಅವರ **ಕನಗನಹಳ್ಳಿಯ ಸ್ತೂಪ ಶಿಲ್ಪಗಳು**[೧೩೦],

---

೧೧೪. ಶ್ವೇತಾ ಡಿ. ಎಸ್. : ರಾಜಾ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೧೫. ಮಹಾದೇವಪ್ಪಸಣತಂಗಿ : ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨

೧೧೬. ದಯಾನಂದ ಕೋಳಿ : ಕೊಪ್ಪಳ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೧೭. ಸವಿತಾ ಬಡಿಗೇರ : ಧಾರವಾಡ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೧೮. ಹೇಮಂತಕುಮಾರ : ಮೈಸೂರು ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೧೯. ಬಸವರಾಜ ಕಲೆಗಾರ : ಯಾದಗಿರಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩

೧೨೦. ಡಿ. ಕೆ. ಕೀರ್ತಿವರ್ಮ : ಕೆ. ರಾಮಚಂದ್ರನ್ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೧. ವಿಶ್ವನಾಥ ಹೆಚ್. ಹಂಡಿ : ಸುಬ್ರಹ್ಮಣ್ಯಂ ಅವರ ದೃಶ್ಯಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೨. ಗಾಯತ್ರಿ ಮಂತ : ಪಿ. ಎಸ್. ಕಡೇಮನಿ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೩. ಎಲ್. ಟಿ. ಮಂಜುಳಾಬಾಯಿ : ಕೆ. ಜ್ಞಾನೇಶ್ವರ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೪. ಸಾವಿತ್ರಿ ಟೆಂಕಲಿ : ಎಂ. ಆರ್. ಬಾಳೇಕಾಯಿ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೫. ಖಾದರ್‌ಶಾಬ್ ಇ. ಗುಳೇದಗುಡ್ಡ : ಬಹುಮುಖ ಕಲಾಸಾಧಕ ವಿ. ಜಿ. ಅಂದಾನಿ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೬. ಮಾಯಾದೇವಿ ಮಮ್ಮಾ : ಎ. ಎಸ್. ಪಾಟೀಲ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೭. ರಾಜಪ್ಪ ಹೆಚ್. : ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೮. ಅಶೋಕ ಚಂ. ನಡುವಿನಮನಿ : ಹೈದ್ರಾಬಾದಕರ್ನಾಟಕದ ಭಾವಚಿತ್ರಕಲಾವಿದರ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

೧೨೯. ಆಸೆಂಗಪ್ಪ ಗುಳೇದಗುಡ್ಡ : ದೃಶ್ಯಕಲಾ ಕ್ಷೇತ್ರಕ್ಕೆ ಅಕ್ಕಿಮನೆತನದ ಕೊಡುಗೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

೧೩೦. ನಟರಾಜ ಶಿಲ್ಪಿ : ಕನಗನಹಳ್ಳಿಯ ಸ್ತೂಪ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

ಬಸವರಾಜ ರೊಳ್ಳಿ ಅವರ **ವಿಜಯಪುರ ಜಿಲ್ಲೆಯ ಸಮಕಾಲೀನ ಚಿತ್ರಕಲೆ**[೧೩೧], ವೆಂಕಟೇಶ್ ಕುಮಾರ್ ಕೆ.ಎಚ್. ಅವರ **ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ**[೧೩೨], ವೆಂಕಟೇಶ ಪಾಟೀಲ ಅವರ **ದಶಕದ ದೃಶ್ಯಕಲಾ ಸಾಹಿತ್ಯ ವಿಮರ್ಶಾತ್ಮಕ ಅಧ್ಯಯನ**[೧೩೩], ಸಂತೋಷ ಬೇವಿನಮರದ ಅವರ **ಹಂಪಿ ಪರಿಸರದ ಹನುಮಾನ ಪ್ರತಿಮೆಗಳ ಅಧ್ಯಯನ (ದೃಶ್ಯಕಲೆಗಳನ್ನು ಆಧರಿಸಿ)**[೧೩೪] ೨೦೧೬ರಲ್ಲಿ ಸಂಗಪ್ಪ ಕೋತಂಬರಿ ಅವರ **ಚಿಕ್ಕಮಕ್ಕಳ ಚಿತ್ರಕಲೆ,**[೧೩೫] ಅಮೀನರೆಡ್ಡಿ ಅವರ **ವಿಜಯನಗರ ಕಾಲದ ಲೇಪಾಕ್ಷಿಯ ಭಿತ್ತಿಚಿತ್ರಕಲೆ,**[೧೩೬] ವೀರೇಶ ರುದ್ರಸ್ವಾಮಿ ಅವರ **ಕರ್ನಾಟಕದ ಭಾವಚಿತ್ರಕಲೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ),**[೧೩೭] ಬಸವರಾಜ ಕಿಶೋರ ಅವರ **ಕರ್ನಾಟಕದಲ್ಲಿ ಸಂಯೋಜನಾ ಚಿತ್ರಕಲೆ (ಉತ್ತರಕರ್ನಾಟಕವನ್ನು ಅನುಲಕ್ಷಿಸಿ),**[೧೩೮] ನಿಜಲಿಂಗ ಮುಗಳಿ ಅವರ **ಕರ್ನಾಟಕದ ನಿಸರ್ಗ ಚಿತ್ರಕಲೆ,**[೧೩೯] ಈ ಎಂ.ಫಿಲ್ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಗುಲ್ಬರ್ಗಾ ವಿ.ವಿ, ಬೆಂಗಳೂರು ವಿ.ವಿ, ಕರ್ನಾಟಕ ವಿ.ವಿ., ಮೈಸೂರು ವಿ.ವಿ., ಬೆಂಗಳೂರಿನ ಜೈನ ಡೀಮ್ಡ್ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. (ಬ್ಯಾಚ್ಯುಲರ್ ಆಫ್ ಫೈನ್ ಆರ್ಟ್ಸ್ – ಡಿಗ್ರಿ), ಬಿ.ವಿ.ಎ. (ಬ್ಯಾಚ್ಯುಲರ್ ಆಫ್ ವಿಜ್ಯುವಲ್ ಆರ್ಟ್ಸ್ – ಡಿಗ್ರಿ) ಐದು ವರ್ಷಗಳ ದೃಶ್ಯಕಲೆಯ ಡಿಪ್ಲೊಮಾ ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ

---

೧೩೧. ಬಸವರಾಜ ರೊಳ್ಳಿ : ವಿಜಯಪುರ ಜಿಲ್ಲೆಯ ಸಮಕಾಲೀನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

೧೩೨. ವೆಂಕಟೇಶಕುಮಾರ ಎಚ್. : ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

೧೩೩. ವೆಂಕಟೇಶ ಪಾಟೀಲ : ದಶಕದ ದೃಶ್ಯಕಲಾ ಸಾಹಿತ್ಯ ವಿಮರ್ಶಾತ್ಮಕ ಅಧ್ಯಯನ (೨೦೦೪-೨೦೧೪), ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

೧೩೪. ಸಂತೋಷ ಬೇವಿನಮರದ : ಹಂಪಿ ಪರಿಸರದ ಹನುಮಾನ ಪ್ರತಿಮೆಗಳ ಅಧ್ಯಯನ (ದೃಶ್ಯಕಲೆಗಳನ್ನು ಆಧರಿಸಿ), ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೫

೧೩೫. ಸಂಗಪ್ಪ ಕೋತಂಬರಿ : ಚಿಕ್ಕಮಕ್ಕಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೬

೧೩೬. ಅಮೀನರೆಡ್ಡಿ : ವಿಜಯನಗರ ಕಾಲದ ಲೇಪಾಕ್ಷಿಯ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೬

೧೩೭ ವೀರೇಶ ರುದ್ರಸ್ವಾಮಿ : ಕರ್ನಾಟಕದ ಭಾವಚಿತ್ರಕಲೆ (ಉತ್ತರಕರ್ನಾಟಕವನ್ನು ಅನುಲಕ್ಷಿಸಿ), ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೬

೧೩೮. ಬಸವರಾಜ ಕಿಶೋರ : ಕರ್ನಾಟಕದಲ್ಲಿ ಸಂಯೋಜನಾ ಚಿತ್ರಕಲೆ, (ಉತ್ತರಕರ್ನಾಟಕವನ್ನು ಅನುಲಕ್ಷಿಸಿ), ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೬

೧೩೯. ನಿಜಲಿಂಗ ಮುಗಳಿ : ಕರ್ನಾಟಕದ ನಿಸರ್ಗ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೬

ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿ, ಸದೃಢವಾಗಿ ಮುನ್ನಡೆಯುತ್ತಲಿರುವುದು ದೃಶ್ಯಕಲಾ ಕ್ಷೇತ್ರದಲ್ಲಾದ ಬಹುದೊಡ್ಡ ಬದಲಾವಣೆ ಎಂದರೆ ತಪ್ಪಾಗಲಾರದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಕರ್ನಾಟಕ ಲಲಿತಕಲಾ ಅಕಾಡೆಮಿ ಕುರಿತಾಗಿದ್ದು, ವಿಶೇಷವಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯನ್ನು ಕೇಂದ್ರವಾಗಿಟ್ಟುಕೊಂಡು, ಅಕಾಡೆಮಿಯ ಕಲಾಚಟುವಟಿಕೆಗಳನ್ನು ಮತ್ತು ದೃಶ್ಯಕಲಾ ಸಾಹಿತ್ಯವನ್ನು ಅಧ್ಯಯನದ ವ್ಯಾಪ್ತಿಯನ್ನಾಗಿ ಹೊಂದಲಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ಆಯೋಜಿಸಿದ ಕಲೆಗೆ ಸಂಬಂಧಿಸಿದ ಹಲವು ಕಾರ್ಯಕ್ರಮಗಳನ್ನು ಪ್ರಮುಖವಾಗಿಟ್ಟುಕೊಂಡು, ಇದರೊಂದಿಗೆ ಸಮಾಜಮುಖಿ ಸೇವೆಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದ ಸಮಯದ ಮಿತಿಯಲ್ಲಿ ಪರಿಗಣಿ ಈ ಸಂಶೋಧನ ಸಂಪ್ರಬಂಧ ಅಧ್ಯಯನ ರೂಪುಗೊಂಡಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದ ಅನುಕೂಲತೆಗಾಗಿ ಎರಡು ರೀತಿಯ ಪ್ರಮುಖ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಅನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಕ್ಷೇತ್ರದಾರ್ಯ ಅತೀ ಮುಖ್ಯವಾದ ಅಂಶವಾಗಿದ್ದು, ಅಧ್ಯಯನ ಕ್ರಮಕ್ಕೆ ಅಗತ್ಯವಾಗಿ ಬೇಕಾಗುವಂತಹದು. ಇದು ಮೂಲ ಆಕರ ಸಾಮಗ್ರಿಗಳಿಂದ ಮಾಹತಿ ಸಂಗ್ರಹಿಸಲು ಸುಲಭ ಮಾರ್ಗವಾಗಿದೆ. ಅಲ್ಲದೇ ಈ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಧ್ಯಯನಕ್ಕೆ ಅವಶ್ಯವಿರುವ ಛಾಯಾಚಿತ್ರಗಳನ್ನು ಛಾಯಾಚಿತ್ರ ಮಾಡುವುದು, ಹಿರಿಯ ಕಲಾವಿದರನ್ನು ಸಂದರ್ಶಿಸಿ ಹಲವು ಮಾಹಿತಿಗಳನ್ನು ಛಾಯಾಚಿತ್ರ ಮಾಡಿ ಕಾಪಿಡಲಾಗಿದೆ. ಅಲ್ಲದೇ ಈ ಕ್ಷೇತ್ರಕಾರ್ಯದಲ್ಲಿ ಹಲವಾರು ವಿದ್ವಾಂಸರ ಜೊತೆಗೆ

ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹೀಗೆ ಕ್ಷೇತ್ರಕಾರ್ಯದಿಂದ ದೊರೆತ ವಿವರಗಳನ್ನು ಅಭ್ಯಾಸಕ್ಕೆ ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳಲ್ಲಿ ಸಂಗ್ರಹ ಮಾಡಿಕೊಂಡು ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

೨. ಅನುಷಂಗಿಕ ಆಕರ ಸಾಮಗ್ರಿ

ಪ್ರಬಂಧ ರಚಿಸುವಲ್ಲಿ ಎರಡನೇ ವಿಧಾನ ಆನುಷಂಗಿಕ ಆಕರ ಸಾಮಗ್ರಿಯಾಗಿದ್ದು, ಇದರಲ್ಲಿ ಪ್ರಕಟಿತ, ಅಪ್ರಕಟಿತ ಸಾಹಿತ್ಯ ಕೃತಿಗಳು, ಸಂಪುಟಗಳು, ಅಭಿನಂದನಾ ಗ್ರಂಥಗಳು, ವಿಶ್ವಕೋಶಗಳು, ಅನುವಾದ ಗ್ರಂಥಗಳು, ಸಂಶೋಧನಾ ಮಹಾಪ್ರಬಂಧಗಳು, ದೇಶಿ-ವಿದೇಶಿ ಪ್ರವಾಸಿಗರ ಬರಹಗಳು, ಸಂಶೋಧನಾ ಲೇಖನಗಳು, ಪತ್ರಗಳು, ಸಂಪಾದನಾ ಗ್ರಂಥ ಮುಂತಾದವುಗಳನ್ನು ಆನುಷಂಗಿಕ ಆಕರ ಸಾಮಗ್ರಿಗಳಾಗಿ ಬಳಸಿಕೊಳ್ಳಲಾಗಿದೆ. ಹಾಗೆಯೇ ಬೇರೆ ಬೇರೆ ಸ್ಥಳಗಳಲ್ಲಿನ ಗ್ರಂಥಾಲಯಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಲಾಗಿದೆ. ಹೀಗೆ ಆನುಷಂಗಿಕ ಆಕರಗಳನ್ನು ಅಥವಾ ಮಾಹಿತಿಗಳನ್ನು ವಿವಿಧ ಪಟ್ಟಿಕೆಗಳಲ್ಲಿ ಸಂಗ್ರಹ ಮಾಡಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

❑❑❑

ಅಧ್ಯಾಯ : ಎರಡು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹುಟ್ಟು-ಬೆಳವಣಿಗೆ

ಅಧ್ಯಾಯ : ಎರಡು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹುಟ್ಟು-ಬೆಳವಣಿಗೆ

ಹಿಂದಿನ ಕಾಲದಲ್ಲಿ ರಾಜಮಹಾರಾಜರು ಚಿತ್ರ-ಶಿಲ್ಪ ಕಲಾವಿದರಿಗೆ, ಸಂಗೀತಗಾರರಿಗೆ, ನೃತ್ಯಗಾರರಿಗೆ, ಸಾಹಿತಿಗಳಿಗೆ, ಕವಿಗಳಿಗೆ ತಮ್ಮ ಆಸ್ಥಾನದಲ್ಲಿ ಆಶ್ರಯ ನೀಡುತ್ತಾ ಬಂದಿದ್ದಾರೆ. ರಾಜಾಶ್ರಯಕ್ಕೆ ನಿರಂತರ ತಮ್ಮ ತಮ್ಮ ಲಲಿತಕಲೆಗಳ ಅಭಿವ್ಯಕ್ತಿ ಮುಖಾಂತರ ಸಾಮಾಜಿಕ ಸೇವೆ ಸಲ್ಲಿಸಿದಂತಹ ಕಲಾವಿದರುಗಳ ವೈಶಿಷ್ಟತೆಯನ್ನು ಗುರುತಿಸಿ ತಮ್ಮ ಆಸ್ಥಾನದಲ್ಲಿ ಸನ್ಮಾನ ದೇಶಿಗೆರೂಪದಲ್ಲಿ ಮುತ್ತು, ರತ್ನ, ಚಿನ್ನ, ಬೆಳ್ಳಿ ನಾಣ್ಯಗಳನ್ನು, ಹಾಗೂ ಪ್ರಶಸ್ತಿ ಪುರಸ್ಕಾರಗಳನ್ನು ಕಲಾವಿದರಿಗೆ ನೀಡಿ ಗೌರವಿಸುತ್ತಿದ್ದರು. ಅವರಲ್ಲಿ ಕೆಲವರನ್ನು ಆನೆ ಅಂಬಾರಿ, ಪಲ್ಲಕ್ಕಿಗಳಲ್ಲಿ ಮೆರೆಸಿರುವದು ಶಾಸನ-ಗ್ರಂಥಗಳಲ್ಲಿ ಉಲ್ಲೇಖಗಳನ್ನು ಗಮನಿಸಬಹುದಾಗಿದೆ.

ಭಾರತ ಸ್ವತಂತ್ರದ ನಂತರ ರಾಜಾಶ್ರೇಯದಲ್ಲಿ ನಡೆಯುತ್ತಿರುವಂತ ಕಲಾ ಚಟುವಟಿಕೆ ಆಯೋಜನೆ, ಕ್ರೀಯಾಶಿಲರಾದಂತಾ ಕಲಾವಿದರಿಗೆ ಪ್ರಶಸ್ತಿ ಪುರಸ್ಕಾರಗಳನ್ನು ನೀಡುವಂತಹ ಕಾರ್ಯಕ್ರಮಗಳನ್ನು ಸ್ವತಹ ಸರಕಾರವೆ ನೇರವೆರಿಸಿ ಕೊಂಡು ಬರುತ್ತಿರುವದು ಗಮನಾರ್ಹ ಸಂಗತಿ. ಈ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಸ್ವಾಯತ್ ಸಂಸ್ಥೆಯಾದ ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಲಾವಿದರನ್ನು ಗುರುತಿಸಿ ಗೌರವಿಸುವ ಕಾರ್ಯ ಮಾಡುತ್ತಾ ಬರುತ್ತಿರುವದು ಕಾಣಬಹುದಾಗಿದೆ.

ಅಕಾಡೆಮಿ

ಪಾಂಡಿತ್ಯದ ಕೇಂದ್ರವಾದ ಅಕಾಡೆಮಿಯು ಮೊದಲು ಕ್ರಿ.ಪೂ ೬೦೦ರಲ್ಲಿ ಅಥೆನ್ಸ್

ಸಮೀಪದ 'ಅಲ್ಲವ್' ಮರಗಳ ತೋಪಿನಲ್ಲಿ ಒಂದು ಮನೆಯಿದ್ದು, ಇದು ಗ್ರೀಕ್ ವೀರ ಅಕಡೆಮಸ್‌ನ ನೆನಪಿಗಾಗಿ ನಿರ್ಮಿತವಾಗಿತ್ತು. ಇಲ್ಲಿ ಒಂದು ಕ್ರೀಡಾ ಭವನವನ್ನು ಕಟ್ಟಿ, ಯುವಜನರು ಕ್ರೀಡೆಗಳನ್ನು ಆಡಲು ಸೇರುತ್ತಿದ್ದರು. ಕ್ರಿಪೂ ೩೮೫ರಲ್ಲಿ ತತ್ವಜ್ಞಾನಿ ಪ್ಲೋಟೋ ಇದನ್ನು ವಿದ್ಯಾಸಂಸ್ಥೆಯನ್ನಾಗಿ ಮಾಡಿದ ಅಕೆಡಮಸ್ ಸ್ಮಾರಕ ಕ್ಷೇತ್ರದಲ್ಲಿ ಪ್ರಾರಂಭವಾದ ವಿದ್ಯಾಸಂಸ್ಥೆಯನ್ನು 'ಅಕಾಡೆಮಿ' ಎಂದು ಕರೆದರು. ಅನಂತರ ಕಲೆ, ವಿಜ್ಞಾನ, ಸಾಹಿತ್ಯ, ತತ್ವಜ್ಞಾನಗಳಲ್ಲಿ ಪಾಂಡಿತ್ಯ ಪಡೆದ ಸಂಘ-ಸಂಸ್ಥೆಗಳಿಗೂ ಈ ಹೆಸರು ಅನ್ವರಿಸಲ್ಪಟ್ಟಿತ್ತು. ನವೋದಯ ಕಾಲದಲ್ಲಿ ಇಟಲಿಯ ನಗರದಲ್ಲಿ ಅಕಾಡೆಮಿಗಳು ಪ್ರಾರಂಭವಾದವು. ಕಲಾ ಅಕಾಡೆಮಿಗಳಿಗೆ ಮಾನ್ಯತೆ ಸಿಕ್ಕಿದ್ದು ಕೂಡ ನವೋದಯ ಕಾಲದಲ್ಲಿ. ಅಕಾಡೆಮಿಗಳು ವಿದ್ವಾಂಸರ ಸಂಸ್ಥೆಯಾಗಿದ್ದು. ಈಗ ಎಲ್ಲ ರಾಷ್ಟ್ರಗಳಲ್ಲೂ ಅಕಾಡೆಮಿಗಳು ಸ್ಥಾಪಿತವಾಗಿದ್ದು, ಸಾಹಿತ್ಯ, ಕಲೆ ಮತ್ತು ವಿಜ್ಞಾನಗಳ ಅಭಿವೃಧಿಗಾಗಿ ಮೀಸಲಾಗಿರುವ ಸಂಸ್ಥೆಗಳಾಗಿವೆ.

ಸಾಹಿತ್ಯ, ಕಲೆಗಳ ಸರ್ವತೋಮುಖ ಅಭಿವೃಧಿ, ವಿವಿಧ ಕಲೆಗಳ ಚಟುವಟಿಕೆಗಳ ಸಮನ್ವಯ ರಾಜ್ಯದ ಹಾಗೂ ರಾಷ್ಟ್ರದ ಸಾಂಸ್ಕೃತಿಕ ಏಳಿಗೆಗಾಗಿ ಶ್ರಮಿಸುವುದು. ಅಲ್ಲದೆ ಅಧ್ಯಯನ, ಸಂಶೋಧನೆಗಳಿಗೆ ಪ್ರೋತ್ಸಾಹ, ಇದಕ್ಕಾಗಿ ಸಂಸ್ಥೆಗಳನ್ನು ಗ್ರಂಥಾಲಯಗಳನ್ನು ಸ್ಥಾಪಿಸುವದು. ವಿವಿಧ ಪ್ರದೇಶಗಳ ನಡುವೆ ವಿಚಾರ ವಿನಿಮಯ ನಡೆಸುವದು, ಮಸ್ತಕಗಳನ್ನು ಪ್ರಕಟಿಸುವುದು, ಪ್ರತಿಭಾವಂತ ಸಾಹಿತಿ, ಕಲಾವಿದರಿಗೆ ಮತ್ತು ಸಂಸ್ಥೆಗಳಿಗೆ ಮನ್ನಣೆ ಹಾಗೂ ನೇರವು ನೀಡುವದು, ರಾಜ್ಯದ ವಿವಿಧ ಭಾಗಗಳ ನಾನಾ ರೀತಿಯ ಕಲೆಗಳ ಸಂಗ್ರಹ, ರಕ್ಷಣೆ ಪ್ರೋತ್ಸಾಹ ಕೋಡುವುದು. ಕಲಾಪ್ರದರ್ಶನ, ಸಾಹಿತ್ಯ, ಕಲಾವಿದರು ಸಲ್ಲಿಸಿರುವ ಸೇವೆಗೆ ಪ್ರಶಸ್ತಿ, ಶಿಷ್ಯವೇತನ, ಪ್ರವಾಸಾನುಧಾನ ಮುಂತಾದ ದೈವೋದ್ಧೆಶಗಳನ್ನು ಅಕಾಡೆಮಿ ಹೊಂದಿರುತ್ತದೆ.[೧]

'ಭಾರತದಲ್ಲಿ ಕೇಂದ್ರ ಸರ್ಕಾರವು ಚಿತ್ರ, ಶಿಲ್ಪ, ಕಲೆಗಳಿಗಾಗಿ ೧೯೫೪ರಲ್ಲಿ ಲಲಿತಕಲಾ ಅಕಾಡೆಮಿಯನ್ನು ಸ್ತಾಪಿಸಿತ್ತು. ಇದು ನವದೆಹಲಿಯಲ್ಲಿ ರಬೀಂದ್ರ ಭವನ ಕಟ್ಟಡದಲ್ಲಿದೆ. ಅಲ್ಲದೆ ಕೇಂದ್ರ ಕಲಿತಕಲಾ ಅಕಾಡೆಮಿ ತನ್ನ ಕಾರ್ಯವ್ಯಾಪ್ತಿಯನ್ನು ರಾಷ್ಟ್ರದ ಬೇರೆ ಕಡೆ ವಿಸ್ತರಿಸಬೇಕೆಂಬ ಉದ್ದೇಶದಿಂದ, ಪ್ರಾಂತೀಯ ಅಕಾಡೆಮಿಗಳನ್ನು ಸ್ಥಾಪಿಸಿದ್ದು, ಮದ್ರಾಸ್, ಭುವನೆಶ್ವರ, ಕಲ್ಕತ್ತಾ, ಲಕ್ನೋಗಳಲ್ಲಿದೆ.'[೨] ಈ ನಿಟ್ಟಿನಲ್ಲಿ ೧೯೭೭ರಲ್ಲಿ ಕರ್ನಾಟಕದ ಸರ್ಕಾರವು 'ರಾಜ್ಯದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸ್ಥಾಪಿಸಿತ್ತು. ಕರ್ನಾಟಕ ಸಾಹಿತ್ಯ ಅಕಾಡೆಮಿ ನಂತರ ಸ್ಥಾಪಿಸಿದ ರಾಜ್ಯದ ಎರಡನೇಯ ಅಕಾಡೆಮಿಯೆಂಬ ಕೀರ್ತಿ ಲಲಿತಕಲಾ

೦೧. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಕಲಾಕೋಶ ಪು. ೧, ೨

೦೨. ಅಂತರ್ಜಾಲ : *www.lalitkala.gov.in*

ಅಕಾಡೆಮಿಯದ್ದು. ಸಾಂಸ್ಥಿಕ ರೂಪ ಇಲ್ಲದ ಎಲ್ಲ ಕಲೆಗಳಿಗೂ ಅಕಾಡೆಮಿ ಆಸರೆ ನೀಡಿದ್ದು ಅದರ ಬಹುಮುಖಿ ಸಾಧನೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ಸ್ಥಾಪನೆಗೆ ಕೇಂದ್ರ ಲಲಿತ ಅಕಾಡೆಮಿಯೇ ಪ್ರೇರಣೆ. ೧೯೫೯ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಬೆಂಗಳೂರಿನಲ್ಲಿ ಕಲಾ ಪ್ರದರ್ಶನೊಂದನ್ನು ಏರ್ಪಡಿಸಿತ್ತು. ರಾಜ್ಯದಲ್ಲಿ ಲಲಿತಕಲೆಗಳಿಗೆ ಅಕಾಡೆಮಿಯೊಂದನ್ನು ಸ್ಥಾಪಿಸುವ ಕನಸು ಚಿಗುರೊಡೆಯಲು ಈ ಪ್ರದರ್ಶನ ಕಾರಣವಾಗಿದ್ದು. ಐತಿಹಾಸಿಕ ಸಂಗತಿ. ವೈಯಕ್ತಿಕ ಕಲಾಪ್ರದರ್ಶನಗಳಿಗೆ ಮಾತ್ರ ಸಿಮೀತವಾಗಿದ್ದ ಕಲಾಚಟುವಟಿಕೆಗಳಿಗೆ ಸಾಂಸ್ಥಿಕ ರೂಪಕೊಟ್ಟು ಅದರ ಸರ್ವತ್ತೋಮುಖ ಬೆಳವಣಿಗೆಗೆ ಅರ್ಹರನ್ನು ದುಡಿಯುವ ಪರಮೋದ್ದೇಶದಿಂದ ೧೯೬೪ರಲ್ಲಿ ಕರ್ನಾಟಕದಲ್ಲಿ ಲಲಿತಕಲಾ ಅಕಾಡೆಮಿಯನ್ನು ಸ್ಥಾಪಿಸಲಾಯಿತು.

ಹೀಗೆ ಆರಂಭಗೊಂಡ ಅಕಾಡೆಮಿಯು ತನ್ನ ಕಾರ್ಯಚಟುವಟಿಕೆಗಳನ್ನು ಆಯೋಜಿಸಲು ಪ್ರತೇಕವಾದಂತಹ ಸಮೀತಿಗಳನ್ನು ರಚಿಸುತ್ತಾ ಬರುತ್ತಿದೆ. ಕರ್ನಾಟಕ ಸರಕಾರವೆ ನಾಡಿನ ಹಿರಿಯ ಅನುಭವಸ್ಥ ಕಲಾವಿದರನ್ನು ಮೂರು ವರ್ಷದ ಅವಧಿಗಾಗಿ ಅಕಾಡೆಮಿಯ ಅಧ್ಯಕ್ಷರನ್ನಾಗಿ ಹಾಗೂ ಕರ್ನಾಟಕ ಮೂಲೆ ಮೂಲೆಗಳಿಂದ ಆಯ್ದ ಹದಿನೈದು ಕಲಾವಿದರನ್ನು ಸದಸ್ಯರ ಸಮೀತಿಯನ್ನು ರಚಿಸುತ್ತದೆ. ಇವರೊಂದಿಗೆ ಆಡಳಿತ ವ್ಯವಸ್ಥೆ ನೋಡಲು ಸ್ವತಹ ಕರ್ನಾಟಕದ ಸರಕಾರದ ಒಬ್ಬ ಅಧಿಕಾರಿಯನ್ನು 'ರಿಜಿಸ್ಟ್ರಾರ್'ಯೆಂದು ನೇಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ೧೯೬೪ರಿಂದ ಇದುವರೆಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿಗೆ ನಾಡಿನ ಅನೇಕ ಜನ ಕಲಾವಿದರು ಕ್ರಿಯಾಶೀಲ ಅಧ್ಯಕ್ಷರಾಗಿ ಮತ್ತು ರಿಜಿಸ್ಟ್ರಾರಗಳಾಗಿ ಕಾರ್ಯವನ್ನು ನಿರ್ವಹಿಸಿರುವದು ಗಮರ್ನಾಹ ಸಂಗತಿ. ಅವರ ಹೆಸರು ಮತ್ತು ಅವಧಿಯ ವಿವರಗಳನ್ನು ಈ ಮುಂದೆ ದಾಖಲಿಸಲಾಗಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರು (ಹೆಸರು ಮತ್ತು ಅವಧಿ)

'ಎಸ್.ಆರ್. ಕಂಠಿ (೧೯೬೪–೧೯೬೭); ಕೆ.ವಿ. ಶಂಕರೇಗೌಡ (೧೯೬೭–೧೯೭೦); ಸುಧಾ ವಿ. ರೆಡ್ಡಿ (೧೯೭೦–೧೯೭೪); ಡಾ. ಕೆ. ಕೆ. ಹೆಬ್ಬಾರ್ (೧೯೭೮–೧೯೮೧); ಪಿ.ಟಿ.ಅಕ್ಕಿ (೧೯೮೧–೧೯೮೪); ಸೋಮಶೇಖರ್ ಎಂ. ಸಾಲಿ (೧೯೮೪–೧೯೮೭); ಆರ್. ಎಂ. ಹಡಪದ್ (೧೯೮೭–೧೯೯೦); ಪಿ. ಆರ್. ತಿಪ್ಪೇಸ್ವಾಮಿ (೧೯೯೦–೧೯೯೫); ಡಾ. ಸಿ. ಚಂದ್ರಶೇಖರ್ (೧೯೯೫–೧೯೯೮); ವಿ. ಜಿ. ಅಂದಾನಿ (೧೯೯೮–೨೦೦೧); ಪೀಟರ ಲೂಯಿಸ್ (೨೦೦೧–೨೦೦೪); ಎಂ. ಬಿ. ಬಸವರಾಜ್ (೨೦೦೫–೨೦೦೭); ವಿ. ಟಿ. ಕಾಳೆ (೨೦೦೭–೨೦೦೮); ಜೆ. ಎಸ್. ಖಂಡೇರಾವ್ (೨೦೦೮–

೨೦೧೧); ಚಿ. ಸು. ಕೃಷ್ಣಸೆಟ್ಟಿ (೨೦೧೨-೨೦೧೩); ಡಾ. ಎಂ. ಎಸ್. ಮೂರ್ತಿ (೨೦೧೪-೨೦೧೭); ಪ್ರೊ. ಎಂ. ಜೆ. ಕಮಲಾಕ್ಷಿ' (೨೦೧೭ ರಿಂದ) ಸರರ್ಕಾರವು ಅಧ್ಯಕ್ಷರು ಆಯ್ಕೆ ಮಾಡಿ ನಂತರ ಸರರ್ಕಾರ ಹಾಗೂ ಅಧ್ಯಕ್ಷರ ನಂತರ ನಿಯಮಗಳ ಅನುಸಾರವಾಗಿ ಸರರ್ಕಾರದ ಅಕಾಡೆಮಿ ಸದಸ್ಯರನ್ನು ಗುರುತಿಸುತ್ತಾರೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ರಿಜಿಸ್ಟ್ರಾರ್ (ಹೆಸರು ಮತ್ತು ಅವಧಿ)

ಶ್ರೀ ಜಯತೀರ್ಥ ರಾಜಪುರೋಹಿತ್ (ನಿರ್ದೇಶಕರು, ಕಸನಿ) ೯/೧೯೭೭-೫/೭೮; ಶ್ರೀ ಅನಿರುದ್ಧ ದೇಸಾಯಿ (ನಿರ್ದೇಶಕರು, ಕಸನಿ) ೫/೧೯೭೮-೫/೭೯; ಶ್ರೀ ಎಂ.ಡಿ. ಗೋವಿಂದರಾಜು ೫/೧೯೭೯-೫/೮೦; ಶ್ರೀ ಮ.ರಾ.ಮಠದ ೫/೧೯೮೦-೯/೮೧; ಶ್ರೀ ಕೆ.ವಿ. ಚಿನ್ನಣ್ಣ ೯/೧೯೮೧-೨/೮೨; ಶ್ರೀ ಆರ್.ರಂಗಯ್ಯ ೨/೧೯೮೩-೪/೮೩; ಶ್ರೀ ನಾ. ಹನುಮಂತರಾಜು ೪೧೯೮೩-೧೨/೮೩; ಶ್ರೀ ಎಸ್. ವಿಶ್ವನಾಥ್ ೧೨/೧೯೮೩-೧೨/೮೩; ಶ್ರೀ ಸಿಂ. ರಾ. ಹೊನ್ನಲಿಂಗಯ್ಯ ೧೨/೧೯೮೩-೧/೮೫; ಶ್ರೀ ಎಂ.ಎಸ್. ಸುಬ್ರಮಣ್ಯರಾಜ್ ಅರಸು ೧/೧೯೮೫-೭/೮೬; ಶ್ರೀ ಬಿ.ಸಿ. ವೆಂಕಟಪ್ಪ ೭/೧೯೮೬-೮/೮೯; ಶ್ರೀ ಬಿ.ಎನ್. ಸತ್ಯನಾರಾಯಣ ರಾವ್ ೮/೧೯೮೯-೫/೮೯; ಶ್ರೀ ಟಿ.ಎಸ್. ವೆಂಕಟಾಚಲಯ್ಯ ೭/೧೯೮೯-೫/೯೦; ಶ್ರೀ ಆರ್. ಸತ್ಯನಾರಾಯಣ ರಾವ್ ೫/೧೯೯೦-೯/೯೨; ಶ್ರೀ ಕೆ. ಮುಕುಂದನ್ ೯/೧೯೯೨-೮/೯೭; ಶ್ರೀ ಎಚ್. ಶಂಕರಪ್ಪ ೮/೧೯೯೭-೩/೦೧; ಶ್ರೀ ಬಿ.ಟಿ. ಮುನಿರಾಜಯ್ಯ ೩/೨೦೦೧-೮/೦೭; ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ೯/೨೦೦೭-೨/೦೯; ಶ್ರೀ ಬಲವಂತರಾವ್ ಪಾಟೀಲ್ ೨/೨೦೦೯-೯/೧೦; ಶ್ರೀಮತಿ ಹೆಚ್. ಜಿ. ವಿಜಯಲಕ್ಷ್ಮಿ ೨/೨೦೧೦-೯/೧೧; ಶ್ರೀ ಟಿ.ಜಿ. ನರಸಿಂಹಮೂರ್ತಿ ೧೦/೨೦೧೧-೧೧/೧೧; ಶ್ರೀ ಕೆ. ಸುಧೀಂದ್ರ ೧೧/೧೧/೨೦೧೧-೧೮/೦೧/೨೦೧೬; ಶ್ರೀಮತಿ ಇಂದ್ರಮ್ಮ ಹೆಚ್. ವಇ. (ಪ್ರ)೧೮-೦೧-೨೦೧೬-೨೩/೦೬/೨೦೧೬; ಶ್ರೀ ಟಿ. ಕೊಟ್ರಪ್ಪ ೨೩/೦೬/೨೦೧೬-೩೦/೦೬/೨೦೧೬; ಶ್ರೀಮತಿ ಇಂದ್ರಮ್ಮ ಹೆಚ್. ವಿ. (ಪ್ರ) ೩೦/೦೬/೨೦೧೬-೧೦-೧೨-೨೦೧೮; ಶ್ರೀಮತಿ ಎ.ಸಿ. ಶೈಲಜಾ ೧೦/೧೨/೨೦೧೮ ರಿಂದ ನೇಮಕ ಗೊಂಡಿರುತ್ತಾರೆ.

ಕಲಾಸಂಸ್ಥೆಗೆ ಪ್ರೋತ್ಸಾಹ ಶಿಷ್ಯವೇತನ ಸಾಮೂಹಿಕ ಕಲಾಪ್ರದರ್ಶನಗಳಿಗೆ ಸಹಾಯಧನ, ಕಲಾಶಿಬಿರಗಳ ಆಯೋಜನೆ ಇತ್ಯಾದಿ ಅಕಾಡೆಮಿಯ ಪ್ರಾರಂಭದ ಚಟುವಟಿಕೆಯಾಗಿತ್ತು. ಆನಂತರ ಕಲಾವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೇರಿದಂತೆ ಕಾರ್ಯಕ್ರಮಗಳು ವ್ಯಾಪ್ತಿ ವಿಸ್ತಾರವಾಗುತ್ತಾ ಸಾಗಿದ್ದು ಸಹಜ ಮನ್ನಣ್ಣೆ. ಈ ನಿಟ್ಟಿನಲ್ಲಿ

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು ೧೯೬೪ ರಿಂದ ೨೦೧೯ರ ವರೆಗೆ



ಎಸ್. ಆರ್. ಕಂಠಿ
೧೯೬೪-೬೭



ಕೆ. ವಿ. ಶಂಕರೇಗೌಡ
೧೯೬೭-೭೦



ಸುಧಾ. ವಿ. ರೆಡ್ಡಿ
೧೯೭೦-೭೪



ಕೆ. ಕೆ. ಹೆಬ್ಬಾರ್
೧೯೭೮-೮೧



ಬಿ. ಪಿ. ಅಕ್ಕಿ
೧೯೮೧-೮೪



ಸೋಮಶೇಖರ್ ಎಂ. ಸಾಲಿ
೧೯೮೪-೮೭



ಆರ್. ಎಂ. ಹಡಪದ್
೧೯೮೭-೯೦



ಪಿ. ಆರ್. ತಿಪ್ಪೇಸ್ವಾಮಿ
೧೯೯೦-೯೫



ಸಿ. ಚಂದ್ರಶೇಖರ್
೧೯೯೫-೯೮



ವಿ. ಜಿ. ಅಂದಾನಿ
೧೯೯೮-೨೦೦೧




ಪೀಟರ್ ಲೂಯಿಸ್
೨೦೦೧-೦೪



ಎಂ. ಬಿ. ಬಸವರಾಜ್
೨೦೦೫-೦೭



ವಿ, ಟಿ, ಕಾಳೆ
೨೦೦೭-೦೮



ಜೆ, ಎಸ್, ಖಂಡೇರಾವ್
೨೦೦೮-೧೧



ಟಿ, ಸು, ಕೃಷ್ಣ ಶೆಟ್ಟಿ
೨೦೧೨-೧೩



ಡಾ, ಎಂ, ಎಸ್, ಮೂರ್ತಿ
೨೦೧೪-೧೭



ಪ್ರೊ ಎಂ, ಜೆ, ಕಮಲಾಕ್ಷಿ
೨೦೧೭-೧೯

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕೈಗೊಂಡಿರುವ ಮತ್ತು ಪ್ರಸ್ತುತ ಕೈಗೋಳ್ಳುತ್ತಿರುವ ಯೋಜನೆ ಮತ್ತು ಕಾರ್ಯಕ್ರಮವನ್ನು ಸಂಕ್ಷಿಪ್ತ ನೋಟವನ್ನು ಈ ಮುಂದೆ ಕಾಣಬಹುದು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಯೋಜನೆಗಳು

ವಾರ್ಷಿಕ ಗೌರವ ಪ್ರಶಸ್ತಿ : ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ಕಲಾವಿದರಿಗೆ ನಗದು ಗೌರವ ಸಂಭಾವನೆ, ನೆನಪಿನ ಕಾಣಿಕೆ ಮತ್ತು ಸನ್ಮಾನ ಪತ್ರ ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿಗೆ ಯಾವುದೆ ಅರ್ಜಿಗಳನ್ನು ಆಹ್ವಾನ ಮಾಡದೆ ಪ್ರತ್ಯೇಕ ಸಮೀತಿಯನ್ನು ರಚಿಸಿ ಪ್ರಶಸ್ತಿಗೆ ಹಿರಿಯ ಕಲಾವಿದರನ್ನು ಆಯ್ಕೆ ಮಾಡಲಾಗುವದು.

ವಾರ್ಷಿಕ ಕಲಾ ಪ್ರದರ್ಶನ : ಅಕಾಡೆಮಿಯು ಪ್ರತಿ ವರ್ಷವು ಆಯೋಜನೆ ಮಾಡುವ ಯೋಜನೆಗಳಲ್ಲಿ ಇದೊಂದು ಮಹತ್ವದ ಯೊಜನೆಯಾಗಿದೆ. ಪ್ರತಿ ವರ್ಷ ಅಕಡೆಮಿಯು ಹಿರಿಯ ಮತ್ತು ಯುವಕಲಾವಿದರ ವಾರ್ಷಿಕ ಚಿತ್ರಕಲಾ ಪ್ರದರ್ಶನ ಮತ್ತು ಸ್ಪರ್ಧೆಗೆ ಅರ್ಜಿಮೂಲಕ ಕಲಾಕೃತಿಗಳನ್ನು ಆಹ್ವಾನಿಸುತ್ತದೆ. ಸಂಗ್ರಹ ಗೊಂಡ ಒಟ್ಟು ಕಲಾಕೃತಿಗಳೂ ಪ್ರಥಮ ಸುತ್ತಿನಲ್ಲಿ ಪ್ರದರ್ಶನಕ್ಕೆ ಆಯ್ಕೆಯಾದ ಪಟ್ಟಿಯನ್ನು ಸಿದ್ದಪಡಿಸಲಾಗುತ್ತದೆ. ನಂತರ ಅವುಗಳಲ್ಲಿನ ಹತ್ತು ಕಲಾಕೃತಿಗಳಿಗೆ ಪ್ರಶಸ್ತಿಪತ್ರ, ನೆನಪಿನಕಾಣಿಕೆ ಮತ್ತು ಗೌರವ ಸಂಭಾವಣೆಯನ್ನು ನೀಡಿ ಕಲಾವಿದರನ್ನು ಗೌರವಿಸುತ್ತಾರೆ.

ಶಿಷ್ಯವೇತನ : ರಾಜ್ಯದ ಕಲಾಶಾಲೆಗಳಲ್ಲಿ ದೃಶ್ಯಕಲೆ ವ್ಯಾಸಂಗಕ್ಕೆ ಉತ್ತೇಜಿಸಲು ಮತ್ತು ಆರ್ಥಿಕ ನೆರವು ನೀಡುವ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಪ್ರತಿವರ್ಷ ವಿಧ್ಯಾರ್ಥಿವೇತನವನ್ನು ನೀಡಲಾಗುತ್ತದೆ.

ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ : ಪ್ರತಿವರ್ಷ ಲಲಿತಕಲಾ ಅಕಾಡೆಮಿ ಆಯೋಜನೆ ಮಾಡುವಂತಹ ವಿವಿಧ ಯೋಜನೆಗಳಲ್ಲಿ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ಕೂಡಾ ಒಂದಾಗಿದೆ. ಈ ಯೋಜನೆಗೂ ಅರ್ಜಿಯನ್ನು ಆಹ್ವಾನಿಸಿ ಆಯ್ಕೆಯಾದ ಕಲಾವಿದರುಗಳಿಗೆ ಧನಸಹಾಯವನ್ನು ನೀಡಲಾಗುತ್ತಿದೆ. ತಮ್ಮ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ರಾಜ್ಯದಲ್ಲಿ ಮತ್ತು ಹೊರ ರಾಜ್ಯದಲ್ಲಿ ಧನ ಸಹಾಯ ನೀಡಲಾಗುತ್ತಿತ್ತು.

ಕಲಾಶಿಬಿರ : ಹಿರಿಯ ಕಲಾವಿದರು ಹಾಗೂ ಯುವ ಕಲಾವಿದರಿಗೆ ಪ್ರತಿವರ್ಷ ಕಲಾಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಕಲಾಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಚಿತ್ರರಚನೆಯ ಕಲಾಸಾಮಗ್ರಿಗಳು, ಊಟ ಮತ್ತು ವಸತಿ ಸೌಲಭ್ಯದ ಜೊತೆಗೆ ಗೌರವ ಸಂಭಾವನೆಯನ್ನು ಆಯಾ ಕಲಾ ಶಿಬಿರಕ್ಕೆ ತಕ್ಕಂತೆ ನೀಡಲಾಗುತ್ತಿದೆ.

ವಿಚಾರ ಸಂಕಿರ್ಣ : ಕಲಾವಿದರು ಕೇವಲ ಕಲಾಕೃತಿಗಳ ರಚಿಸಿದರೆ ಮಾತ್ರ ಸಾಲದು ಅವರು ಒಂದು ಕಡೆ ಸೇರಿ ತಮ್ಮ ವಿಚಾರಗಳನ್ನು ವಿನಿಮಯ ಮಾಡಿಕೋಳ್ಳುವ ಹಿನ್ನೆಲೆಯಲ್ಲಿ ಅಕಾಡೆಮಿಯು ಅನೇಕ ವಿಚಾರಸಂಕಿರ್ಣ ಕಾರ್ಯಕ್ರಮಗಳ ವಿವಿಧ ಸ್ಥಳಗಳಲ್ಲಿ ಆಯೋಜಿಸುತ್ತಿದೆ.

ಸಂಘ ಸಂಸ್ಥೇಗಳಿಗೆ ಧನಸಹಾಯ : ಕಲಾ ಸಂಘ-ಸಂಸ್ಥೆಗಳ ಕಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಕಾರ್ಯಕ್ರಮದ ವೆಚ್ಚಕ್ಕೆ ಅನುಗುಣವಾಗಿರುವ ರೂ.೧೦೦೦ ದಿಂದ ರೂ. ೧೦,೦೦೦ಗಳ ವರೆಗೆ ಧನಸಹಾಯ ನೀಡಲಾಗುತ್ತದೆ.

ಫೆಲೋಷಿಪ್ (ಹಿರಿಯ) : ಹಿರಿಯ ಕಲಾವಿದರನ್ನು ಗೌರವಿಸುವ ದೃಷ್ಟಿಯಿಂದ ರಾಜ್ಯದ ಹಿರಿಯ ಕಲಾವಿದರೊಬ್ಬರಿಗೆ ಎರಡು ವರ್ಷಕ್ಕೊಮ್ಮೆ ಉತ್ತಮ ಕಲಾಕೃತಿಗಳನ್ನು ರಚಿಸಲು ಸೀನಿಯರ್ ಫೆಲೋಷಿಪ್‌ನ್ನು ನೀಡಲಾಗುತ್ತಿದೆ. ಫೆಲೋಷಿಪ್ ಪಡೆದವರಿಗೆ ಮಹೆಯಾನ ರೂ೨೦೦೦ಗಳಂತೆ ಗೌರವವನ್ನು ನೀಡಲಾಗುತ್ತದೆ. ಅದೇ ರಿತಿಯಲ್ಲಿ ದೃಶ್ಯಕಲಾ ಸಾಹಿತ್ಯ ಬೆಳೆಸುವ ಹಿನ್ನೆಲೆಯಲ್ಲಿ ದೃಶ್ಯಕಲೆ ಸಂಶೋಧನೆಗೂ ಫೆಲೋಷಿಪ್‌ನ್ನು ನೀಡಲಾಗುತ್ತಿದೆ.

ಪ್ರಕಟನೆಗಳು : ಕಲಾವಿದರಿಗೆ ಹಾಗೂ ಕಲಾಸಕ್ತರಿಗೆ ಕಲೆ ಮತ್ತು ಕಲಾವಿದರ ಪರಿಚಯ ಮಾಡಿಸುವ ಸಲುವಾಗಿ ಚಿತ್ರಕಲೆ ಮತ್ತು ಕಲಾವಿದರ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿದ್ದು, ಕಡಿಮೆ ಬೇಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ.

ದೃಶ್ಯಕಲಾ ಸಾಹಿತ್ಯ ಬಹುಮಾನ : ಪ್ರತಿವರ್ಷ ಲಲಿತಕಲಾ ಅಕಾಡೆಮಿ ಆಯೋಜನೆ ಮಾಡುವಂತಹ ವಿವಿಧ ಯೊಜನೆಗಳಲ್ಲಿ ಉತ್ತಮ ದೃಶ್ಯಕಲಾ ಸಾಹಿತ್ಯ ಪ್ರಕಟಿಸಿದ ಪುಸ್ತಕಕ್ಕೆ ವರ್ಷದಲ್ಲಿ ಒಂದು ಪುಸ್ತಕಕ್ಕೆ ಬಹುಮಾನ ನೀಡುವ ಯೋಜನೆಯು ಹೊಂದಿದೆ.

ಕಲಾವಾರ್ತೆ : ಅಕಾಡೆಮಿಯು 'ಕರ್ನಾಟಕ ಕಲಾವಾರ್ತೆ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೋರತರುತ್ತಿದೆ. ಇದರಲ್ಲಿ ಅಕಾಡೆಮಿಯ ಮತ್ತು ಇತರ ಕಲಾಸಂಘ-ಸಂಸ್ಥೆಗಳ ಚಟುವಟಿಕೆಗಳು, ಕಲಾಲೇಖನಗಳು, ಪ್ರಕಟನೆಗಳು ಇತ್ಯಾದಿ ವಿಷಯಗಳನ್ನು ಪ್ರಕಟಿಸಲಾಗುತ್ತಿದೆ.

ಈ ಮೇಲಿನ ಕಾರ್ಯಕ್ರಮಗಳ ಸ್ವರುಪದಲ್ಲಿ ಅನೇಕ ಬದಲಾವಣೆಯಾಗಿ ಕಂಡುಬಂದರು ಇವು ನಿರಂತರ ಚಾಲನೆಯಲ್ಲಿ ಕಂಡುಬರುತ್ತದೆ.

ಯಂಗ್ ಸ್ಟ್ರೋಕ್ಸ್ : ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ

ಪ್ರದರ್ಶಿಸಲಾಗಿದೆ ಸುಂದರ ಕೈಪಿಡಿಯನ್ನೂ ಸಹ ರಚಿಸಲಾಗಿದೆ.

ಆದರೇ ಇನ್ನು ಕೇಲವು ಕಾರ್ಯಕ್ರಮಗಳ ಆಯ್ದು ಅಧ್ಯಕ್ಷರ ಅವದಿಯಲ್ಲಿ ಆರಂಭ ಗೊಂಡ ಅಲ್ಪ , ಸ್ವಲ್ಪ ಕಾಲ ಮುಂದುವರೆದು ನಂತರ ಅವು ನಿಂತುಹೊಗಿರುವದು ಕಂಡುಬರುತ್ತದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತೆ ಕಾಣಬಹುದಾಗಿದೆ.

ಕಲಾಪ್ರದರ್ಶನ : ಅಕಾಡೆಮಿಯು ಸಂಗ್ರಹದಲ್ಲಿರುವ ಆಯ್ದ ಕಲಾಕೃತಿಗಳನ್ನು ಮತ್ತು ತಿರ್ಪುಗಾರರು ಆಯ್ಕೆ ಮಾಡಿದ ಕಲಾವಿದರ ಕಲಾಕೃತಿಗಳನ್ನು ವಿವಿಧ ಸ್ಥಳಗಳಲ್ಲಿ ಪ್ರದರ್ಶನ ಮಾಡಲಾಗುವದು. ಅಲ್ಲದೆ ಅಕಾಡೆಮಿಯು ಒಂದು ಸಂಚಾರಿ ವಾಹನವನ್ನು ಹೊಂದಿದ್ದು, ಅದರ ಮೂಲಕ ಕಲಾಕೃತಿಗಳನ್ನು ಪ್ರದರ್ಶನವನ್ನು ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಮಾಡುತ್ತಿತ್ತು.

ಮನೆಗೊಂದು ಕಲಾಕೃತಿ : ಮಧ್ಯಮ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳನ್ನು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಲಾಗುತ್ತಿದ್ದು, ಜನರ ಉತ್ಸಾಹ ಹಾಗೂ ಪ್ರೋತ್ಸಾಹದಿಂದ ಹೆಚ್ಚು ಕೃತಿಗಳು ಮಾಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿತು, ಇದರಿಂದ ಅಕಾಡೆಮಿಯ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯಾ ಬಂದಿತು.

ನಿಮ್ಮೊಂದಿಗೆ ನಾವು : ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿತು. ನೂರರ ಕಡೆಗೆ ಹೆಜ್ಜೆ ಇಟ್ಟಿರುವ ಈ ಕಾರ್ಯಕ್ರಮವು, ಕನಿಷ್ಟ ಇಪ್ಪತ್ತೈದು ಸಾವಿರ ಜನರಿಗೆ ಕಿರುಪರಿಚಯವನ್ನು ಮಾಡಿಸಿದೆ.

ಜನಪದ ಶೃತಿ–ಆಧುನಿಕ ಕೃತಿ : ಜಾನಪದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ' ಗಳನ್ನು ನಿರ್ಮಿಸುವ ಕಾರ್ಯಕ್ರಮ ಇದಾಗಿದೆ.

ಯುವ ಕಲಾವಿದರಿಗೆ ಫೆಲೋಶಿಪ್ : ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ, ಅವರಿಗೆ ಒಂದು ವರ್ಷದ ಅವಧಿಗೆ ಧನಸಹಾಯ ನೀಡಿ, ಸ್ವತಂತ್ರವಾಗಿ ಚಿತ್ರಿಸಿ, ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿಕೊಡಲಾಗಿದೆ.

ಹಿರಿಯ ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ ; ಹಿರಿಯ ಕಾಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ, ಕಾಲಾಕ್ಷೇತ್ರದಲ್ಲಿ ಅಭಿವೃದ್ದಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ

ಚೇತನಗಳಿಗೆ 'ವಾರ್ಷಿಕ ಪುರಸ್ಕಾರ'ವನ್ನು ನೀಡಿ ಗೌರವಿಸುವುದು, ಕ ನ ಾ ರ್ ಟ ಕ ಲಲಿತಕಲಾ ಅಕಾಡೆಮಿಯ ಚಿತ್ರಗಳನ್ನು, ಶಿಲ್ಪಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ೧೯೬೫-೬೬ ರಿಂದ ರೂಢಿಸಿಕೊಂಡು ಬಂದಿದೆ. ಆದರೆ ೧೯೭೧ ರಿಂದ ೧೯೭೭ ಅವಧಿಯಲ್ಲಿ ಪ್ರಶಸ್ತಿಪ್ರಧಾನ ನಡೆಯಲಿಲ್ಲ. ಒಟ್ಟಾರೆ ಇಲ್ಲಿಯವರಗೆ ಒಟ್ಟು ೬೩ ಜನ ಪ್ರಶಸ್ತಿ ಸ್ವೀಕರಿಸಿದ್ದಾರೆ. ಹೀಗೆ ಈ ಪ್ರಶಸ್ತಿ ಗಳಿಸಿದವರಲ್ಲಿ ಕೆಲವರು ಯುವಕರನ್ನು ಬಿಟ್ಟರೆ ಬಹುಪಾಲು ಹಿರಿಯರೇ ಆಗಿರುತ್ತಾರೆ. ತಮ್ಮ ತಮ್ಮ ಕಲಾಬದುಕಿನಲ್ಲಿ ಕಲೆಯ ಕ್ಷೇತ್ರದಲ್ಲಿ ಉನ್ನತ ಸಾಧನೆ, ಸಿದ್ದಿ ಪಡೆದವರೇ ಆಗಿರುತ್ತಾರೆ. ಸಾಮಾನ್ಯವಾಗಿ ಪ್ರಶಸ್ತಿ ವಿಜೇತರೆಲ್ಲರೂ ಬಾಂಬೆಯಿಯ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟನಲ್ಲಿ ಇಲ್ಲವೆ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಶಿಕ್ಷಣ ಪಡೆದವರೇ ಆಗಿರುತ್ತಾರೆ.

ಪ್ರಶಸ್ತಿ ವಿಜೇತರ ವಿವರ ಗಮನಿಸಿದಾಗ ಅವರ ಸೂಕ್ಷ್ಮ ಕಲಾಜೀವನ, ಅವರ ಶಿಕ್ಷಣ ಪಡೆದ ಕಲಾಶಾಲೆ, ಅವರವರ ಕಲಾಧ್ಯಾಪಕರ ಹೆಸರುಗಳನ್ನು ಸ್ಮರಿಸಬಹುದಾಗಿದೆ. ಅಂತವರು ಆ ಕಾಲದಲ್ಲಿ ಯಾವ ಗೌರವ ಪ್ರಶಸ್ತಿಕಾಣದೆ ಹೋದವರು. ಕಲೆಗಾಗಿ ದುಡಿದ ಉತ್ತಮ ಶಿಷ್ಯರನ್ನು ನಾಡಿಗೆ ನೀಡಿದ ಹಿರಿಯರು ಅವರು ಪ್ರಶಸ್ತಿ ಪಡೆದ ಪ್ರತಿಯೊಬ್ಬ ಚಿತ್ರಕಾರರ, ಶಿಲ್ಪಿಗಳ ವಿವಿಧ ಶೈಲಿ ಪ್ರಸಿದ್ಧ ಅವರವರ ವಿಸ್ಮಯಗಳಲ್ಲಿ ಸ್ಪಷ್ಟವಾಗುತ್ತದೆ.

ಆರ್. ಎಸ್. ಎನ್., ಎಸ್. ನಂಜುಂಡಸ್ವಾಮಿಯವರು ಪ್ರಶಸ್ತಿ ಸಮಾರಂಭಗಳಿಗೆ ಬರದೆ ಉಳಿದವರು ಮರಣೋತ್ತರ ಪ್ರಶಸ್ತಿಯನ್ನು ಶಿಲ್ಪಿ ಕಾಳಪ್ಪ ಮಾನಪ್ಪ ಕುಮಾರರ ಪುತ್ರ ಸ್ವೀಕರಿಸಿದರು. ಪ್ರಸಿದ್ದ ಕಲಾವಿದರ ಸಾಲಿನಲ್ಲಿ ಕಲಾವಿಮರ್ಶಕರಾದ ದಿ॥ ಜಿ.ವೆಂಕಾಟಚಲಂ ಹಾಗೂ ಬಿ.ವಿ.ಕೆ. ಶಾಸ್ತ್ರಿಗಳೂ ಪ್ರಶಸ್ತಿ ವಿಜೇತರಾಗಿದ್ದಾರೆ. ಪ್ರಶಸ್ತಿಗಳಿಸಿದ ಹಲವರು ಈಗ ನಮ್ಮ ನಡುವೆ ಇಲ್ಲ. ಆಯಾ ವರ್ಷದಲ್ಲಿ ಪ್ರಕಟವಾದ ಪ್ರಶಸ್ತಿ ವಿಜೇತರ ವಿವರಗಳು ಇಗ ನಮಗೆ ದೊರಕುವದು ಕಷ್ಟಸಾಧ್ಯವಾಗುತ್ತದೆ. ಇದನ್ನು ಗಮನಿಸಿ ಪ್ರಶಸ್ತಿ ಪಡೆದವರೆಲ್ಲರ ವಿವರಗಳು ಒಂದೆಡೆ ದೊರಕಿಸಿಕೊಡುವ ಉದ್ದೇಶದಿಂದ ಲಲಿತಕಲಾ ಅಕಾಡೆಮಿ ಸಂಕಲನವನ್ನು ಹೊರತಂದಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರತಿವರ್ಷವೂ ಕಲಾವಿದರು ಕಲೆಗಾಗಿ, ಕಲಾಸೇವೆಗಾಗಿ ಹಾಗೂ ಕಲೆಯ ಅಭಿವೃದ್ಧಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ. ಲಲಿತಕಲಾ ಅಕಾಡೆಮಿಯು ೧೯೬೫ರಿಂದ ೧೯೮೬ರ ವರೆಗೆ ಪ್ರಸಸ್ತಿಗಳನ್ನು ನೀಡಿದಾಗ ಅವರ ಬಗ್ಗೆ ಒಂದು ಕಿರುಸಂಕಲವನ್ನು ಪ್ರಕಟಿಸಿತು, ನಮ್ಮ ಆಕಾಡೆಮಿಯು ಪ್ರಕಟಣೇಗಳು ಅತ್ಯಂತ ಜನಪ್ರಿಯವಾಗುತ್ತಿರುವುದು ಈ ಪುಸ್ತಕ ಪುನರ್ ಮುದ್ರಣವಾಗುತ್ತಿರುವುದೇ ಸಾಕ್ಷಿ ಈ ಆವೃತ್ತಿಯಲ್ಲಿ ೧೯೯೩ರ ವರೆಗೆ ಪ್ರಶಸ್ತಿಗಳನ್ನು

ಪಡೆದ ಕಲಾವಿದರ ಪರಿಚಯವನ್ನು ಸಹ ಸೇರಿಸಲಾಗಿದೆ. ಇದರಿಂದ ಅಕಾಡೆಮಿಯಿಂದ ಇದುವರೆಗೂ ಪ್ರಶಸ್ತಿ ಪಡೆದ ೯೭ ಕಲಾವಿದರ ಪರಿಚಯ ಒಂದೆಡೆ ದೊರೆಯುವಂತಾಗುವದು ಅಲ್ಲದೇ ಪುನರ್ ಮುದ್ರಣ ಮಾಡುವಾಗ ಹಿಂದೆ ಕಂಡಿರಬಹುದಾದ ಕೆಲವು ದೋಷಗಳನ್ನು ಸರಿಪಡಿಸಲು ಪ್ರಯತ್ನಿಸಲಾಗಿದೆ.

ಕೃಷ್ಣಸೆಟ್ಟಿಯವರು ಅಧ್ಯಕ್ಷರಾಗಿನ ಅವಧಿಯಲ್ಲಿ ನಿರಂತರ ಲಲಿತಕಲಾ ಅಕಾಡೆಮಿ ಕಾರ್ಯಕ್ರಮಗಳ ಮಾಡುವುದರ ಜೊತೆಗೆ ಅನೇಕ ವಿನೂತ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ. ಸಾಂಧರ್ಬಿಕವಾಗಿ ಇಲ್ಲಿ ಒಂದೆರಡು ವಿನೂತ ಯೋಜನೆಗಳ ಕುರಿತು ವಿವರಿಸಲಾಗಿದೆ. ಕಲಾವಿದರು ಚೆನ್ನೈನ ಬಿನಾಲಿಯು ಮತ್ತು ದೆಹಲಿಯ ಆರ್ಟ್ ಫೇರ್' ನೋಡಿಬರಲು ಸಾವಿರಾರು ಕಲಾವಿದರಿಗೆ ಗೌರವ ಸಂಭಾವನೆ ಲಲಿತಕಲಾ ಅಕಾಡೆಮಿಯು ನೀಡಿದ್ದು, ಇದೊಂದು ಚ್ಯಾರಿತ್ರಿಕ ಇತಿಹಾಸವಾಗಿದೆ. ಎಷ್ಟೋ ಯುವ ಮತ್ತು ಹಿರಿಯ ಕಲಾವಿದರಿಗೆ ಇಂತಹ ಸೃಜನಶೀಲ ಕಲಾಪ್ರರ್ದಶನಗಳನ್ನು ನೋಡಲು ಇದಕ್ಕಿಂತಲೂ ಪೂರ್ವದಲ್ಲಿ ಸಾಧ್ಯವೆ ಆಗಿರಲಿಲ್ಲ. ಈ ಯೋಜನೆಯ ಮೂಲಕ ಕೃಷ್ಣಸೆಟ್ಟಿಯವರು ಹೊಸ ದಾಖಲೆಯನ್ನು ಸೃಷ್ಟಿಸಿದ್ದಾರೆ.

ಚಿತ್ರಪರಿಸೆ : ಈ ಕಾರ್ಯಕ್ರಮವನ್ನು ಕೃಷ್ಣಸೆಟ್ಟಿಯವರು ತಮ್ಮ ಅಧ್ಯಕ್ಷರ ಅವಧಿಯಲ್ಲಿ ಪ್ರಾರಂಭಿಸಿದರು. ಈ ಕಾರ್ಯಕ್ರಮದ ಮೂಲ ಧ್ಯೇಯ ಕಲಾಕೃತಿಗಳ ಪ್ರದರ್ಶನ, ಕಲಾಶಿಬಿರ, ಕಲಾಪ್ರಾತ್ಯಕ್ಷಿಕೆ, ವಿಚಾರ ಸಂಕಿರಣ; ಕಲಾಮೇಳ, ಸಮಕಾಲೀನ ಕಲೆ ಮತ್ತು ಜನಸಾಮಾನ್ಯರ ನಡುವಿನ ಅಂತರ ಕೂಡಿಸುವುದು; ಕಲಾವಿದರು ಸುಲಭವಾಗಿ ತಮ್ಮ ಕಲಾಕೃತಿ ಪ್ರದರ್ಶಿಸಿ ಮಾರಾಟ ಮಾಡಲು; ಕಲಾಸಕ್ತರು ಸಾವಿರಾರು ಕೃತಿ ವೀಕ್ಷಿಸಿ ಆಸ್ವಾದಿಸಲು ಮತ್ತು ಕೃತಿಗಳನ್ನು ಮಾಧ್ಯಮ ಮತಿಗಳ ಹಾವಳಿಯಿಲ್ಲದೇ ನೇರವಾಗಿ ಚರ್ಚಿಸಿ ಖರಿದಿಸಲು; ವಿಶೇಷವಾಗಿ ರಾಜ್ಯದ ಗ್ರಾಮೀಣ ಭಾಗದ ಕಲಾವಿದರಿಗೆ ತಮ್ಮ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಟಕ್ಕೆ ಸುಲಭ ವೇದಿಕೆ ಒದಗಿಸಿವುದು; ಜನಸಾಮಾನ್ಯರು ಕಲಾವಿದರೊಂದಿಗೆ ಅನ್ಯೋನ್ಯವಾಗಿ ಬೆರೆಯಲು; ಗ್ಯಾಲರಿ ಸಂಸ್ಕೃತಿಯನ್ನು ಸರಳಗೊಳಿಸಲು ಹೀಗೆ ಹತ್ತು ಹಲವು ಧ್ಯೇಯೋದ್ದೇಶಗಳ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವು ಜರುಗಿತು. ಈ ವಿವರಗಳನ್ನು ಚಿತ್ರಪರಿಸೆ ಎಂಬ ಆಮಂತ್ರಣ ಪತ್ರಿಕೆದಿಂದ ಸಗ್ರಹಿಸಲಾಗಿದೆ.

ದೃಶ್ಯಕಲಾ ಸಂಶೋಧನಾ ಸಾಹಿತ್ಯ ಫೆಲೋಶಿಪ್ : ೨೦೧೦ –೧೧ ಸಾಲಿನಲ್ಲಿ ಸಂಶೋಧನ ಬರಹಕ್ಕೆ ಒಂದು ಲಕ್ಷರುಪಾಯಿಳ ಬಹುಮಾನ ಫೆಲೋಶಿಪ್ ಧನ ಸಹಾಯ ಪ್ರಪ್ರಥಮ ಬಾರಿಗೆ ಕೃಷ್ಣಸೆಟ್ಟಿ ಅವರ ಅವಧಿಯಲ್ಲಿ ಆರಂಭವಾಗಿದ್ದು ಗಮನಾರ್ಹ.

ದೃಶ್ಯಕಲೆಯ ಪುಸ್ತಕ ಪ್ರಕಟಣೆಯಲ್ಲಿ ಇಡೀ ಭಾರತದ ದೇಶೀಭಾಷೆಗಳಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗಣನೀಯ ಕೆಲಸವನ್ನು ಮಾಡಿದೆ. ಅದೇ ಹಾದಿಯಲ್ಲಿ ಹಲವು ದಿಟ್ಟ ಹೆಜ್ಜೆಗಳನ್ನು ಇಡುತ್ತಾ ಸಾಗುತ್ತಿದೆ. ಕನ್ನಡದ ಹಿರಿಯ ಸಮಕಾಲೀನ ಕಲಾವಿದರ ಅನೇಕರ ಕಲೆಯ ಕುರಿತು ಪ್ರಕಟನೆಗಳು ಸಂಖ್ಯೆಯಿಂದ ಮಾತ್ರವೇ ಅಲ್ಲದೆ ಗುಣ ಮೌಲ್ಯದಿಂದಲೂ ಹೆಚ್ಚಿನದನ್ನು ಸಾಧಿಸಿರುವುದು ಹರ್ಷದ ಸಂಗತಿ. ಕನ್ನಡದ ದೃಶ್ಯಕಲೆಯ ಕಲಾವಿದರೆ ಅಲ್ಲದೆಕಲೆ, ಅದರ ಹಲವು ಮಗ್ಗಲುಗಳ, ನೋಟ ಪಲ್ಲಟಗಳ ಕುರಿತು ಪ್ರಕಟಣೆಗಳಲ್ಲಿ ಐತಿಹಾಸಿಕತೆಯ ಜೊತೆ ಜೊತೆಗೆ ಸಮಕಾಲೀನತೆಯನ್ನೂ ಬಿಂಬಿಸಲಾಗಿದೆ. ಪ್ರಸ್ತುತ ಪ್ರಕಟಣೆಗಳು ಕಲಾವಿದ್ಯಾರ್ಥಿಗಳಷ್ಟೇ ಆಸಕ್ತ ಕಲಾಭಿಮಾನಿಗಳಿಗೂ, ಕನ್ನಡ ಕಲೆಯ ಅಧ್ಯಾಯನಶೀಲರಿಗೂ ಉಪಯುಕ್ತ ಆಕರಗಳಾಗಿಯೂ ಮೂಡಿಬಂದಿವೆ ಮತ್ತು ಇನ್ನಷ್ಟು ಬರುತ್ತಿವೆ.

೨೦೧೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಗೆ "ಸುವರ್ಣ ಸಂಭ್ರಮ"ದ ವರ್ಷ. ಅದೇ ವರ್ಷ ಫೆಬ್ರವರಿಯಲ್ಲಿ ಅಕಾಡೆಮಿಗೆ ಹೊಸ ತಂಡವೊಂದು ನಿಯೋಜನೆ-ಗೊಂಡಿತ್ತು. ಹಿರಿಯ ಕಲಾವಿದರು ಡಾ. ಎಂ. ಎಸ್. ಮೂರ್ತಿ ಅವರ ನೇತೃತ್ವದ ಈ ತಂಡ ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಹೊಸ ಕಾಯಕಲ್ಪ ನೀಡಲು ಮೂರು ವರ್ಷಗಳ ಅವಧಿಯಲ್ಲಿ ಅನೇಕ ಕ್ರಮಗಳನ್ನು ಕೈಗೊಂಡು ಶ್ರಮಿಸಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಐವತ್ತು ತುಂಬಿದ ಹಿನ್ನೆಲೆಯಲ್ಲಿ ಡಾ. ಎಂ. ಎಸ್. ಮೂರ್ತಿ ಮತ್ತು ಅವರ ತಂಡ ಅಕಾಡೆಮಿಯ ಪರಂಪರೆ-ಸಂಪ್ರದಾಯದ ಬೇರನ್ನು ಮತ್ತಷ್ಟು ಗಟ್ಟಿಗೊಳಿಸುವದರ ಜೊತೆಗೆ ಅಕಾಡೆಮಿ ಘನತೆ-ಗೌರವ ಹೆಚ್ಚಿಸುವ ಕಡೆಗೂ ನಿಗಾ ಇರಿಸಿತು. ಅಕಾಡೆಮಿಯ ಸುವರ್ಣ ಸಂಭ್ರಮಾಚರಣೆಯನ್ನು ಅತ್ಯಂತ ಅರ್ಥಪೂರ್ಣ- ವಾಗಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿತು.

ಗಡಿಭಾಗದ ಬೆಳಗಾವಿಯಲ್ಲಿನ ಸುವರ್ಣ ಸಂಭ್ರಮಾಚರಣೆಯಿಂದ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ೨೦೧೭ನೇ ಸಾಲಿನ ಅಕಾಡೆಮಿಯ ಗೌರವ ಪ್ರಶಸ್ತಿಗಳನ್ನು ನೀಡುವವರೆಗೆ ಅನೇಕ ಮೈಲಿಗಲ್ಲುಗಳನ್ನು ದಾಟಿ ಗುರುತರ ಹೆಚ್ಚು ಗುರುತುಗಳನ್ನು ಮೂಡಿಸಿದ್ದು ವಾಸ್ತವ. ಮೂರು ವರ್ಷಗಳ ಕಾಲ ಸತತವಾಗಿ ರಾಜ್ಯಾದ್ಯಂತ ಹಾಗೂ ರಾಜ್ಯದ ಹೊರಗಡೆಗೂ ಸಹ ಚಿತ್ರಕಲಾ ಶಿಬಿರಗಳನ್ನು ಆಯೋಜಿಸುತ್ತಾ ಬಂದ ಅಕಾಡೆಮಿಯ ಶಿಬಿರಗಳಾಚೆಗೆ ತನ್ನೆಜ್ಜೆಯನ್ನು ಇರಿಸಿದ್ದು, ವಿಶೇಷ "ಸಂವಹನ"ಕ್ಕೆ ಸಂಕೋಚಪಡುತ್ತಿದ್ದ ದೃಶ್ಯಕಲಾವಿದರನ್ನು ಹಲವು ವಿಚಾರ ಸಂಕಿರ್ಣಗಳು, ಮೌಲ್ಯಯುತ ಕಮ್ಮಟಗಳ ಮೂಲಕ

ಸಂವಹನದ ಹಾದಿಗೆ ಕರೆತಂದಿದ್ದು, ಸಿದ್ಧ ಮಾದರಿಯನ್ನ ಮುರಿದು ಹೊಸ ಮಾದರಿಯನ್ನು ಹುಟ್ಟುಹಾಕುವ ಪ್ರಯತ್ನ ಮಾಡಿರುವುದು ನಿಜಕ್ಕೂ ಅವಿಸ್ಮರಣೀಯವಾದುದು.

ಅಕಾಡೆಮಿಯ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ತಲಾ ಒಂದು ಲಕ್ಷ ರೂಪಾಯಿ ನಗದು ಬಹಮಾನವುಳ್ಳ "ಕಲಾಸಂಕ್ರಾಂತಿ" ರಾಷ್ಟ್ರೀಯ ಪುರಸ್ಕಾರಗಳನ್ನು ಹದಿನೈದು ಮಂದಿಗೆ ನೀಡಿ ಸತ್ಕರಿಸಿದೆ. ದೇಶದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ರಾಜ್ಯಮಟ್ಟದಲ್ಲಿ ಕಲಾವಿದರಿಗೆ ಗುರುತಿನ ಚೀಟಿ ವಿತರಿಸಿ ಕಲಾವಿದರ ದಾಖಲೀಕರಣಕ್ಕೆ ಹೊಸ ರೂಪ ನೀಡಲಾಗಿದೆ. ಕಲಾಸಂಚಾರ, ತಿಂಗಳಚಿತ್ರ, ಪಡಸಾಲೆ ಆರ್ಟ್ ಗ್ಯಾಲರಿ, ತಿಂಗಳ ಕಲಾವಿದರು ಮುಂತಾದ ವೈವಿಧ್ಯಮಯ, ವಿನೂತನವಾದ ಕಾರ್ಯಕ್ರಮಗಳನ್ನು ಅನಷ್ಠಾನಗೊಳಿಸಿ ಹೊಸ ದಾರಿತೆರೆದಿದೆ. ಆ ಎಲ್ಲಾ ಕಾರ್ಯಕ್ರಮಗಳನ್ನು ಮತ್ತು ಹೆಜ್ಜೆ ಗುರುತುಗಳನ್ನು ಅಕಾಡೆಮಿಯ ಇತಿಹಾಸದ ದೃಷ್ಠಿಯಿಂದ ದಾಖಲಿಸುವುದು ಮಖ್ಯವಾಗಿದೆಯಲ್ಲದೆ, ಸುವರ್ಣ ಸಂಭ್ರಮದಲ್ಲಿ ನಡೆದ ಸಾರ್ಥಕ ಕೆಲಸಗಳು ಮುಂದಿನ ತಲೆಮಾರು ಮತ್ತು ತಂಡಕ್ಕೆ ಪ್ರೇರಣೆಯಾಗಲಿರುವುದು ಎಂದು ಅಂದಿನ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ. ಎಸ್. ಮೂರ್ತಿಯವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಸಾಕ್ಷ್ಯಚಿತ್ರ

ದೃಶ್ಯಕಲಾವಿದರ ಬದುಕು ಮತ್ತು ಸಾಧನೆಯನ್ನು ದಾಖಲಿಸುವ ಯೋಜನೆಯಾದ ಸಾಕ್ಷ್ಯಚಿತ್ರಗಳ ನಿರ್ಮಾಣ ಯೋಜನೆ ಈ ಅವಧಿಯಲ್ಲಿ ಅನುಷ್ಠಾನಗೊಂಡಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರೂಪಿಸಿರುವ ಈ ಯೋಜನೆಯಡಿ ಆಯಾ ಅಕಾಡೆಮಿಗಳು ಆಯಾ ಕ್ಷೇತ್ರದಲ್ಲಿನ ಸಾಧಕರ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ನೆರವಾಗಬೇಕು. ಈ ಸರಣಿಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಿರಿಯ ಕಲಾವಿದರಾದ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಕೆ.ಜಿ. ಸುಬ್ರಮಣ್ಯನ್, ಎಂ.ಬಿ. ಪಾಟೀಲ್, ಕೆ.ಟಿ. ಶಿವಪ್ರಸಾದ್, ಬಿ. ಮಾರುತಿ, ಬಿ.ವಿ.ಕೆ. ಶಾಸ್ತ್ರಿ, ಬಸವರಾಜು ಎಲ್.ಜಾನೆ ಮತ್ತು ಬಾಬುರಾವ್ ನಡೋಣಿ ಅವರನ್ನೊಳಗೊಂಡಂತೆ ಒಟ್ಟು ಏಳು ಮಂದಿ ಸಾಧಕರ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ.

ನೆರವಿನ-ಆಸರೆ : ದೃಶ್ಯಕಲಾ ವಲಯದಲ್ಲಿ ಅಭ್ಯಾಸಿಗಳಾಗಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ವ್ಯವಸ್ಥೆಯೂ ಲಲಿತಕಲಾ ಅಕಾಡೆಮಿಯಲ್ಲಿದೆ. ಈ ಯೋಜನೆಯಡಿ ಮೂರು ವರ್ಷಗಳ ಅವಧಿಯಲ್ಲಿ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ

ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ೪೦೦ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ 'ಭಾಗ್ಯ' ಕಲ್ಪಿಸಲಾಗಿದೆ. ಮೂರು ವರ್ಷದಲ್ಲಿ ಇಷ್ಟೊಂದು ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದ್ದು ಗಮನಾರ್ಹ ದಾಖಲೆಯಾಗಿದೆ. ಅಂತೆಯೇ ಕಲಾವಿದರ ಏಕ ಮತ್ತು ಸಮೂಹ ಕಲಾಪ್ರದರ್ಶನಕ್ಕೆ ಸುಮಾರು ೯೦ ಮಂದಿ ಕಲಾವಿದರಿಗೆ ಅಕಾಡೆಮಿ ಆರ್ಥಿಕ ನೆರವಿನ ಆಸರೆ ಒದಗಿಸಿದೆ.

ವೈದ್ಯಕೀಯ ನೆರವು : ಅನಾರೋಗದಿಂದ ಬಳಲುತ್ತಿರುವ ಕಲಾವಿದರಿಗೆ ಆರ್ಥಿಕ ನೆರವು ಸಂಜೀವಿನಿಯಾಗಿದ್ದು, ೨೦೧೪ರಲ್ಲಿ ಹನ್ನೆರಡು ಜನ ಸಂತ್ರಸ್ಥ ಕಲಾವಿದರಿಗೆ ವೈದ್ಯಕೀಯ ನೆರವಿನ ಹಸ್ತವನ್ನು ಚಾಚಿ ಅಕಾಡೆಮಿ ತನ್ನ ಕರ್ತವ್ಯವನ್ನು ಸಮರ್ಥವಾಗಿ ನೆರವೇರಿಸಲಾಗಿದೆ.

ಹೀಗೆ ಹಲವಾರು ಜನಪ್ರಿಯ ಮತ್ತು ಕಲೆಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಹಾಗೂ ಕಲಾವಿದರ ಏಳ್ಗೆಗಾಗಿ ರಚನೆಗೊಂಡಂತಹ ಈ ಕಾರ್ಯಕ್ರಮಗಳು ಕರ್ನಾಟಕದಲ್ಲಿಯೇ ಅಲ್ಲದೇ ಇಡೀ ದೇಶದುದ್ದಕ್ಕೂ ಹೆಸರುವಾಸಿಯಾಗಿದೆ. ಅಲ್ಲದೇ ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಉತ್ತಮ ಸ್ಥಾನವನ್ನು ತಂದುಕೊಟ್ಟಿದೆ. ಪ್ರಸ್ತುತ ಈ ಅಧ್ಯಾಯದಲ್ಲಿನ ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಕಾರ್ಯಕ್ರಮಗಳ ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಅಧ್ಯಯನ ಮಾಡಲಾಗಿದೆ.

□□□

□□□



ಸಚಿವರಾದ ಕೆ.ವಿ. ಶಂಕರೇಗೌಡಾ. ಬಿ.ರಾಚಯ್ಯ ಮತ್ತಿತ್ತರಿಂದ ಪ್ರದರ್ಶನ ವಿಕ್ಷಣೆ.



ಅಕಾಡೆಮಿಯ ಅಧ್ಯಕ್ಷೆ ಸುಧಾ ವಿ.ರೆಡ್ಡಿ.ಅವರಿಂದ ಚಿತ್ರಕಲಾ ಪ್ರದರ್ಶನ ವಿಕ್ಷಣೆ.



ಕೆ.ಕೆ. ಹೆಬ್ಬಾರ್‌ರಿಂದ ಯುಸುಫ್ ಅರಕ್ಕಲ್‌ರಿಗೆ ಪ್ರಶಸ್ತಿ ವಿತರಣೆ.



ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮುಖಮಂತ್ರಿ ಎಸ್.ಆರ್. ಬೊಮ್ಮಾಯಿ ಸಂಸ್ಕೃತಿ ಸಚಿವ ಡಾ. ಜೀವರಾವ ಆಳ್ವ ಹಾಗೂ ಕಲಾವಿದ ವಿಜಯ ಸಿಂಧೂರ್



ರಾಜ್ಯಪಾಲ ಗೋವಿಂದ ನಾರಾಯಣ್‌ರಿಂದ ವಾರ್ಷಿಕ ಕಲಾ ಪ್ರದರ್ಶನ ವೀಕ್ಷಣೆ.



ವಿಧಾನಸಭಾಧ್ಯಕ್ಷ ಬಿ.ಜಿ. ಬಣಕಾರ್‌ರಿಂದ ಅಕಾಡೆಮಿಯ ಆಯೋಜಿತ ಕಲಾ ಪ್ರದರ್ಶನ ವೀಕ್ಷಣೆ.



ಕಲಾ ಪ್ರದರ್ಶನ ವಿಕ್ಷಣೆಯಲ್ಲಿ ಸಾರ್ವಜನಿಕರು.



ಕಲಾವಿದ ವೈ.ಸುಬ್ರಮಣ್ಯರಾಜು ಮತ್ತಿತರೊಂದಿಗೆ ಸಚಿವ ಡಾ. ಜೀವರಾಜ ಆಳ್ವರಿಂದ ಕಲಾ ಪ್ರದರ್ಶನ ವಿಕ್ಷಣೆ.



ಮಂಡ್ಯದ ಮಾದನಹಳ್ಳಿಯಲ್ಲಿ ಲಲಿತಕಲಾ ಅಕಾಡೆಮಿಯಿಂದ ಎತ್ತಿನ ಬಂಡಿಯ ಮೇಲೆ ಕಲಾರಚನೆ ಶಿಬಿರದಲ್ಲಿ ಪಾಲ್ಗೊಂಡ ಕಲಾವಿದರ ಸಮೂಹ.



ಶಿಬಿರದಲ್ಲಿ ಸಿದ್ಧವಾದ ಚಿತ್ರಕಲಾಕೃತಿ ಎತ್ತಿನ ಬಂಡಿ.



ನೂತನ ಅಧ್ಯಕ್ಷರಿಗೆ ಮಾಜಿ ಅಧ್ಯಕ್ಷರು ಗೌರವ ಸಲ್ಲಿಸುತ್ತಿರುವುದು



ನೂತನ ಅಧ್ಯಕ್ಷರು, ಡಾ. ಎಂ.ಎಸ್ ಮೂರ್ತಿ ಮತ್ತು ಕಲಾವಿದರು

ಅಧ್ಯಾಯ : ಮೂರು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಲಾಚಟುವಟಿಕೆಗಳು

ಅಧ್ಯಾಯ : ಮೂರು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಲಾಚಟುವಟಿಕೆಗಳು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಹಮ್ಮಿಕೊಂಡಿರುವ ಪ್ರಮುಖ ಕಾರ್ಯಕ್ರಮಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಒಂದೊಂದಾಗಿ ಈ ಮುಂದಿನಂತೆ ಚರ್ಚಿಸಲಾಗಿದೆ.

೦೧. ಕಾರ್ಯಾಗಾರ
೦೨. ಕಲಾಶಿಬಿರ
೦೩. ಕಲಾಪ್ರದರ್ಶನ
೦೪. ಶಿಷ್ಯವೇತನ ಮತ್ತು ವಿದ್ಯಾರ್ಥಿವೇತನ
೦೫. ಕಲಾ ಸಂಚಾರ
೦೬. ಪ್ರಶಸ್ತಿ ಪುರಸ್ಕಾರಗಳು
೦೭. ಗುರುತಿನ ಚೀಟಿ
೦೮. ಕಲಾವಾರ್ತೆ

೦೧. ಕಾರ್ಯಾಗಾರ

ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿದ್ಯಾರ್ಥಿಗಳಿಗಾಗಿ ಹಲವಾರೂ ರೀತಿ ಕಾರ್ಯಾಗಾರವನ್ನು ಎಂದಿನಿಂದಲೂ ಮಾಡುತ್ತಾ ಬಂದಿದೆ. ಅದರಲ್ಲಿ "ವ್ಯಂಗ್ಯ ಚಿತ್ರಕಲೆ", "ಕಿನ್ನಾಳ", "ಗಂಜೀಫಾ", "ಬಿದರಿ ಕಲೆ", "ಇನ್ಸ್ಟಾಲೇಷನ್", "ಪೆಯಿಂಟಿಂಗ್", "ಪ್ರದರ್ಶನಕಲೆ", "ವಿಡಿಯೋ ಆರ್ಟ", "ಭಿತ್ತಿಚಿತ್ರ ಕಾರ್ಯಾಗಾರ", "ಮೈಸೂರು ಸಾಂಪ್ರದಾಯಕ ಕಾರ್ಯಾಗಾರ" ಹೀಗೆ ಅನೇಕ ಕಾರ್ಯಗಾರಗಳನ್ನು ರಾಜ್ಯದ ನಾನಾ ಭಾಗದ ಹಂಪಿ, ಬೆಂಗಳೂರು, ಮೈಸೂರು, ಬೀದರ, ಬಳ್ಳಾರಿ, ಧಾರವಾಡ ಮುಂತಾದೆಡೆಗೆ ಏರ್ಪಡಿಸುತ್ತಾ ಬಂದಿದೆ. ಇದರೊಂದಿಗೆ ಈ ಕಾರ್ಯಾಗಾರಗಳಲ್ಲಿ ವಿದ್ಯಾರ್ಥಿಗಳಿಗೆ ಊಟ, ವಸತಿಯೊಂದಿಗೆ ಗೌರವ ಸಂಭಾವನೆಯೂ ಸಹ ನೀಡುತ್ತಾ ಬಂದಿದೆ.



ಕಿನ್ನಾಳ ಕಲೆ ಕಾರ್ಯಾಗಾರ, ಬೀದರ



ವ್ಯಂಗ್ಯಚಿತ್ರ ಕಾರ್ಯಾಗಾರ, ಹಂಪಿ



ಕಲಾವಿದ್ಯಾರ್ಥಿಗಳಿಗೆ "ಕಂಪ್ಯೂಟರ್ ಡಿಜಿಟಲ್ ಕಾರ್ಯಗಾರ", ಗದಗ



"ರಾಜ್ಯ ಮಟ್ಟದ ಪಾರಂಪರಿಕ ಕಾವಿ ಚಿತ್ತಾರ ಕಾರ್ಯಗಾರ", ಉಡುಪಿ

ಆಹ್ವಾನಿಸುತ್ತದೆ. ಆಯ್ದ ಕಾರ್ಯಕ್ರಮವು ರಾಜ್ಯದ ವಿವಿದ ಜಿಲ್ಲೆಗಳಲ್ಲಿ ವಾರ್ಷಿಕ ಪ್ರದರ್ಶನ ಮಾಡುತ್ತ ಬಂದಿದೆ. ಅದರಲ್ಲಿ ಆಯ್ದ ಐದು ಅತ್ಯುತ್ತಮ ಕಲಾಕೃತಿಗಳಿಗೆ ಪ್ರಶಸ್ತಿ ಪುರಸ್ಕಾರ, ಗೌರವ ಸಂಭಾವಣೆ ಮತ್ತು ಪ್ರಮಾಣ ಪತ್ರ ನೀಡಿ ಕಲಾವಿದರಿಗೆ ಸನ್ಮಾನಿಸಲಾಗುತ್ತದೆ.

"ಕರ್ನಾಟಕ ಲಲಿತಕಲಾ ಅಕಾಡೆಮಿಯ ಸ್ಥಾಪನೆಗೊಂಡು ೨೫ ವರ್ಷಗಳಾಗಿವೆ. ಅಲ್ಲಿಂದ ಇಲ್ಲಿಯವರೆಗೆ ೬೩ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ೧೯೮೬–೮೭ರಲ್ಲಿ ಸಾಲಿನಿಂದ ಪ್ರಶಸ್ತಿ ವಿಜೇತರಿಗೆ ೭.೫೦೦ ರೂ.ಗಳನ್ನು ಇದರ ಜೊತೆಗೆ, ಶಾಲೂ ವಸ್ತ್ರ, ಲೋಹದ ಸುಂದರ ನಟರಾಜನ ವಿಗ್ರಹ ಮತ್ತು ಪ್ರಶಸ್ತಿ ನೀಡಲಾಗಿದೆ.

ಹೀಗೆ ಆಯೋಜಿಸಿದ ಪ್ರದರ್ಶನದಲ್ಲಿ ೨೦೧೩ ೧೪ನೇ ಸಾಲೀನಲ್ಲಿ ಅನೇಕ ಬದಲಾವನೆಗಳು ಕಂಡುಬಂದಿದೆ ೫ ಜನ ಕಲಾವಿದರಿಗೆ ನಿಡುವ ಪ್ರಶಸ್ತಿ ಹತ್ತು ಜನರಿಗೆ ೭.೫೦೦ರೂ ಗಳಿಂದ ೨೫.೦೦೦ರೂ ಗಳನ್ನಾಗಿ ಪ್ರಶಸ್ತಿ ನಿಡಿ ಗೌರವ ಧನವನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಗೌರವಿಸಲಾಗುತ್ತಿದೆ. ೨೦೧೩–೧೪ನೇ ಸಾಲಿನಲ್ಲಿ ಚಿತ್ರಕಲಾವಿದರಿಂದ ಅರ್ಜಿ ಮೂಲಕ ಕಲಾಕೃತಿಗಳನ್ನು ತೆರಿಸಿಕೊಂಡು ತೀರ್ಪುಗಾರರ ಮೂಲಕ ೧೦ ಉತ್ತಮ ಕಲಾಕೃತಿಗಳನ್ನು ಆಯ್ಕೆಮಾಡಿ ೧೦ ಜನ ಕಲಾವಿರಿಗೆ ೨೫೦೦೦ ರೂ.ಗಳು ನೆನಪಿನ ಕಾಣಿಕೆ ಮತ್ತು ಸನ್ಮಾನ ಪತ್ರ ನೀಡಿ ಗೌರವಿಸಲಾಗುತ್ತಿದೆ.[೧] ೧೦ನೇ ವಾರ್ಷಿಕ ಕಲಾ ಪ್ರದರ್ಶಣದಿಂದ ೪೭ನೇ ವಾರ್ಷಿಕ ಕಲಾ ಪ್ರದರ್ಶನವರೆಗೆ ಹಿರಿಯ ಹಾಗೂ ಯುವಕಲಾವಿದರಿಗೆ ಒಟ್ಟಾರೆ ನೋಡುವದಾದರೆ ೩೩೪ ಕಲಾವಿದರಿಗೆ ವಾರ್ಷಿಕ ಕಲಾಪ್ರದರ್ಶನದಲ್ಲಿ ಬಹುಮಾನ ಪ್ರಶಸ್ತಿ ಪುರಸ್ಕಾರ ಕರ್ನಾಟಕ ಲಲಿತಕಲಾ ಅಕಾಡೆಮಿಯು ನೀಡಿರುತ್ತದೆ. ಹಾಗೇ ಕಾಲಕ್ರಮೇಣ ಅಕಾಡೆಮಿಯ ಹೊಸ ಅಧ್ಯಕ್ಷರು ತಮ್ಮ ತಮ್ಮ ಅವಧಿಗೆ ಅನುಗುಣವಾಗಿ ವಾರ್ಷಿಕ ಕಲಾಪ್ರದರ್ಶನದ ಮೊತ್ತಗಳನ್ನು ಹೆಚ್ಚಿಸುತ್ತ ಬಂದಿರುವುದು ಕಾಣಬಹುದು.

ಸಂಚಾರಿ ಪ್ರದರ್ಶನ : ಕರ್ನಾಟಕ ಲಲಿತಕಲಾ ಅಕಾಡೆಮಿಯು ಸಂಚಾರಿ ಪ್ರದರ್ಶನವೆಂಬ ಹಚ್ಚಹೊಸ ಯೋಜನೆಯು "ಹಳ್ಳಿಗಾಡಿನ ಜನರಿಗೂ ಕಲೆಯನ್ನು ಮುಟ್ಟಿಸುವ ಕೆಲಸಕ್ಕೆ ನೆರವಾಗುವಂತೆ ಸಂಚಾರಿ ಕಲಾ ಪ್ರದರ್ಶನ ವಾಹನವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಸಿದ್ದಗೊಳಿಸಿದ್ದು ಸೋಮಶೇಖರ ಎಂ. ಸಾಲಿ ಅವರ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ"(೧೯೮೪–೮೭)."[೨] ಈ ಯೋಜನೆಯನ್ನು ಜಾರಿಗೆ ತಂದು

---

೦೧. ಡಾ. ಎಂ. ಎಸ್. ಮೂರ್ತಿ (ಪ್ರಸಂ.) : ಲಲಿತಕಲಾ–೫೦, ಅಂದು–ಇಂದು–ಮುಂದು, ಪು.೪೮

೦೨. ಅದೇ., ಪು.೧೧


ಭಾಗವಹಿಸಿದ ಕಲಾವಿದರು


ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಸಂಕ್ರಾಂತಿ ಕಲಾ ಶಿಬಿರ 2015
ಜನವರಿ 9 ರಿಂದ 12 ರವರೆಗೆ 2015
ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ,
ಬೆಂಗಳೂರು



ರಾಜ್ಯ ಮಟ್ಟದ ಕಲಾ ಶಿಬಿರ. ಬೀದರ



ರಾಜ್ಯ ಮಟ್ಟದ ಕಲಾ ಶಿಬಿರ. ಮೈಸೂರು



ಹಂಪಿ ಉತ್ಸವದ ಚಿತ್ರಕಲಾ ಶಿಬಿರ, ಹಂಪಿ



ಮಣಿಪಾಲ ವಿಶ್ವವಿದ್ಯಾಲಯದ ನಡೆದ ರಾಷ್ಟ್ರೀಯ ಕಲಾಶಿಬಿರದಲ್ಲಿ ಭಾಗವಹಿಸಿದ ಕಲಾವಿದರು



ವರ್ಣ ಆರ್ಟ ಗ್ಯಾಲರಿ ಲೋಕಾರ್ಪಣೆ ಮಾಜಿ ಅಧ್ಯಕ್ಷರು ಡಾ॥ ಎಂ.ಎಸ್. ಮೂರ್ತಿ ಉದ್ಘಾಟಕರು :- ಶಾಲಿನಿ ರಜನಿಶ್ ರಿಜಿಸ್ಟ್ರಾರ್ ಕೆ.ಸುಧೀಂದ್ರ ಸದಸ್ಯರು ಡಾ॥ವಿಶ್ವೇಶ್ವರಿ ಎಸ್.ತಿವಾರಿ ಹಾಗೂ ಕಲಾವಿದರ ಬಳಗ



ವರ್ಣ ಆರ್ಟ ಗ್ಯಾಲರಿಯಲ್ಲಿ ಕಲಾವಿದರ ಕಲಾಕೃತಿ ವಿಕ್ಷಿಸುತ್ತಿರುವ ದೃಶ್ಯ ಮಾಜಿ ಅಧ್ಯಕ್ಷರು ಡಾ॥ ಎಂ.ಎಸ್. ಮೂರ್ತಿ



೨೦೧೬ನೇ ಸಾಲಿನ ೪೫ನೇ ವಾರ್ಷಿಕ ಕಲಾಪ್ರದರ್ಶನದ ಪ್ರಶಸ್ತಿ ಪ್ರದಾನ ಸಮಾರಂಭ, ಮಂಡ್ಯ



೨೦೧೭ನೇ ಸಾಲಿನ ೪೬ನೇ ವಾರ್ಷಿಕ ಕಲಾಪ್ರದರ್ಶನದ ಪ್ರಶಸ್ತಿ ಪ್ರದಾನ ಸಮಾರಂಭ, ಬೆಂಗಳೂರು

ನಾಡಿನ ಎಲ್ಲಾ ಹಳ್ಳಿಗಾಡಿನಲ್ಲಿ ಸಂಚಾರಿ ಪ್ರದರ್ಶನವನ್ನು ಜನರಿಗೆ ಕಲೆಯ ಬಗ್ಗೆ ಅರಿವು ಮೂಡಿಸುವದರ ಮುಖಾಂತರ ನಡೆಯುತ್ತಾ ಬಂದಿತ್ತು. ಮುಂಬರುವ ಕೆಲವು ವರ್ಷಗಳ ನಂತರ ಸಂಚಾರಿ ವಾಹನವನ್ನು ಮರೆಮಾಚುವಂತೆ ಹೋಗದೆ ಸಂಚಾರಿ ವಾಹನವು ಪ್ರಸ್ತುತ ನೋಡುವದಾದರೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಆವರಣ್ಣದಲ್ಲಿ ನಾವು ಕಾಣುತ್ತೇವೆ. ಮುಂಬರುವ ದಿನಗಳಲ್ಲಿ ಮತ್ತೆ ಸಂಚಾರಿ ಪ್ರದರ್ಶನ ವಾಹನಕ್ಕೆ ಮರು ಜೀವ ನೀಡುವದು ಎಲ್ಲ ಕಲಾವಿದರ ಹಾಗೂ ಜನಸಾಮಾನ್ಯರ ಆಪೇಕ್ಷೆಯೂ ಕೂಡಾ ಆಗಿದೆ.

ತಿಂಗಳ ಚಿತ್ರ ಕಲಾಪ್ರದರ್ಶನ : ಕರ್ನಾಟಕ ಲಲಿತಕಲಾ ಅಕಾಡೆಮಿ ಆಯೋಜಿಸುವ ಹಲವಾರು ಕಲಾ ಚಟುವಟಿಕೆಗಳಲ್ಲಿ ಅಕಾಡೆಮಿಯು ಪ್ರತಿ ತಿಂಗಳ ಪ್ರದರ್ಶನ ರಾಜ್ಯದ ಕಲಾವಿದೆರಿಂದ ಕಲಾಕೃತಿಗಳನ್ನು ಅರ್ಜಿಮೂಲಕ ಆಹ್ವಾನಿಸುತ್ತದೆ. ಅದರಲ್ಲಿ ಆಯ್ದ ಳಕಲಾವಿದರನ್ನು ತಿಂಗಳ ಪ್ರದರ್ಶನಕ್ಕೆ ಆಯ್ಕೆ ಮಾಡಿ ನಾಡಿನ ಎಲ್ಲಾಜಿಲ್ಲೆಗಳಲ್ಲಿ ತಿಂಗಳ ಚಿತ್ರಕಲಾ ಪ್ರದರ್ಶನ ಏರ್ಪಡಿಸುತ್ತಾ ಬಂದಿದೆ. ಹೀಗೆ ಅನೇಕ ಕಲಾವಿದರು ಪ್ರದರ್ಶನ ಮಾಡುವ ಮುಖಾಂತರ ತಿಂಗಳ ಪ್ರದರ್ಶನ ಯಶಸ್ವಿಯನ್ನಾಗಿ ಮಾಡಿ "ಲಲಿತಕಲಾ ಅಕಾಡೆಮಿಯ ಸುವರ್ಣ ಅವಧಿಯಲ್ಲಿ ದೇಶಿ ಚಿಂತನೆಯ ಭಾಗವೇ ತಿಂಗಳ ಚಿತ್ರ ಪ್ರೋತ್ಸಾಹ ಮತ್ತು ಅವಕಾಶ ಕಲಾವಿದರ ಪಾಲಿಗೆ ಸಂಜೀವಿನಿ ಈ ಎರಡಿಲ್ಲದೆ ಯಾವುದೇ ಕಲಾವಿದನು ಮುಂಚೂಣಿಗೆ ಬರಲಾಗದು.

ಏಕಾಂತದಲ್ಲಿ ಅರಳುವ ಕಲೆ ಸಾರ್ಥಕ ಪಡೆದುಕೊಳ್ಳುತ್ತದೆ. ಬಹುಕಾಂತ ಮುಂದೆ ಅಣಾವರಣಗೊಂಡಾಗ ಅಂತಹ ಅನಾವರಣಕ್ಕೆ ಅವಕಾಶ ಕಲ್ಪಿಸುವದು ಬೆನ್ನುತಟ್ಟಿ ಪ್ರೋತ್ಸಾಹಿಸಬಹುದು. ಬಹುಮುಖ ಸಾಂಸ್ಕೃತಿಕ ಮುಖ್ಯ ಜವಾಬ್ದಾರಿ ಇಂತಹ ಹೋಣೆಗಾರಿಕೆಯನ್ನು ಡಾ. ಎಂ. ಎಸ್ ಮೂರ್ತಿಯವರ ನೇತೃತ್ವದಲ್ಲಿ ಅಕಾಡೆಮಿ ತಂಡ ಯಶಸ್ವಿಯಾಗಿ ನಿರ್ವಹಿಸಿದೆ. ಮಹಾನಗರ (ಬೆಂಗಳೂರು) ಹಾಗೂ ಪಟ್ಟಣವಾಸಿಯಾಗಿರುವ ಕಲಾವಿದರಿಗೂ ಅವಕಾಶಗಳು ಮತ್ತು ವೇದಿಕೆಗಳು ಸಿಗುವುದು ಸಾಮಾನ್ಯ ವಾಡಿಕೆ. ಆದರೆ ಹಳ್ಳಿ ಮಕ್ಕಳ ಸ್ಥಿತಿಯೆ ಬೇರೆಯೇ ಅವಕಾಶಗಳಿಂದ ವಂಚಿತವಾದ ಅದೆಷ್ಟೋ ಗ್ರಾಮೀಣ ಪ್ರತಿಭೆಗಳು ಕಮರಿ ಹೋಗಿರುವ ಇತಿಹಾಸವಿದೆ. ಈ ಹಿನ್ನೆಲೆಯಲ್ಲಿ ಹಳ್ಳಿಮಣ್ಣಿನ ನೈಜ ಪ್ರತಿಭೆಗಳನ್ನು ಬೆಳಕಿಗೆ ತರುವ ಮಹಾತ್ವಾಕಾಂಕ್ಷಿ ಯೋಜನೆಯನ್ನು ಈ ತಿಂಗಳ ಚಿತ್ರದ ಮೂಲಕ ರೂಪಿಸಲಾಗಿದೆ. ಪ್ರತಿ ತಿಂಗಳು ಗ್ರಾಮೀಣ ಭಾಗದ ನಿರ್ಲಕ್ಷಿತ ಹಿರಿಯ ಮತ್ತು ಯುವ ಕಲಾವಿದರ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ದೊರಕಿಸುವುದು ತಿಂಗಳ ಚಿತ್ರದ ಪರಿಕಲ್ಪನೆ.



ಪ್ರೊ. ಎಂ.ಜೆ ಕಮಲಾಕ್ಷಿ ತಿಂಗಳ ಚಿತ್ರ ಕುರಿತು ಮಾತನಾಡಿತ್ತಿರುವ ದೃಶ್ಯ



ತಿಂಗಳ ಚಿತ್ರದ ಕಲಾಕೃತಿಯ ಕುರಿತು ವಿವರಣೆ ನೀಡುತ್ತಿರುವ ವಿದ್ಯಾರ್ಥಿ



ಯುವ ಕಲಾವಿದರ ಕಲಾಕೃತಿಗಳ ತಿಂಗಳ ಚಿತ್ರದಲ್ಲಿ ಚಿತ್ರಕಲಾ ಪ್ರದರ್ಶನ







ಯುವ ಕಲಾವಿದರ ಕೃತಿಗಳ ತಿಂಗಳ ಚಿತ್ರ ಪ್ರದರ್ಶನ.

ಅಂತೆಯೆ ಪ್ರತಿ ತಿಂಗಳು ನಾಲ್ವರು ಯುವಕಲಾವಿದರ ಕಲಾಪ್ರದರ್ಶನಕ್ಕೆ ಅವಕಾಶ ಮಾಡಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ತಿಂಗಳ ಚಿತ್ರಕಲಾ ಪ್ರದರ್ಶನಕ್ಕೆ ಆಯ್ಕೆಯಾದ ಕಲಾವಿದರಿಗೆ ೧೦೦೦ ರೂ.ಗಳನ್ನು ಗೌರವ ಸಂಭಾವಣೆ ನೀಡುತ್ತಿದೆ.

೦೪. ಶಿಷ್ಯವೇತನ ಮತ್ತು ವಿದ್ಯಾರ್ಥಿ ವೇತನ

ಹಿರಿಯ ಕಲಾವಿದರಿಗೆ ಗೌರವ ಫೆಲೋಶಿಫ್ : ಹಿರಿಯ ಕಲಾವಿದರನ್ನು ಗೌರವಿಸುವ ದೃಷ್ಟಿಯಿಂದ ರಾಜ್ಯದ ಹಿರಿಯ ಕಲಾವಿದರೊಬ್ಬರಿಗೆ ೨ ವರ್ಷಕ್ಕೊಮ್ಮೆ ಉತ್ತಮ ಕಲಾಕೃತಿಗಳನ್ನು ರಚಿಸಲು ಸೀನಿಯರ್ ಫೆಲೋಷಿಪ್‌ನ್ನು ನೀಡಲಾಗುತ್ತಿದೆ. ಫೆಲೋಷಿಪ್ ಪಡೆದವರಿಗೆ ಮಹೆಯಾನ ರೂ. ೨೦೦೦ಗಳಂತೆ ಗೌರವವನ್ನು ನೀಡಲಾಗುತ್ತದೆ.* ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಸಿ.ಚಂದ್ರಶೇಖರ ಹಿರಿಯ ಕಲಾವಿಮರ್ಶಕರು ಸುಬ್ರಮಣ್ಯಂ ಮತ್ತು ಹಿರಿಯ ಕಲಾವಿದ ಎಸ್. ಜಿ. ವಾಸುದೇವ ಅವರಿಗೆ ಗೌರವ ಫೆಲೋಶಿಪ್‌ಗಳನ್ನು ನೀಡಲಾಯಿತು. ಇದೇ ವೇಳೆ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗವ ಸೇರಿದಂತೆ ೩೪ ಮಂದಿ ಕಲಾವಿದರುಗಳು ಫೆಲೋಶಿಫ್‌ಗಳನ್ನು ಪಡೆದಿರುತ್ತಾರೆ. ಡಾ. ಎಂ.ಎಸ್. ಮೂರ್ತಿ ಅವರ ಅವಧಿಯಲ್ಲಿ ಪ್ರಸ್ತುತ ಗೌರವ ಧನವನ್ನು ೧ ಲಕ್ಷ ರೂ.ಗಳಿಗೆ ಹೆಚ್ಚಿಸಿದ್ದು, ೨೦೧೮–೧೯ನೇ ಸಾಲಿನ ಗೌರವ ಫೆಲೋಶಿಫ್ ರಾಜ್ಯದ ಹಿರಿಯ ಕಲಾವಿದರಾದ ಡಾ. ನಾಡೋಜ ಜೆ.ಎಸ್. ಖಂಡೇರಾವ್. ಹಾಗೂ ಇನ್ನೊಬ್ಬರಾದ ಹಿರಿಯ ಕಲಾವಿದರಾದ ಜಿ. ಎಲ್. ಎಂ. ಸಿಮ್ಮಾ ಅವರಿಗೆ ಫೇಲೋಶಿಫ್ ನೀಡುವ ಮುಖಾಂತರ ಗೌರವಿಸಲಾಗಿದೆ.

ಏಕವ್ಯಕ್ತಿ ಹಾಗೂ ಸಮೂಹ ಚಿತ್ರಕಲಾ ಪ್ರದರ್ಶನಕ್ಕೆ ಶಿಷ್ಯವೇತನ : ಪ್ರತಿವರ್ಷ ಲಲಿತಕಲಾ ಅಕಾಡೆಮಿ ಆಯೋಜನೆ ಮಾಡುವಂತಹ ವಿವಿಧ ಯೋಜನೆಗಳಲ್ಲಿ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ಕೂಡಾ ಒಂದಾಗಿದೆ. ಈ ಯೋಜನೆಗೂ ಅರ್ಜಿಯನ್ನು ಆಹ್ವಾನಿಸಿ ಆಯ್ದ ಹಿರಿಯ ಮತ್ತು ಯುವಕಲಾವಿದರಿಗೆ ಧನ ಸಹಾಯವನ್ನು ನೀಡಲಾಗುತ್ತದೆ. ಆಯ್ಕೆಯಾದ ಕಲಾವಿದರುಗಳಿಗೆ ಧನಸಹಾಯವನ್ನು ನೀಡಲಾಗುತ್ತಿದೆ. ತಮ್ಮ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ರಾಜ್ಯದಲ್ಲಿ ಹೋರ ರಾಜ್ಯದಲ್ಲಿ ಧನ ಸಹಾಯ ನೀಡಲಾಗುತ್ತಿತ್ತು. ಪ್ರತಿವರ್ಷ ಲಲಿತಕಲಾ ಅಕಾಡೆಮಿ ಆಯೋಜನೆ ಮಾಡುವಂತಹ ವಿವಿಧ ಯೋಜನೆಗಳಲ್ಲಿ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ಕೂಡಾ ಒಂದಾಗಿದೆ. ಈ ಯೋಜನೆಗೂ ಅರ್ಜಿಯನ್ನು ಆಹ್ವಾನಿಸಿ ಆಯ್ದ ಹಿರಿಯ ಮತ್ತು ಯುವಕಲಾವಿದರಿಗೆ







ನಾಡಿನ ಹಿರಿಯ ಕಲಾವಿದರಿಗೆ ಗೌರವ ಫಿಲೋಶಿಪ್ ಪ್ರಶಸ್ತಿ ಪ್ರಧಾನದ ಸ್ಥೂಲನೋಟ

ಧಣ ಸಹಾಯವನ್ನು ನೀಡಲಾಗುತ್ತದೆ. ಆಯ್ಕೆಯಾದ ಕಲಾವಿದರುಗಳಿಗೆ ಧನ ಸಹಾಯವನ್ನು ನೀಡಲಾಗುತ್ತಿದೆ. ತಮ್ಮ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ರಾಜ್ಯದಲ್ಲಿ ಮತ್ತು ಹೋರ ರಾಜ್ಯದಲ್ಲಿ ಧನ ಸಹಾಯ ನೀಡಲಾಗುತ್ತಿತ್ತು. (ಪರಿಚಯ ಕಲಾ ಅಕಾಡೆಮಿ ಮಾಹಿತಿ ಸಂಗ್ರಹ ಹೆಚ್.ಶಂಕರಪ್ಪ. ಪ್ರ ವರ್ಷ ೨೦೦೦ ತಾಂತ್ರಿಕ ಪುಟಗಳು) ಹಾಗೆ ಮುಂಬರುವ ದಿನಗಳಲ್ಲಿ ಅಧ್ಯಕ್ಷರ ಡಾ. ಎಂ. ಎಸ್. ಮೂರ್ತಿರವರ ಅವಧಿಯಲ್ಲಿ (೨೦೧೪-೧೭)ನೇ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ರಾಜ್ಯದಲ್ಲಿ ೧೦,೦೦೦ ಮತ್ತು ೧೫,೦೦೦ ರೂ.ಗಳನ್ನು ರಾಜ್ಯ, ಹೊರ ರಾಜ್ಯದಲ್ಲಿ ೧೫,೦೦೦ರೂ ಮತ್ತು ೨೦,೦೦೦ ರೂ.ಗಳು ಪ್ರಸ್ತುತ ವರ್ಷದಿಂದ (೨೦೧೯-೨೦)ನೇ ಸಾಲಿನಲ್ಲಿ ಕೂಡಾ ಮೊತ್ತವು ಹೆಚ್ಚಾಗಿದೆ.

೨೦೧೯ ೨೦ನೇ ಸಾಲಿನಲ್ಲಿ ಧನ ಸಹಾಯ ಬದಲಾವಣೆ ಕಾಣುತ್ತೆವೆ ರಾಜ್ಯದಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು ಏರ್ಪಡಿಸುವ ಕಲಾವಿದರಿಗೆ ತಲಾ ೨೦,೦೦೦/-ಗಳನ್ನು ಹೊರರಾಜ್ಯದಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು ಏರ್ಪಡಿಸುವ ಕಲಾವಿದರಿಗೆ ತಲಾ ೩೦,೦೦೦/-ಗಳನ್ನು, ಮತ್ತು ರಾಜ್ಯದಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನ ಏರ್ಪಡಿಸುವ ಕಲಾವಿದರಿಗೆ ೩೦,೦೦೦/-ಗಳನ್ನು, ಮತ್ತು ಹೊರರಾಜ್ಯದಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನ ಏರ್ಪಡಿಸುವ ಕಲಾವಿದರಿಗೆ ೪೦,೦೦೦/-ಗಳನ್ನು, ಧನಸಹಾಯವಾಗಿ ಅಕಾಡೆಮಿಯು ನೀಡಿದೆ. ಇಲ್ಲಿಯ ವರೆಗೆ ಏಕ ಮತ್ತು ಸಮೂಹ ಚಿತ್ರಕಲಾ ಪ್ರದರ್ಶನಕ್ಕೆ ಸುಮಾರು ೯೦ ಮಂದಿ(ಜನ) ಕಲಾವಿದರಿಗೆ ಅಕಾಡೆಮಿಯು ಆರ್ಥಿಕ ನೆರವು ನೀಡಿದೆ.

ವಿದ್ಯಾರ್ಥಿವೇತನ : ದೃಶ್ಯಕಲೆ ವಾಸಂಗಕ್ಕೆ ಉತ್ತೇಜನ ಮತ್ತು ನೆರವು ನೀಡುವ ದೃಷ್ಟಿಯಿಂದ ಕಲಾ ವಿಧ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪ್ರತಿವರ್ಷ ನೀಡಲಾಗುತ್ತಿದೆ. ರಾಜ್ಯದ ದೃಶ್ಯಕಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಆಯ್ದ ೪ ಮತ್ತು ೫ನೇ ವರ್ಷದಲ್ಲಿ ಡಿಪ್ಲೋಮಾ ಹಾಗೂ ಬಿ.ಎಫ್.ಎ ವಿದ್ಯಾರ್ಥಿಗಳಿಗೆ ತಲಾ ರೂ.೧೫೦೦ ರಾಜ್ಯದ ಎಂ.ಎಫ್.ಎ.-ವಿದ್ಯಾರ್ಥಿಗಳಿಗೆ ರೂ.೨೫೦೦ ರೂಗಳು, ಹೊರ ರಾಜ್ಯದ ಎಂ.ಎಫ್.ಎ ಪೋಸ್ಟ್ ಡಿಪ್ಲೋಮೋ ವಿದ್ಯಾರ್ಥಿಗಳಿಗೆ ತಲಾ ರೂಪಾಯಿ ೫೦೦೦ಗಳ* ವಿದ್ಯಾರ್ಥಿ ವೇತನವನ್ನು ನೀಡಲಾಗುತಿತ್ತು. ೨೦೧೩-೧೪ನೇ ಸಾಲಿನ ಸಂದರ್ಭದಲ್ಲಿ ದೃಶ್ಯಕಲಾ ವಿದ್ಯಾರ್ಥಿಗಳಿಗೆ ಪರಿಸಿಷ್ಟ ಜಾತಿ ೧೦,೦೦೦ ಹಾಗೂ ಪರಿಸಿಷ್ಟ ಪಂಗಡ ೨೦,೦೦೦ರೂಗಳು ಹಾಗೂ ಸಾಮಾನ್ಯ ವರ್ಗದ ದೃಶ್ಯಕಲಾ ವಿದ್ಯಾರ್ಥಿಗಳಿಗೆ ೬೦೦೦ರೂಗಳನ್ನು ದೃಶ್ಯಕಲಾ ವಿದ್ಯಾರ್ಥಿ ವೇತನವೆನ್ನಾಗಿ ನೀಡುತ್ತಲಿದೆ.

೨೦೧೯-೨೦ನೇ ಪ್ರಸ್ತುತ ಸಾಲಿನ ವಿದ್ಯಾರ್ಥಿವೇತನ ಯಾವುದೆ ಜಾತ್ಯಾತಿತವಿಲ್ಲದೆ ಎಲ್ಲಾ ದೃಶ್ಯಕಲಾ ವಿದ್ಯಾರ್ಥಿಗಳಿಗೆ ಸರಿಸಮಾನವಾಗಿ ೧೦,೦೦೦ರೂಗಳು ನೀಡಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ಅವರವರ ಅವಧಿಗೆ ತಕ್ಕಂತೆ ವಿದ್ಯಾರ್ಥಿ ವೇತನವನ್ನು ನೀಡುತ್ತಲೆ ಬಂದಿದ್ದು ಕಾಣುತ್ತೇವೆ. ರಾಜ್ಯದ ಕಲಾಶಾಲೆಗಳಲ್ಲಿ ದೃಶ್ಯಕಲೆ ವ್ಯಾಸಂಗಕ್ಕೆ ಉತ್ತೇಜಿಸಲು ಮತ್ತು ಆರ್ಥಿಕ ನೆರವು ನೀಡುವ ದೃಷ್ಟಿಯಿಂದ ಕಲಾ ವಿದ್ಯಾರ್ಥಿಗಳಿಗೆ ಪ್ರತಿವರ್ಷ ವಿಧ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. "ದೃಶ್ಯಕಲಾ ವಲಯದಲ್ಲಿ ವಿಧ್ಯಾರ್ಥಿಗಳಿಗೆ ವಿಧ್ಯಾರ್ಥಿವೇತನ ನಿಡುವ ವೆವಸ್ಥೆಯೂ ಲಲಿತಕಲಾ ಅಕಾಡೆಮಿಯಲ್ಲಿದೆ. ಈ ಯೋಜನೆಯಡಿ ಮೂರು ವರ್ಷಗಳ ಅವಧಿಯಲ್ಲಿ ಪರಿಸಿಷ್ಠ ಪಂಗಡ, ಪರಿಸಿಷ್ಠ ಜಾತಿ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ೪೦೦ ವಿದ್ಯಾರ್ಥೀಗಳಿಗೆ ವಿದ್ಯಾರ್ಥೀವೇತನ 'ಭಾಗ್ಯ' ಕಲ್ಪಿಸಲಾಗಿದೆ. ಕಳೆದ ಮೂರು ವರ್ಷದಲ್ಲಿ ಇಷ್ಟೊಂದು ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದ್ದು ಗಮನಾರ್ಹ ದಾಖಲೆಯಾಗಿದೆ."

೦೫. ಕಲಾ ಸಂಚಾರ

೨೦೧೬ ೧೭ನೇ ಸಾಲೀನಲ್ಲಿ ಕಲಾಸಂಚಾರವೆಂಬ ಹೆಸರಿನ ಈ ಯೋಜನೆ-ಯಡಿಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ರಾಜ್ಯದ ವಿವಿಧ ಭಾಗಗಳ ಸುಮಾರು ೫೨ ಕಲಾವಿದರೆನ್ನಾಗಿ ಆಯ್ಕೆ ಮಾಡಿತು. ತಲಾ ತಂಡಕ್ಕೆ ನಾಲ್ವರು ಕಲಾವಿದರಂತೆ ವಿವಿಧ ಗುಂಪುಗಳನ್ನು ಕಲಾವಿದರ ಇಚ್ಚೆ ಗನು ಗುಣವಾಗಿ ವಿಂಗಡಿಸಿ ರಾಜ್ಯದ ಹಂಪಿ, ಬೇಲೂರು, ಹಳೇಬೀಡು, ಪಟ್ಟದಕಲ್ಲು, ಅಜಂತ, ಎಲ್ಲೋರಾ, ಲಕ್ಕುಂಡಿ, ಸೋಮನಾಥಪುರ, ಐಹೋಳೆ ನೆರೆಯ ತಮಿಳುನಾಡಿನ ಮಧುರೈ ಉತ್ತರ ಭಾರತದ ಖಜರಾಹೋ, ಸೂರ್ಯನಾರಾಯಣ ಟೆಂಪಲ್, ಕೈಲಾಸನಾಥ ಟೆಂಪಲ್, ಮತ್ತಿತರಡೆ ಐತಿಹಾಸಿಕ ಪ್ರಮುಖ ಸ್ತಳಗಳಿಗೆ ರೇಖಾ ಚಿತ್ರಗಳು ರಚಿಸಲು ಕಳುಹಿಸಲಾಯಿತು. ಈ ಸ್ಥಳಗಳಲ್ಲಿ ಇಂತಿಷ್ಟು ದಿನವಳಗೆ ವಾಸವ್ಯ ಹೂಡಿ ಅಲ್ಲಿನ ಶಿಲ್ಪಕಲಾ ವೈಭವವನ್ನು ಕುಂಚದಲ್ಲಿ ಸೇರೆ ಹಿಡಿದರು. ಆನಂತರ ಅಕಾಡೆಮಿಗೆ ಪ್ರತಿ ಕಲಾವಿದರು ತಲಾ ೨೫ ರೇಖಾ ಚಿತ್ರಗಳನ್ನು ರಚಿಸಿಕೋಟ್ಟರು ಚಾರಿತ್ರಿಕವಾದ 'ಕಲಾಸಂಚಾರ'ದಲ್ಲಿ ತೆರೆದುಕೊಂಡ ೨೦೦ಕ್ಕೂ ಹೆಚ್ಚು ಕಲಾಕೃತಿಗಳ ಪೈಕಿ ಕೇವಲ ೧.೦೦೦ ರೂಪಾಯಿಗಳಿಗೆ ಒಂದು ರೇಖಾಚಿತ್ರದಂತೆ ಮಾರಾಟಮಾಡಿ ಬಂದ ಹಣವನ್ನು ತಲಾ ೨೫.೦೦೦ರೂ ಗೌರವ ಧನವನ್ನಾಗಿ ಕಲಾವಿದರಿಗೆ ನೀಡಲಾಯಿತು. ಆ ಎಲ್ಲಾ ರೇಖಾಚಿತ್ರಗಳನ್ನು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷ್ಕತ್ತಿ ಆವರಣ ಗ್ಯಾಲರಿಯಲ್ಲಿ ಪ್ರದರ್ಶಿಸಲಾಯಿತು. 'ಸುವರ್ಣ ಕಲಾಸಂಚಾರ' ಹೆಸರಿನ ಈ ವಿನೂತನ



ಕಲೆಯೊಡಗಿನ ಸಂಚಾರ : ಶಿಲ್ಪ ವೈಭವವನ್ನು ರೇಖಿಸುವ ಕಲಾ ಪ್ರಯಾಣಕ್ಕೆ ಹೋಗುವ ಕಲಾವಿದರು.



ಕಲಾ ಸಂಚಾರಿ ಕಲಾವಿದರು ಹಂಪಿಯಲ್ಲಿ ಕಾಣಿಸಿಕೊಂಡ ದೃಶ್ಯ





ಕಲಾ ಸಂಚಾರಿಗಳು ಮೂಡಿಸಿದ ಕುಂಚ ವೈಭವ



ಕಲಾ ಸಂಚಾರಿಗಳು ಮೂಡಿಸಿದ ಕುಂಚ ವೈಭವ

ಕಲಾ ಪ್ರದರ್ಶನವನ್ನು ಹಿರಿಯ ಸಾಹಿತಿ ಓ.ಎಲ್.ನಾಗಭೂಷಣಸ್ವಾಮಿ ಅವರು ಉದ್ಘಾಟಿಸಿದರು. ನಾಡೋಜ ಮಹೇಶ ಜೋಶಿ ಮತ್ತಿತರರು ಪಾಲ್ಗೊಂಡಿದ್ದರು ೫ದಿನಗಳ ಕಾಲ ನಡೆದ ಈ 'ಸುವರ್ಣ ಕಲಾಸಂಚಾರ' ಪ್ರದರ್ಶನ ಅಕಾಡೆಮಿಯ ಇತಿಹಾಸದಲ್ಲಿ ತನ್ನದೇ ಛಾಪು ವಿನೂತನ ಹೋಸ ಮಾದರಿಯನ್ನು ಸೃಷ್ಟಿಸಿತು. ಆಧುನಿಕ ಕಲಾವಿದರನ್ನು ಮತ್ತೆ 'ರೇಖಾಚಿತ್ರ'ಗಳ ರಚನೆಯತ್ತ ಅಭಿಮುಖ ಮಾಡುವ ಮೂಲಕ ಕಲಾಸಮದಾಯವನ್ನು ಹೊಸ ದಿಕ್ಕಿಗೆ ಕರೆದೊಯ್ಯುವ ಅಕಾಡೆಮಿಯು ಈ ಸುತ್ಯಾರ್ಹ ಪ್ರಯತ್ನ ಫಲಿಸಿದ್ದು, ಈ ಯೋಜನೆಯಿಂದ ನಮ್ಮ ನೇಲದ ಸಂಸ್ಕೃತಿಯ ಬಗ್ಗೆ ಯುವಕಲಾವಿದರ ಸಮೂಹ ಆಸಕ್ತಿ, ಕುತುಹಲ, ಹೆಚ್ಚಿಸಿಕೊಂಡಿರುವುದು ದೃಶ್ಯಕಲಾವಲಯಕ್ಕೆ ಬಹುದೊಡ್ಡ ಲಾಭವಾಗಿರುವುದನ್ನು ಕಾಣಬಹುದು.

೦೬. ಪ್ರಶಸ್ತಿ ಪುರಸ್ಕಾರಗಳು

ಲಲಿತಕಲಾ ಗೌರವಪ್ರಶಸ್ತಿ : ಚಿತ್ರಕಲಾ ವಲಯದ ಪ್ರತಿಭಾವಂತರ ಸಂಪನ್ನ್ ಕ್ಷೇತ್ರ, ದೃಶ್ಯಕಲೆಯಲ್ಲಿ ಪ್ರಯೋಗ ಮತ್ತು ಪ್ರತಿಭಾವಂತಿಕೆಯಿಂದ ಗಮನ ಸೆಳೆದ ಕಲಾಸಮುದಾಯಕ್ಕೆ ಅನರ್ಘ್ಯ ಸೇವೆ ಸಲ್ಲಿಸಿದ ಪ್ರತಿಭೇಗಳು ನೂರಾರು ಅಂತಹ ಪ್ರತಿಭ ಸಂಪನ್ನರನ್ನು ಗುರುತಿಸಿ ಪ್ರಶಸ್ತಿ ನೀಡುವ ಸತ್ಸಂಪ್ರದಾಯವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಪರಂಪರೆಯ ಒಂದು ಭಾಗವಾಗಿ ಅನೂಚಾನವಾಗಿ ಆರಿಸಿಕೊಂಡು ಬಂದಿದೆ. ಇದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರತಿಷ್ಠಿತ ಕಾರ್ಯಕ್ರಮವಾಗಿದ್ದು, ಪ್ರತಿ ವರ್ಷ ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ೫ ಮಂದಿ ಕಲಾವಿದರಿಗೆ ರೂ. ೧೦.೦೦೦ಗಳ ನಗದು ನೆನಪಿನ ಕಾಣಿಕೆ ಮತ್ತು ಸನ್ಮಾನ ಪತ್ರ ನೀಡಿ ಗೌರವಿಸಲಾಗುವುದು.

ಮುಂದೆ ಈ ಪ್ರಶಸ್ತಿಯ ಮೊತ್ತ ೫೦,೦೦೦ ರೂ.ಗಳಿಗೆ ಹೆಚ್ಚಿಸಿದ್ದು, ಇಲ್ಲಿಯವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೩ ಜನ ಹಿರಿಯ ಸಾಧಕರಿಗೆ ಗೌರವ ಪ್ರಶಸ್ತಿ ನೀಡಿರುವುದು ಕಂಡುಬರುತ್ತದೆ.

ಕಲಾಸಂಕ್ರಾತಿ ರಾಷ್ಟ್ರೀಯ ಪುರಸ್ಕಾರ : ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಅನೇಕ ಹೊಸ ಯೋಜನೆಗಳಲ್ಲಿ 'ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ'ವೂ ಮಾಡುವ ಒಂದು ಪ್ರಯತ್ನ ಮಾಡುವ ಮುಖಾಂತರ ಕೇವಲ ರಾಜ್ಯಕ್ಕೆ ಸಿಮಿತವಾಗದೆ. ರಾಜ್ಯ ಮತ್ತು ರಾಷ್ಟ್ರದ ದೃಶ್ಯಕಲಾವಿದರನ್ನು ಒಂದುಗೂಡಿಸುವದು ತಮ್ಮ ಕಲಾಕೃತಿಗಳನ್ನು ಸುವರ್ಣ ಸಂಭ್ರಮದ ಆಚರಣೆ ಸಂದರ್ಭದಲ್ಲಿ **ಕಲಾಸಂಕ್ರಾತಿ ರಾಷ್ಟ್ರೀಯ ಪುರಸ್ಕಾರ** ಜಾರಿಗೆ ತಂದ ಅನೇಕ ಹೊಸ ಯೋಜನೆಗಳಲ್ಲಿ ಅತಿ ಮುಖ್ಯವಾದುವುಗಳಲ್ಲಿ 'ಕಲಾಸಂಕ್ರಾಂತಿಯು ಒಂದಾಗಿದೆ.

ರಾಷ್ಟ್ರೀಯ ಪುರಸ್ಕಾರ ನಮ್ಮ ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಇತಿಹಾಸದಲ್ಲೇ ಇದೇ ಪ್ರಪ್ರಥಮ ಬಾರಿಗೆ ರಾಷ್ಟ್ರೀಯ ಕಲಾ ಪ್ರದರ್ಶನವನ್ನು ಆಯೋಜಿಸುವ ಮೂಲಕ ಅಕಾಡೆಮಿಯ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಬರೆಯಲಾಗಿದೆ. "ಈ ನಡೆಯಿಂದ ಸುವರ್ಣ ಸಂಭ್ರಮಕ್ಕೆ ವಜ್ರದ ಹೊಳಪು ದೊರೆತಿದೆ. ರಾಷ್ಟ್ರೀಯ ಕಲಾ ಪ್ರದರ್ಶನದ ಮೂಲಕ ದೇಶದ ನಾಲ್ಕೂ ದಿಕ್ಕುಗಳ 'ದೃಶ್ಯಕಲಾ ಸಂಸ್ಕೃತಿ'ಯನ್ನು ಒಂದೆಡೆ ಸೇರಿಸುವ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ. ಎಸ್. ಮೂರ್ತಿ ಮತ್ತವರ ತಂಡದ ಪ್ರಯತ್ನ ಯಶಸ್ವಿಯಾಗುವುದರೊಂದಿಗೆ ಸಾರ್ಥಕತೆಯನ್ನು ಪಡೆದದ್ದು ನಿಜಕ್ಕೂ ಹೆಮ್ಮೆಯ ಸಂಗತಿ.

ಅಕಾಡೆಮಿಯ ಈ ಪ್ರಯತ್ನಕ್ಕೆ ದೇಶದ ಎಲ್ಲಾ ಭಾಗದವರೂ ಸೇರಿದಂತೆ ೭೦೦ಕ್ಕೂ ಹೆಚ್ಚು ಕಲಾವಿದರು ಸ್ಪಂದಿಸಿದ್ದರು. ಆ ಪೈಕಿ ದೇಶದ ಈ ಎಲ್ಲಾ ಕಲಾವಿದರ ವಿಶ್ವಾಸ, ನಂಬಿಕೆಗೆ ಧಕ್ಕೆಯಾಗದಂತೆ ಅತ್ಯಂತ ಪಾರದರ್ಶಕವಾಗಿ ಕಲಾಪ್ರದರ್ಶನಕ್ಕೆ ಕಲಾಕೃತಿಗಳ ಆಯ್ಕೆ ಮಾಡಲಾಯಿತು. ಆಯ್ಕೆ ಸಮಿತಿಯು ಮೊದಲ ಸುತ್ತಿನಲ್ಲಿ ೧೧೭ ಕಲಾ ಕೃತಿಗಳನ್ನು ಆಯ್ಕೆ ಮಾಡಿದರೆ, ಎರಡನೇ ಸುತ್ತಿನ ಆಯ್ಕೆ ಸಮಿತಿಯು ಈ ೧೧೭ ಕೃತಿಗಳಲ್ಲಿ ೧೪ ಕಲಾಕೃತಿಗಳನ್ನು, ಜೊತೆಗೆ ಕನ್ನಡ ಕಲಾಸಾಹಿತ್ಯಕ್ಕೆ ಕೊಡಮಾಡುವ 'ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ'ಕ್ಕಾಗಿ ಒಂದು ಕೃತಿಯನ್ನು ಆಯ್ಕೆ ಮಾಡಿತು. ಒಂದು ಕಲಾ ಸಾಹಿತ್ಯಕ್ಕೆ ಸೇರಿದಂತೆ ಒಟ್ಟು ಹದಿನೈದು ಮಂದಿಗೆ 'ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ'ವನ್ನು ಕೊಡ ಮಾಡಲಾಯಿತು. ಆಯ್ಕೆಯಾದ ಪ್ರತಿ ಕಲಾವಿದರಿಗೆ ೧.೦೦೦.೦೦ ಒಂದು ಲಕ್ಷ ರೂಪಾಯಿ ನಗದು ನೀಡಿ ಪುರಸ್ಕರಿಸಲಾಯಿತು. ಅಂತೆಯೇ ಆಯ್ಕೆಯಾದ ೧೬ ಕಲಾಕೃತಿಗಳಿಗೆ 'ಮೆರಿಟ್ ಸರ್ಟಿಫಿಕೇಟ್' ನೀಡಿ ಗೌರವಿಸಲಾಯಿತು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ೨೦೧೭ರ ಮಾರ್ಚ್ ೨೩ರಂದು ಈ ಪ್ರಪ್ರಥಮ 'ಕಲಾ ಸಂಕ್ರಾಂತಿ' ರಾಷ್ಟ್ರೀಯ ಪುರಸ್ಕಾರದ ಪ್ರದಾನ, ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 'ಕಲಾಸಂಕ್ರಾಂತಿ ರಾಷ್ಟ್ರೀಯ ಕಲಾಪ್ರದರ್ಶನ' ಅದ್ದೂರಿಯಾಗಿ ಅಷ್ಟೇ ಅರ್ಥಪೂರ್ಣವಾಗಿ ಜರುಗಿತು."[೩]

ರಾಷ್ಟ್ರೀಯ ಕಲಾ ಪ್ರದರ್ಶನದ ಮೂಲಕ ದೇಶದ ನಾಲ್ಕೂ ದಿಕ್ಕುಗಳ 'ದೃಶ್ಯಕಲಾ ಸಂಸ್ಕೃತಿ'ಯನ್ನು ಒಂದೆಡೆ ಸೇರಿಸುವ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ. ಎಸ್. ಮೂರ್ತಿ ಮತ್ತವರ ತಂಡದ ಪ್ರಯತ್ನ ಯಶಸ್ವಿಯಾಗುವುದರೊಂದಿಗೆ ಸಾರ್ಥಕತೆಯನ್ನು ಪಡೆದದ್ದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದು ಹೇಳಬಹುದು.

---

೦೩. ಡಾ. ಎಂ. ಎಸ್. ಮೂರ್ತಿ (ಪ್ರ.ಸಂ.) : ಲಲಿತಕಲಾ-೫೦, ಅಂದು-ಇಂದು-ಮುಂದು, ಪು.೪೫







೨೦೧೩-೧೪-೧೫-೧೬ನೇ ಸಾಲಿನ ಹಿರಿಯ ಕಲಾವಿದರಿಗೆ ಗೌರವ ಪ್ರಶಸ್ತಿ ಕಾರ್ಯಕ್ರಮದ ದೃಶ್ಯಾವಳಿ



ಬೆಂಗಳೂರಿನಲ್ಲಿ ನಡೆದ ಚೊಚ್ಚಲ " ಕಲಾಸಂಕ್ರಾಂತಿ" ರಾಷ್ಟ್ರೀಯ ಪುರಸಸ್ಕಾರದ ಉದ್ಘಾಟನೆ ಸಮಾರಂಭ.



ಬೆಂಗಳೂರಿನಲ್ಲಿ ನಡೆದ ಚೊಚ್ಚಲ " ಕಲಾಸಂಕ್ರಾಂತಿ" ರಾಷ್ಟ್ರೀಯ ಪುರಸಸ್ಕಾರದ ಪ್ರಧಾನ ಸಮಾರಂಭದಲ್ಲಿ ಅದ್ಯಕ್ಷರು ಹಾಗೂ ನಾಡಿನ ಹಿರಿಯ ಕಲಾವಿದರಿಂದ ಕ್ಯಾಟ್‌ಲಾಕ್ ಬಿಡುಗಡೆ.



ಪ್ರಥಮ ಅಂತರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ಉದ್ಘಾಟನ ಸಮಾರಂಭ



ಪ್ರಥಮ ಅಂತರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದ ಕಲಾಕೃತಿಗಳನ್ನು ನೋಡುತ್ತಿರುವ ದೃಶ್ಯ







‘ಕಲಾಸಂಕ್ರಾಂತಿ’ ರಾಷ್ಟ್ರೀಯ ಪ್ರದರ್ಶನದ ಉದ್ಘಾಟನೆ ಹಾಗೂ ಕಲಾಪ್ರದರ್ಶನ ವೀಕ್ಷಣೆ ನಾಡಿನ ಹಿರಿಯ ಸಾಹಿತಿಗಳಾದ ಡಾ.ಯು.ಆರ್. ಅನಂತಮೂರ್ತಿ ಹಾಗೂ ಹಿರಿಯ ಕಲಾವಿದರಾದ ಜೆ.ಎಸ್. ಖಂಡೇರಾವ್ ಮಾಜಿ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ ಹಾಗೂ ಮತ್ತಿತರರು.



ರಾಷ್ಟ್ರೀಯ ಕಲಾವಿದರ ಸಾಧನೆಯ ಸಂದ ಕಲಾ ಸಂಕ್ರಾತಿಯ ರಾಷ್ಟ್ರೀಯ ಪುರಸ್ಕಾರ ಅಧ್ಯಕ್ಷರು ಹಾಗೂ ಹಿರಿಯ ಕಲಾವಿದರು.



ರಾಷ್ಟ್ರೀಯ ಕಲಾವಿದರ ಸಾಧನೆಯ ಸಂದ ಕಲಾ ಸಂಕ್ರಾತಿಯ ರಾಷ್ಟ್ರೀಯ ಪುರಸ್ಕಾರ ಅಧ್ಯಕ್ಷರು ಹಾಗೂ ಹಿರಿಯ ಕಲಾವಿದರು.

೦೭. ಗುರುತಿನ ಚೀಟಿ

ಕರ್ನಾಟಕ ಲಲಿತಕಲಾ ಅಕಾಡೆಮಿಯ ೧೯೭೭ರಿಂದ ಇಲ್ಲಿಯವರೆಗೆ ತನ್ನದೇ ಆದ ಹೊಸ ಯೋಜನೆಗಳನ್ನು ಆಯಾ ಅಧ್ಯಕ್ಷರ ಅವಧಿಯಲ್ಲಿ ಹಮ್ಮಿಕೊಂಡು ಬಂದಿದ್ದು, ಅವುಗಳಲ್ಲಿ ೨೦೧೫ರಲ್ಲಿ ಕಲಾವಿದರಿಗೆ ನೀಡಿದ "ಗುರುತಿನ ಚೀಟಿ" ಕೂಡಾ ಒಂದಾಗಿದೆ. ರಾಜ್ಯ ಮತ್ತು ರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಬಹುಮಾನ ಪಡೆದವರು, ಕಲಾವಲಯದಲ್ಲಿ ದಶಕಗಳ ಗಟ್ಟಲೆ ಸೇವೆಗೈದವರು, ಹಿರಿಯ ಕಲಾವಿದರ ಹೀಗೆ ಕೆಲವು ನಿಯಮಗಳನ್ನು ಮಾನದಂಡವಾಗಿಟ್ಟು ಕೊಂಡು ಈ ಯೋಜನೆ ರೂಪಿಸಲಾಗಿತ್ತು. ಅರ್ಜಿಗಳನ್ನು ಆಹ್ವಾನಿಸಿ ಅರ್ಹತೆಯ ಆಧಾರದ ಮೇರೆಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ದೇಶದಲ್ಲೇ ಮೊದಲ ಬಾರಿ ಕಲಾವಿದರಿಗೆ ಗುರುತಿನ ಚೀಟಿ ನೀಡುವ ಹೇಗ್ಗಳಿಕೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ಸೇರುತ್ತದೆ. "ಈ ಗುರುತಿನ ಚೀಟಿ ಹೊಂದಿದವರಿಗೆ ವಾರ್ಷಿಕ ರಿಯಾಯಿತಿ ದರದ ಬಸ್ ಪಾಸ್, ರೈಲ್ವೆ ಪಾಸ್ ಕೊಡಿಸುವುದು, ಜೀವವಿಮೆ ಮಾಡಿಸುವಿಕೆ ಮತ್ತು ಉಚಿತ ಹೃದಯ ಶಸ್ತ್ರಚಿಕಿತ್ಸೆಗೆ ನೆರವಾಗುವುದು ಸೇರಿದಂತೆ ಹಲವು ಸೌಲಭ್ಯಗಳು ದೊರೆಯುವಂತಾಗ ಬೇಕೆಂಬುದು ಅಕಾಡೆಮಿಯ ಸದಾಶಯ. ಆ ದೆಸೆಯಲ್ಲಿ ಸಾಕಷ್ಟು ಪ್ರಯತ್ನಗಳು ನಡೆದಿದ್ದು ಸತ್ಫಲವನ್ನೂ ನೀಡಿವೆ. ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಗುರುತಿನ ಚೀಟಿವುಳ್ಳ ದೃಶ್ಯಕಲಾವಿದರಿಗೆ ಚಿಕಿತ್ಸಾ ವೆಚ್ಚದಲ್ಲಿ ಶೇ. ೨೫ರಷ್ಟು ರಿಯಾಯಿತಿ ದೊರೆಯಲಿದೆ. ಇದರಿಂದ ಕಲಾಸಮುದಾಯಕ್ಕೆ ತುಂಬಾ ಉಪಯುಕ್ತಕಾರಿಯಾಗಿದೆ ಎಂದರೆ ತಪ್ಪಾಗಲಾರದು.

೦೮. ಕಲಾವಾರ್ತೆ

'ಕಲಾವಾರ್ತೆ' ಕರ್ನಾಟಕ ಲಲಿತಕಲಾ ಅಕಾಡೆಮಿಯ ಹೆಮ್ಮೆಯ ತ್ರೈಮಾರ್ಸಿಕ ಪತ್ರಿಕೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಯುವ ಕಲಾ ಚಟುವಟಿಕೆಗಳನ್ನು ವಾರ್ತಾರೂಪದಲ್ಲಿ ಪ್ರಕಟಿಸುವ ಕೆಲಸವನ್ನು ಅಕಾಡೆಮಿಯು ಮಾಡುತ್ತಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಚಟುವಟಿಕೆಗಳು ಗಣನಿಯ ಸಂಖ್ಯೆಯಲ್ಲಿ ಜರುಗಿವೆ. ಸುವರ್ಣ ಕರ್ನಾಟಕ ವರ್ಷಾಚರಣೆಯ ಅಂಗವಾಗಿ ಬೆಳಗಾವಿ, ಬೆಂಗಳೂರು, ಉಡುಪಿ, ಗುಲಬರ್ಗಾ, ಧಾರವಾಡ, ಕುಪ್ಪಳ್ಳಿ, ಬೀದರ, ರಾಯಚೂರ, ಕಲಾಶಿಬಿರಗಳನ್ನು ಹಮ್ಮಿಕೋಳ್ಳಲಾಗಿದೆ. 'ತಿಂಗಳ ಚಿತ್ರ' ಕಲಾಪ್ರದರ್ಶಣ ಮತ್ತು ಕಲಾಶಿಬಿರಗಳು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹಲವಾರು ಶಿಬಿರಗಳನ್ನು ಜನ ಮೆಚ್ಚುಗೆಯೊಂದಿಗೆ ನಡೆದಿವೆ. ಈ ಎಲ್ಲಾ ಮಾಹಿತಿಗಳೊಂದಿಗೆ ಬೇರೆ ಬೇರೆ ಸಂಘ, ಸಂಸ್ಥೆಗಳ ಕಲಾಚಟುವಟಿಕೆಗಳ ಮಾಹಿತಿಯನ್ನು ಕಲಾವಾರ್ತೆಯಲ್ಲಿ

ಪ್ರಕಟಿಸಲಾಗಿದೆ. ಈ ಕಲಾವಾರ್ತೆಯು ಅಕಡೆಮಿಯ ವಾರ್ತೆಗಳಿಗಷ್ಟೇ ಮಿಸಲಿದ್ದ ನಾಲ್ಕಾರು ಪುಟಗಳಷ್ಟೆ ತೃಪ್ತರಾಗುತ್ತಿದ್ದ ಕಾಲ ಇಗಿಲ್ಲ. ಕಲಾವಲಯದಲ್ಲಿ ಇಂದು ಅನೇಕ ಹೊಸ ಪ್ರಯೋಗಗಳು ನಡೆಯುತ್ತಿದ್ದು, ನಮ್ಮ ರಾಜ್ಯದ ಕಲಾವಿದರು ಸಮಕಾಲಿನ ಕಲೆಯ ಜಾಗತಿಕ ಮಟ್ಟದಲ್ಲಿ ಸ್ಪಂಧಿಸುತ್ತಿದ್ದಾರೆ. ಹಳೆಯ ತಲೆಮಾರಿನ ಖ್ಯಾತ ಕಲಾವಿದರೊಂದಿಗೆ (ಓಲ್ಡ್ ಮಾಸ್ಟರ್ಸ್) ಆಧುನಿಕ ಪ್ರಜ್ಞೆಯನ್ನು ದಾಖಲಿಸಬೇಕಿದೆ. ಈ ಕಾರ್ಯ ಕನ್ನಡದ ಏಕೈಕ ಕಲಾಪತ್ರಿಕೆಯಾದ 'ಕಲಾವಾರ್ತೆ' ಯಶಸ್ವಿಯಾಗಿ ಕೈಗೊಳ್ಳುತ್ತಿದೆ.

ಹೀಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿ ದೃಶ್ಯಕಲಾ ವಲಯದ ಸೇವೆಗೈಯುತ್ತಾ ಐವತ್ತು ವಸಂತಗಳನ್ನು ದಾಟಿ ಯಶಸ್ವಿಯಾಗಿ ಮುನ್ನಡೆದಿದ್ದು ಮತ್ತು ಮುನ್ನಡೆಯುತ್ತಲಿದ್ದು, ಪ್ರತಿ ಅಧ್ಯಕ್ಷರ ಅವಧಿಯಲ್ಲಿ ಹೊಸ ಹೊಸ ಯೋಜನೆಗಳನ್ನು ನಡೆದು ಕೊಂಡು ಬಂದಿರುವುದು ನಾವು ಕಾನುತ್ತೆವೆ. ಸಾಬತ್ತರ ಸಾಂಪ್ರದಾಯಿಕ ಯೋಜನೆಗಳು ನಿರಂತರವಾಗಿ ಮುಂದೊಡಿಕೊಂಡು ಬರುತ್ತಿದ್ದು ವಿನೂತ ಯೋಜನೆಗಳು ಕೆಲವು ಮುಂದುವರೆದಿರೋ ಇನ್ನು ಕೆಲವು ಕಾಲಗರ್ಭದಲ್ಲಿ ವಿಲಿನವಾಗಿರುವಂತೆ ಕಾನುತ್ತೆವೆ.

❑❑❑



ಕಲಾ ವಾರ್ತೆ



ಪ್ರಸ್ತುತ ಕಲಾ ವಾರ್ತೆ ತ್ರೈಮಾಸಿಕ ಪತ್ರಿಕೆ

ಅಧ್ಯಾಯ : ನಾಲ್ಕು

ಕರ್ನಾಟಕ ಲಲಿತಕಲಾ ಅಕಾಡೆಮಿಯ ದೃಶ್ಯಕಲಾ ಸಾಹಿತ್ಯ ಪ್ರಕಟಣೆಗಳು

ಅಧ್ಯಾಯ : ನಾಲ್ಕು

ಕರ್ನಾಟಕ ಲಲಿತಕಲಾ ಅಕಾಡೆಮಿಯ ದೃಶ್ಯಕಲಾ ಸಾಹಿತ್ಯ ಪ್ರಕಟಣೆಗಳು

ಕನ್ನಡ ಸಾಹಿತ್ಯ ಪ್ರಕಾರವು ಇತ್ತೀಚಿನ ದಿನಗಳಲ್ಲಿ ಹಲವು ಜ್ಞಾನಶಾಖೆಗಳಲ್ಲಿ ಪ್ರಬುದ್ಧವಾಗಿ ಬೆಳೆದು ಬರುತ್ತಿದೆ. ಹಿಂದಿನ ದಿನಗಳಲ್ಲಿ ಕೇವಲ ಶುದ್ಧ ಸಾಹಿತ್ಯವನ್ನು ಮಾತ್ರ ಸಾಹಿತ್ಯ ಪ್ರಕಾರವೆಂಬುದಾಗಿ ಪರಿಗಣಿಸುತ್ತಿದ್ದ ಸಂದರ್ಭಕ್ಕಿಂತ ಭಿನ್ನವಾಗಿ ವಿವೇಚಿಸುವ, ಆಲೋಚಿಸುವ ಮನಸ್ಸುಗಳು ಈ ಹೊತ್ತು ಹೆಚ್ಚುತ್ತಲಿವೆ. ವೈಜ್ಞಾನಿಕ, ಮಾನವಿಕ ಹಾಗೂ ಲಲಿತಕಲೆಗಳಂತಹ ಸಾಹಿತ್ಯೇತರ ಜ್ಞಾನಶಾಖೆಗಳೂ ಇಂದು ತಮ್ಮದೇ ಆದ ಸಾಹಿತ್ಯದಿಂದಾಗಿ ವಿಜ್ಞಾನ ಸಾಹಿತ್ಯ, ವೈಧ್ಯಸಾಹಿತ್ಯ, ಲಲಿತಕಲಾ ಸಾಹಿತ್ಯ, ಕಾನೂನು ಸಾಹಿತ್ಯ, ಕೃಷಿ ಸಾಹಿತ್ಯ ಎಂಬ ಹೆಸರಿನಿಂದ ಗುರುತಿಸಿಕೊಂಡಿರುವುದನ್ನು ನೋಡಬಹುದು. ಲಲಿತಕಲಾ ಸಾಹಿತ್ಯ ಈ ಶತಮಾನದ ಹೊಸ ಸಾಹಿತ್ಯ ಪ್ರಕಾರಗಳೊಂದಿಗೆ ಬೆಳೆಯುತ್ತಿದೆ.[೧]

ಲಲಿತಕಲೆಗಳ ಪ್ರಕಾರಗಳಾದ ಸಾಹಿತ್ಯ, ಸಂಗೀತ, ನೃತ್ಯ, ವಾಸ್ತು, ನಾಟಕ, ಶಿಲ್ಪ, ಚಿತ್ರ ಮುಂತಾದ ಕಲೆಗಳಿಗೆ ಅವುಗಳದೇ ಆದ ಪ್ರತ್ಯೇಕ ವ್ಯಾಕರಣಾಂಶಗಳಿವೆ. ಈ ಅಭಿವ್ಯಕ್ತಿ ಮಾಧ್ಯಮವು ವಿಭಿನ್ನವಾಗಿದೆ. ಇಂದು ಅವು ಬೇರೆ ಬೇರೆಯಾದ ಸಾಹಿತ್ಯ ಪ್ರಕಾರವನ್ನು ಹೊಂದಿವೆ. ಪಾಶ್ಚಿಮಾತ್ಯರು ಈ ಬಗೆಯ ಕಲಾಸಾಹಿತ್ಯವನ್ನು ದೃಶ್ಯಕಲಾ ಸಾಹಿತ್ಯ ಮತ್ತು ಪ್ರದರ್ಶನ ಕಲೆಗಳ ಸಾಹಿತ್ಯ ಎಂದು ವಿಂಗಡಿಸಿ ಅಧ್ಯಯನ ಮಾಡುವ ಕ್ರಮವನ್ನು ನಮಗಿಂತ ಮೊದಲೇ ಪ್ರಾರಂಭಿಸಿಕೊಂಡು ಬಂದಿದ್ದಾರೆ. ಆದರೆ ಪ್ರಾಚೀನ ಭಾರತೀಯರು ಕಲಾಸಾಹಿತ್ಯವನ್ನು ಒಂದು ಪ್ರತ್ಯೇಕ ವಿಭಾಗವಾಗಿ ಪರಿಗಣಿಸಿದೇ ದೃಶ್ಯ ಮತ್ತು ಪ್ರದರ್ಶನ ಕಲೆಗಳೆರಡನ್ನೂ ಒಂದೇ ರೀತಿಯಲ್ಲಿ ಪರಿಭಾವಿಸಿಕೊಂಡು ಲಲಿತಕಲಾ ಸಾಹಿತ್ಯವೆಂದು

೦೧. ಯುವರಾಜ ಆರ್. ಎಸ್. : ಪ್ರೊ. ಎಸ್. ಸಿ. ಪಾಟೀಲರ ದೃಶ್ಯಕಲಾ ಸಾಹಿತ್ಯಾವಲೋಕನ, ಪು. ೩

ಸಾಂದರ್ಭಿಕವಾಗಿ ರಚನೆಮಾಡುತ್ತಾ ಬಂದಿದ್ದಾರೆ. ತೀರ ಇತ್ತೀಚೆಗೆ ಭಾರತೀಯರೂ ಈ ಲಲಿತಕಲಾ ಸಾಹಿತ್ಯವನ್ನು ಸಹ ದೃಶ್ಯಕಲೆ ಮತ್ತು ಪ್ರದರ್ಶನ ಕಲೆಗಳೆಂದು ವಿಂಗಡಿಸಿಕೊಂಡು ದೃಶ್ಯಕಲೆಗಳನ್ನು ಕುರಿತಾದ ಸಾಹಿತ್ಯವನ್ನು ಪ್ರದರ್ಶನ ಕಲಾಸಾಹಿತ್ಯವೆಂದು ಪರಿಗಣಿಸಿ ಅಧ್ಯಯನ ಮಾಡುತ್ತಿರುವುದು ಈ ಕ್ಷೇತ್ರದಲ್ಲಾದ ಒಂದು ಹೊಸ ಬದಲಾವಣೆ ಮತ್ತು ಬೆಳವಣಿಗೆ ಕೂಡ ಆಗಿದೆ.[೨]

ಕರ್ನಾಟಕದಲ್ಲಿ ದೃಶ್ಯಕಲೆಯು ಪ್ರಯೋಗಾತ್ಮಕವಾಗಿ ಹೆಚ್ಚು ಬಳಕೆಗೆ ಬಂದರೂ ಅದಕ್ಕೆ ಸೈದ್ಧಾಂತಿಕವಾದ ಒಂದು ದೊಡ್ಡ ಪರಂಪರೆಯೇ ಜೊತೆ ಜೊತೆಯಲ್ಲಿ ಬೆಳೆದು ಬಂದಿರುವುದು. ಈ ಕುರಿತು ದೃಶ್ಯಕಲಾ ಕ್ಷೇತ್ರದಲ್ಲಿ ಅಷ್ಟೊಂದು ಗಂಭೀರವಾದ ಚಿಂತನೆ, ಅಧ್ಯಯನ, ಸಂಶೋಧನೆಗಳು ನಡೆಯದೇ ಇರುವುದನ್ನು ನಾವು ಸ್ವತಂತ್ರ ಪೂರ್ವದಲ್ಲಿ ಪ್ರಮುಖವಾಗಿ ಗುರುತಿಸುತ್ತೇವೆ. ಸ್ವತಂತ್ರ್ಯೋತ್ತರದಲ್ಲಿ ಲಲಿತಕಲಾ ಅಕಾಡೆಮಿ ಮುಂತಾದ ಸಂಘ, ಸಂಸ್ಥೆಗಳು, ಲಲಿತಕಲಾ ಮಹಾವಿದ್ಯಾಲಯಗಳು, ವಿಶ್ವವಿದ್ಯಾಲಯ ಮಟ್ಟದಲ್ಲಿ ಲಲಿತಕಲೆಯ ವಿಶೇಷವಾಗಿ ದೃಶ್ಯಕಲೆಯ ಅಧ್ಯಯನಕ್ಕೆ ಅವಕಾಶ ದೊರೆತ ಕಾರಣವಾಗಿ ದೃಶ್ಯಕಲೆ ಪ್ರಾಯೋಗಿಕವಾಗಿ ಮತ್ತು ಸೈದ್ಧಾಂತಿಕವಾಗಿ ಜೊತೆ ಜೊತೆಯಲ್ಲಿಯೇ ಬೆಳೆಯಲು ಸಾಧ್ಯವಾಗಿದೆ. ಇನ್ನೋಂದು ಬಹುಮುಖ್ಯವಾದ ಕಾರಣವೆಂದರೆ ಪಠ್ಯದಲ್ಲಿ ದೃಶ್ಯಕಲಾ ಸಾಹಿತ್ಯ ಕಡ್ಡಾಯದ ವಿಷಯವಾಗಿ ಬಂದಿರುವುದು ಮತ್ತು ಸ್ನಾತಕೋತ್ತರ ಹಂತದಲ್ಲಿ ಕಿರುಪ್ರಬಂಧಗಳ ರಚನೆ ಹಾಗೂ ಅಕಾಡೆಮಿ, ಖಾಸಗಿ ಸಂಘ–ಸಂಸ್ಥೆಗಳು ಹಮ್ಮಿಕೊಂಡಿರುವ ಕಲಾಸಾಹಿತ್ಯದ ಕುರಿತಾದ ವಿಚಾರ ಸಂಕಿರಣಗಳು, ಕಲಾಸಾಹಿತ್ಯದ ಕುರಿತು ಹೆಚ್ಚು ತಿಳುವಳಿಕೆಯುಂಟಾಗಲು ಕಾರಣವಾಗಿವೆ ಎನ್ನಬಹುದು.[೩] ಈ ಹಿನ್ನೆಲೆಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಹಲವು ಕಲಾಪ್ರಕಾರಗಳನ್ನು ಒಳಗೊಂಡಂತೆ ಅಜ್ಞಾತ ಕಲೆಗಳ, ಕಲಾವಿದರುಗಳನ್ನು ದೃಶ್ಯಕಲಾ ಸಾಹಿತ್ಯ ಕ್ಷೇತ್ರಕ್ಕೆ ಪರಿಚಯವನ್ನು ಮಾಡಿಕೊಟ್ಟ ಹೆಮ್ಮೆ ಇದರದ್ದಾಗಿದೆ. ಅಲ್ಲದೇ ಬಹುದೊಡ್ಡ ಕೊಡುಗೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

೧೯೫೦ ರಿಂದ ಪ್ರಾರಂಭಗೊಂಡ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಕಟಣೆಯಲ್ಲಿ ಒಟ್ಟು ೯೨ ಕೃತಿಗಳು ಪ್ರಕಟಗೊಂಡಿದ್ದು (ಲಭ್ಯವಿರುವ ಮಾಹಿತಿಯ ಹಿನ್ನೆಲೆಯಲ್ಲಿ), ಅವುಗಳಲ್ಲಿ ವಿಷಯವಾರು ವಿಂಗಡಿಸುವುದಾದರೆ, ೦೧. ಕಲಾವಿದರ ಕುರಿತಂತೆ, ೦೨. ಕಲೆಗಳ ಕುರಿತಂತೆ ಹಾಗೂ ೦೩. ಕಲೆಯ ತೌಲನಿಕಕ್ಕೆ ಸಂಬಂಧಪಟ್ಟಂತೆ ಕೃತಿಗಳು ಬಿಡುಗಡೆಗೊಂಡಿವೆ.

---

೦೨. ಯುವರಾಜ ಆರ್. ಎಸ್. : ಪ್ರೊ. ಎಸ್. ಸಿ. ಪಾಟೀಲರ ದೃಶ್ಯಕಲಾ ಸಾಹಿತ್ಯಾವಲೋಕನ, ಪು. ೩

೦೩. ಅದೇ., ಪು. ೪, ೫.

೦೧. ಕಲಾವಿದರ ಕುರಿತು ಪ್ರಕಟಗೊಂಡ ಗ್ರಂಥಗಳು

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಸ್ತುತ ಸಾಲಿನವರೆಗೂ ಸುಮಾರು ೪೫ ಕೃತಿಗಳು ಕರ್ನಾಟಕ ಕಲಾವಿದರ ಕುರಿತು ಪ್ರಕಟಗೊಂಡಿದ್ದು, ಆ ಕೃತಿಗಳ ಸಂಕ್ಷಿಪ್ತ ಅವಲೋಕನ ಈ ಕೆಳಗಿನಂತೆ ಮಾಡಲಾಗಿದೆ.

೦೧. ಮೂಡುಗೋಡು ಹಿರಣ್ಣಪ್ಪ
೦೨. ಎಂ. ಜಿ. ಶುದ್ಧೋದನ
೦೩. ಎಸ್. ಎಸ್. ಕುಕ್ಕೆ
೦೪. ದೇವಲಕುಂದ ವಾದಿರಾಜ
೦೫. ಎಸ್. ಎಸ್. ಮುನೋಳಿ
೦೬. ಎಫ್. ಎಂ. ಸೂಫಿ
೦೭. ಜೆ. ಎಸ್. ಖಂಡೇರಾವ್
೦೮. ಬಿ. ಕೆ. ಹುಬಳಿ
೦೯. ಎಂ. ಟಿ. ಭೂಪಲೆ
೧೦. ಸೋಮಶೇಖರ ಸಾಲಿ
೧೧. ಯೂಸುಫ್ ಅರಕ್ಕಲ್
೧೨. ಕೆ. ಟಿ. ಶಿವಪ್ರಸಾದ
೧೩. ಎಂ. ಬಿ. ಪಾಟೀಲ
೧೪. ವಿಜಯ ಸಿಂಧೂರ
೧೫. ಎಂ. ರಾಮನರಸಯ್ಯ
೧೬. ಬಸವರಾಜ ಹಳಿಜೋಳ
೧೭. ಶಾಂತಲಿಂಗಪ್ಪ ಪಾಟೀಲ
೧೮. ಎಸ್. ಜಿ. ವಾಸುದೇವ
೧೯. ಎಂ. ಆರ್. ಬಾಳೀಕಾಯಿ
೨೦. ಪುರುಷೋತ್ತಮ ಕಾರಂತ
೨೧. ಎಸ್. ಕಾಳಪ್ಪ
೨೨. ಎಚ್. ಎಸ್. ಇನಾಮತಿ
೨೩. ವಿ. ಜಿ. ಅಂದಾನಿ
೨೪. ಕೆ. ಕೇಶವಯ್ಯ
೨೫. ವಿ. ಟಿ. ಕಾಳೆ
೨೬. ರಘೋತ್ತಮ ಪುಟ್ಟಿ
೨೭. ಸಿ. ಚಂದ್ರಶೇಖರ
೨೮. ಆರ್. ಎಂ. ಹಡಪದ್
೨೯. ಎಸ್. ಎಂ. ಪಂಡಿತ್
೩೦. ಶಂಕರಗೌಡ ಬೆಟ್ಟದೂರ
೩೧. ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿ
೩೨. ಮ. ಈ. ಗುರು
೩೩. ವೈ. ಸುಬ್ರಮಣ್ಯ ರಾಜು
೩೪. ಜಿ. ವಿ. ಸುಭಾಷಿಣಿ ದೇವಿ
೩೫. ಕೆ. ಕೆ. ಹೆಬ್ಬಾರ್
೩೬. ಕೆ. ವೆಂಕಟಪ್ಪ
೩೭. ಡಾ. ಬಿ. ಕೆ. ಹಿರೇಮಠ
೩೮. ಜಿ. ವೈ. ಹುಬ್ಳೀಕರ್

೩೯. ಆರ್. ಎಸ್. ನಾಯ್ಡು

೪೦. ಸಿ. ಪಿ. ನಾಗೌಡ

೪೧. ಪ್ರೊ. ವಿ. ಬಿ. ಹಿರೇಗೌಡರ್

೪೨. ಎಂ. ಜಿ. ವಾಚೇದಮಠ

೪೩. ಟಿ. ವಿ. ಗಣೇಶಗುಡಿ

೪೪. ಅಪ್ಪಾಸಾಹೇಬ ಬಿ. ಕಾಡಾಪೂರಕರ್

೪೫. ಎಂ. ಬಿ. ಲೋಹಾರ್

ಪಟ್ಟಿಮಾಡಿದ ಮೇಲಿನ ಎಲ್ಲ ಗ್ರಂಥಗಳ ಕುರಿತು ಸಂಕ್ಷಿಪ್ತವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಮೂಡುಗೋಡು ಹಿರಣಪ್ಪ[೪]: ನಾ. ಡಿಸೋಜ ಅವರು ಈ ಕೃತಿಯ ಲೇಖಕರಾಗಿದ್ದು, ೧೯೯೫ರಲ್ಲಿ ಪ್ರಕಟಗೊಂಡ ಈ ಕೃತಿಯು ರೂ. ೧೦ ಬೆಲೆಯುಳ್ಳ ಪುಟ್ಟ ಕೃತಿ. ಇಲ್ಲಿ "ಶ್ರೀ ಮೂಡುಗೋಡು ಹಿರಣ್ಯಪ್ಪನವರ ಜೀವನ ಚರಿತ್ರೆಯಾಗಿದೆ. ಇವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹೊಸಬಾಳೆಯಿಂದ ೩ ಕಿ.ಮೀ. ದೂರದ ಮೂಡುಗೋಡು ಗ್ರಾಮದಲ್ಲಿ ಜನಿಸಿದವರು. ಹಿರಣ್ಯಪ್ಪನವರು ಬಾಲ್ಯದಿಂದಲೂ ಪ್ರತಿಭಾವಂತರಾಗಿದ್ದರು. ಗುಡಿಗಾರರ ಕುಟುಂಬದಿಂದ ಬಂದಿರುವುದರಿಂದ ಹುಟ್ಟಿನಿಂದಲೇ ಕಲೆ ಕರಗತವಾಗಿದ್ದಿತು. ಕೆಲಸದಲ್ಲಿ ನಿಷ್ಠೆಯನ್ನು ತೋರಿಸಿ, ಅರಮನೆ ಕೆಲಸದಲ್ಲಿ ಚಿತ್ರ ಶಿಲ್ಪಕಲಾಕೃತಿ ರಚಿಸುವಲ್ಲಿ ಹೆಸರುವಾಸಿಯಾದರು. ಅರಮನೆಯಲ್ಲಿ ದಂತದ ಸಿಂಹಾಸನ, ಶ್ರೀಗಂಧದ ಬೀಸಣಿಗೆಯಿಂದ ಇವರು ಪ್ರಸಿದ್ಧರಾಗಿದ್ದರು. ಈ ಕೃತಿಯು ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಯಲ್ಲಿದೆ. ಮೂಡುಗೋಡು ಹಿರಣ್ಯಪ್ಪನವರ ೭ ಕಲಾಕೃತಿಗಳ ಕಪ್ಪು-ಬಿಳುಪು ಛಾಯಾಚಿತ್ರಗಳನ್ನು ಹಾಕಲಾಗಿದೆ. ಈ ಗ್ರಂಥದಲ್ಲಿ ಕಲೆಯ ವಿಷಯ, ಕಲಾವಿದರ ಜೀವನದ ಬಗ್ಗೆ, ಕೆಲವು ಕಲಾಕೃತಿಗಳ ಕುರಿತು ಬರೆದಿರುವರು. ಇಲ್ಲಿ ಆರಿಸಿ ಸೇರಿಸಿದ ಚಿತ್ರಗಳು ಕಲಾವಿದರ ಕಲಾವಿಕಾಸದ ಪ್ರತೀಕವಾಗಿವೆ. ಅವು ಕಲಾವಿದನ ಕಲಾಸಂಪತ್ತಿನ ವ್ಯಾಪ್ತಿಯನ್ನು ಅರಿಯಲು ಸಹಾಯವಾಗುವುದರಲ್ಲಿ ಸಂದೇಹವಿಲ್ಲ".[೫]

ಎಂ. ಜೆ. ಶುದ್ಧೋದನ್[೬] : ೧೯೯೫ರಲ್ಲಿ ಎಚ್. ಎಂ. ಪರಮೇಶ ಅವರು ಬರೆದ ಈ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿತು. ಈ ಕೃತಿಯೂ ರೂ. ೧೦ ಬೆಲೆಯುಳ್ಳ ಪುಟ್ಟಕೃತಿ. ಇಲ್ಲಿ "ಕರ್ನಾಟಕ ಪ್ರಮುಖ ಕಲಾವಿದರಲ್ಲಿ ಒಬ್ಬರಾದ ಶ್ರೀ ಎಂ. ಶುದ್ಧೋದನರ ಜೀವನ ಚರಿತ್ರೆಯನ್ನು ಕಲಾವಂತಿಕೆಯ ಹಿನ್ನೆಲೆಯಲ್ಲಿ ಲೇಖಕರು

---

೦೪. ನಾ. ಡಿಸೋಜ : ಮೂಡುಗೊಡು ಹಿರಣ್ಣಪ್ಪ, ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

೦೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೨೦

೦೬. ಎಚ್. ಎಂ. ಪರಮೇಶ : ಎಂ. ಜೆ. ಶುದ್ಧೋದನ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

ದಾಖಲಿಸಿದ್ದಾರೆ. ಎಂ.ಜೆ. ಶುದ್ಧೋದನರು ಎಂ.ಎಸ್. ಜಗದೀಶ ಕಲಾ ಶಿಕ್ಷಕರ ಮಗನಾಗಿ ೧೯೧೪ರ ಫೆಬ್ರವರಿ ೨ ರಂದು ಮೈಸೂರಿನಲ್ಲಿ ಜನಿಸಿ, ಬಾಲ್ಯ, ವಿದ್ಯಾಭ್ಯಾಸ, ಅನಂತರ ಚಿತ್ರಕಲೆಯಿಂದ ಕಲಾಪ್ರಪಂಚಕ್ಕೆ ಸೇರ್ಪಡೆಯಾಗಿ ಮಹಾರಾಜ ಪ್ರೌಢಶಾಲೆಯಲ್ಲಿ ಆರ್.ಕೆ. ನಾರಾಯಣ ಸೋದರ ಆರ್.ಕೆ. ಬಲರಾಂ ಅವರ ಸಹಪಾಠಿಯಾಗಿ, ಕೇರಳದ ಪ್ರಖ್ಯಾತ ಕಲಾವಿದ ರಾಜಾ ರವಿವರ್ಮರ ಜೊತೆಯಲ್ಲಿ ಸಹಕಲಾವಿದರಾಗಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಆಹ್ವಾನದಂತೆ ತಮ್ಮ ಗುರುಗಳ ಜೊತೆಯಲ್ಲಿ ಒಡನಾಡಿದ ಅನುಭವದ ಚಿತ್ರಣವನ್ನು ಲೇಖಕರು ನೀಡಿದ್ದಾರೆ. ಚಾಮರಾಜೇಂದ್ರ ವೃತ್ತಿಶಿಕ್ಷಣ ಸಂಸ್ಥೆಯಲ್ಲಿ ಕಲಾಭ್ಯಾಸ ಮುಗಿಸಿ, ಪ್ರಾಚ್ಯ ಸಂಶೋಧನಾ ಇಲಾಖೆಯಲ್ಲಿ ಡಾ. ಎಂ.ಎಚ್. ಕೃಷ್ಣ ಅವರ ನಿರ್ದೇಶಕತ್ವದಲ್ಲಿ ಕೆಲಸ ಮಾಡಿ, ನಂತರ ಚನ್ನಪಟ್ಟಣದ ಕರಕುಶಲ ಕೈಗಾರಿಕಾ ಶಾಲೆಯಲ್ಲಿ ಕಲಾಶಿಕ್ಷಕನಾಗಿ, ೧೯೫೯ರಲ್ಲಿ ಚಾಮರಾಜೇಂದ್ರ ವೃತ್ತಿಶಿಕ್ಷಣ ಸಂಸ್ಥೆಯ ಕಲಾ ಶಾಲೆಯ ವೈಸ್ ಪ್ರಿನ್ಸಿಪಾಲ್‌ರಾಗಿ ಮತ್ತು ವಿಧಾನಸಭೆಯ ಸಭಾಂಗಣದಲ್ಲಿ ಗಾಂಧಿಚಿತ್ರ ರಚಿಸಿ, ಅನಂತರ ಖ್ಯಾತನಾಮರ ಚಿತ್ರಗಳನ್ನು ರಚಿಸಿ ಸಾಕಷ್ಟು ಭೂದೃಶ್ಯಗಳನ್ನು ನಿರ್ಮಿಸಿರುವ ಚರಿತ್ರೆಯನ್ನು ಈ ಪುಸ್ತಕದಲ್ಲಿ ಲೇಖಕರು ದಾಖಲಿಸಿದ್ದಾರೆ"[೭].

ಎಸ್. ಎಸ್. ಕುಕ್ಕೆ[೮] : ೧೯೯೭ರಲ್ಲಿ ವಿ. ಟಿ. ಎಸ್. ರಾವ್ ಅವರು ಈ ಕೃತಿಯನ್ನು ಬರೆದಿದ್ದಾರೆ. ಇಲ್ಲಿ ಎಸ್. ಎಸ್. ಕುಕ್ಕೆ ಅವರ "ಬಾಲ್ಯಜೀವನ, ಕಲಾವಿದನಾಗಲು ಸಂಕಲ್ಪ, ಪ್ರತಿಭಾನಿತ ಕಲಾ ವಿದ್ಯಾರ್ಥಿ, ಬೆಂಗಳೂರಿನಲ್ಲಿ ನೆಲೆ, ಬಹುಮುಖ ಪ್ರತಿಭೆ, ಕಲಾ ಚಟುವಟಿಕೆಗಳು, ಕಲಾ ಶಿಕ್ಷಕರಾಗಿ ಕಲಾಪ್ರದರ್ಶನಗಳು, ಬಹುಮಾನ, ಪ್ರಶಸ್ತಿಗಳು, ಕಲಾಕೃತಿಗಳ ಸಂಗ್ರಹ, ಸುಬ್ರಹ್ಮಣ್ಯ ಕಲಾಗ್ಯಾಲರಿ, ಕೊನೆಯ ದಿನಗಳು, ಕೃತಿಗಳ ಸಮೀಕ್ಷೆ ಮುಂತಾದ ಅಂಶಗಳ ಬಗ್ಗೆ ವಿವರಿಸಲಾಗಿದೆ. ಅವರ ಕಲಾಕೃತಿಗಳ ಬಗ್ಗೆ ಹೇಳುತ್ತಾ ಅವುಗಳ ವರ್ಣನೆಯನ್ನು ವಿವರಣಾತ್ಮಕವಾಗಿ ನಿರೂಪಿಸಿದ್ದಾರೆ"[೯].

ದೇವಲಕುಂದ ವಾದಿರಾಜ[೧೦] : ಈ ಕೃತಿಯನ್ನು ಹೆಚ್. ಎನ್. ಸುರೇಶ್ ಅವರು ೧೯೯೭ರಲ್ಲಿ ಬರೆದಿದ್ದಾರೆ. "ಕರ್ನಾಟಕದ ಪ್ರಖ್ಯಾತ ಕಲಾವಿದರಾದ ಶ್ರೀ ದೇವಲಕುಂದ ವಾದಿರಾಜ ಅವರ ಜೀವನಾಧಾರಿತ ಪುಸ್ತಕ ಇದಾಗಿದೆ. ಇಲ್ಲಿ ವಾದಿರಾಜರು ಬಾಳಿದ ಸಂಕಷ್ಟದ ದಿನಗಳು, ಮೈಸೂರಿನಲ್ಲಿ ಟಿ. ಚೌಡಯ್ಯನವರ ಸಹಾಯ, ಗುಡಿಕಾರರಾದ

---

೦೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೨೧

೦೮. ವಿ.ಟಿ.ಎಸ್. ರಾವ್ : ಎಸ್. ಎಸ್. ಕುಕ್ಕೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭

೦೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೩೦

೧೦. ಹೆಚ್. ಎನ್. ಸುರೇಶ : ದೇವಲಕುಂದ ವಾದಿರಾಜ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭

ಗಣಪತಪ್ಪ ಮತ್ತು ವೆಂಕಪ್ಪನವರಲ್ಲಿ ಮಾರ್ಗದರ್ಶನ, ಅವರ ಜೀವನದ ದುರಂತಮಯ ಹಂತಗಳು, ಶಾಂತಿನಿಕೇತನದ ಖ್ಯಾತ ಕಲಾವಿದ ಶ್ರೀ ಹರಿಹರನ್ ಅವರ ಒಡನಾಟ, ಪ್ರಾದೇಶಿಕ ವಿನ್ಯಾಸ ಮಂಡಳಿಯಲ್ಲಿ ಇವರ ಕೆಲಸ ಪ್ರಾರಂಭ, ೧೯೬೫ರಲ್ಲಿ ರಾಷ್ಟ್ರ ಪ್ರಶಸ್ತಿ, ವಿದೇಶಿಯರ ಬಗ್ಗೆ ಇವರಿಗಿದ್ದ ಪರಿಚಯ, ಲಂಡನ್ ಯಾತ್ರೆ, ಇವರು ವಿಶಿಷ್ಟ ಕಲಾಪ್ರಕಾರಗಳಿಗೆ ಮಾರ್ಗದರ್ಶಿಯಾಗಿ ಯಾವುದೇ ಶುಲ್ಕ ಪಡೆಯದೆ ವಿದ್ಯಾರ್ಥಿಗಳಿಗೆ ನೀಡಿದ ಪ್ರೋತ್ಸಾಹ ಮತ್ತು ಕಲಾಸಂಸ್ಥೆಗಳನ್ನು ಕಟ್ಟಲು ಸಹಕಾರ ನೀಡಿರುವ ಬಗ್ಗೆ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ, ಅವರ ಭಾಷಣ ಹಾಗೂ ಇವರ ವಿವಿಧ ರೀತಿಯ ಸಾಂಪ್ರದಾಯಿಕ ಶೈಲಿಗಳ ಛಾಯಾಚಿತ್ರಗಳನ್ನು ಹೊಂದಿರುವ ಪುಸ್ತಕವಿದಾಗಿದೆ"[೧೧].

ಎಸ್.ಎಸ್. ಮನೋಳಿ[೧೨] : ಮಮತಾ ಜಿ. ಸಾಗರ ಅವರು ಈ ಕೃತಿಯನ್ನು ಬರೆದಿದ್ದಾರೆ. ೧೯೯೮ರಲ್ಲಿ ಈ ಕೃತಿಯು ಪ್ರಕಟಗೊಂಡಿದ್ದು, "೧೯೬೪ರಲ್ಲಿ ಕರ್ನಾಟಕದಲ್ಲಿ 'ವಿ–ಫೋರ್' ಕಲಾವಿದರ ಗುಂಪಿನ ಪ್ರಮುಖರಲ್ಲಿ ಒಬ್ಬರು ಎಸ್.ಎಸ್. ಮನೋಳಿಯವರು. ಇವರ ಬಾಲ್ಯಜೀವನ, ಕಲಾಶಿಕ್ಷಣ, ಬಡತನದಲ್ಲಿ ಚಿಕ್ಕಪ್ಪಂದಿರ ಸಹಕಾರದಿಂದ ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಲ್ಲಿ ಚಿತ್ರಕಲೆಯ ಶಿಕ್ಷಣ, ಶಂಖೋ ಚೌಧುರಿ, ಎನ್. ಎಸ್. ಬೇಂದ್ರೆ, ವಿನೋದ ಷಾಹ, ಟಿ.ಕೆ. ಪಟೇಲ್, ಡಾ. ಶಾಸ್ತ್ರೀ, ಕೆ.ಕೆ. ಹೆಬ್ಬಾರ್, ವಿ.ಎಂ. ಮಾಳಿ, ಗೋದಾಲ್‌ಕರ್ ಮುಂತಾದವರಿಂದ ಇವರು ಪಡೆದ ಕಲಾಬಳುವಳಿಗಳನ್ನು ಮತ್ತು ನಂತರದಲ್ಲಿ ಆರ್. ಎಂ. ಹಡಪದರ ಪರಿಚಯ, ಕೇನ್ ಕಲಾಶಾಲೆ, ಎಂ.ಎಸ್. ನಂಜುಂಡರಾಯರ ಚಿತ್ರಕಲಾ ಪರಿಷತ್ತು, ಆ.ನ. ಸುಬ್ಬರಾಯರ ಕಲಾಮಂದಿರದ ಒಡನಾಟಗಳ ಪರಿಚಯವನ್ನು ಲೇಖಕಿ ನೀಡಿದ್ದಾರೆ. ಎಸ್.ಎಸ್. ಮನೋಳಿಯವರು ಚಿತ್ರಕೃತಿಗಳನ್ನು ಫಿಗರೇಟಿವ್‌ನಿಂದ ಅಮೂರ್ತದ ಶೈಲಿಯ ಕಡೆಗೆ ಯಾವ ರೀತಿಯಾಗಿ ಮತ್ತು ಯಾವ ಕಲಾವಿದರ ಪ್ರೇರಣೆಯನ್ನು ಯಾವ ಯಾವ ಹಂತಗಳಲ್ಲಿ ಪಡೆದುಕೊಂಡರು ಎಂಬುದನ್ನು ಈ ಪುಸ್ತಕದಲ್ಲಿ ತಿಳಿಸಲಾಗಿದೆ"[೧೩].

ಎಫ್. ಎಂ. ಸೂಫಿ[೧೪] : ದಿ॥ ಪಿ. ಆರ್. ತಿಪ್ಪೇಸ್ವಾಮಿಯವರು ಈ ಕೃತಿಯನ್ನು ೧೯೯೮ರಲ್ಲಿ ಬರೆದಿದ್ದು, "ಫಕೀರ್ ಮಹಮ್ಮದ್ ಸೂಫಿ ಇವರ ಪೂರ್ತಿ ಹೆಸರು. ಇವರು

---

೧೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೩೫

೧೨. ಮಮತಾ ಜಿ. ಸಾಗರ : ಎಸ್. ಎಸ್. ಮುನೋಳಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೮

೧೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೩೬

೧೪. ಪಿ. ಆರ್. ತಿಪ್ಪೇಸ್ವಾಮಿ : ಎಫ್. ಎಂ. ಸೂಫಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೮

ಪ್ರಾಣಿ, ಪಕ್ಷಿಗಳ ರಚನೆಯಲ್ಲಿ ಸಿದ್ಧಹಸ್ತರು. ಎಂ.ಎಫ್. ಸೂಫಿ ಎಂದೇ ಕಲಾಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು. 'ಶಿವ ಕೊಡಬೇಕು, ನಾವು ಅನುಭವಿಸಬೇಕು' ಎನ್ನುವ ರೀತಿಯಲ್ಲಿ ಬದುಕನ್ನು ಸಾಗಿಸಿದವರು.ಮೈಸೂರಿನ ಮೃಗಾಲಯವನ್ನು ಮನೆಯಂತೆ ಭಾವಿಸಿ ಅಲ್ಲಿರುವ ಎಲ್ಲ ಬಗೆಯ ಮೃಗ ಪ್ರಾಣಿ, ಪಕ್ಷಿಗಳನ್ನು ಚಿತ್ರಿಸಿದ್ದಾರೆ. ಸೂಫಿ ಅವರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಾಧ್ಯಾಪಕರಾಗಿ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಶೃಂಗರಿಸುವ ಕೆಲಸ ಮಾಡುತ್ತಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ೧೯೮೨ರಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಈ ಕೃತಿಯು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿದೆ. ಇದರಲ್ಲಿ ಎರಡು ವರ್ಣ ಚಿತ್ರಗಳು ಮತ್ತು ೧೧ ಕಪ್ಪು ಬಿಳುಪು ಚಿತ್ರಗಳು ಇವೆ"[೧೫].

ಜೆ. ಎಸ್. ಖಂಡೇರಾವ್[೧೬] : ೧೯೯೯ರಲ್ಲಿ ಈ ಕೃತಿಯನ್ನು ಕುಪ್ಪಣ್ಣ ಕಂದಗಲ್ ಅವರು ಬರೆದಿದ್ದಾರೆ. "ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಸಮಕಾಲೀನ ಕಲಾವಿದರ ಮಾಲೆಯಲ್ಲಿ ಪ್ರಕಟಗೊಂಡ ಪುಸ್ತಕವಿದು. ಕಲಬುರ್ಗಿ ವಿಭಾಗದಲ್ಲಿ, ಕಲಾಕ್ಷೇತ್ರ ನಿರುತ್ಸಾಹ ಸ್ಥಿತಿಯನ್ನು ತಲುಪಿ, ಕಲಾಚಟುವಟಿಕೆಗಳು ಸ್ತಬ್ಧವಾಗಿದ್ದ ಸಂದರ್ಭದಲ್ಲಿ ಕಲಬುರ್ಗಿಯಲ್ಲೊಂದು ಕಲಾಶಾಲೆಯನ್ನು ೬೦ರ ದಶಕದಲ್ಲಿ ಸ್ಥಾಪಿಸಿದರು. ತಮ್ಮ ಅಧ್ಯಾಪಕವೃತ್ತಿ ಮತ್ತು ಕಲಾಚಟುವಟಿಕೆಗಳಿಂದ ಈ ಪ್ರದೇಶದ ಕಲಾಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇವರು ಇಂದಿನ ಸಮಕಾಲೀನ ಪ್ರಮುಖ ಕಲಾವಿದರಲ್ಲೊಬ್ಬರು. ನಿಸರ್ಗ ಚಿತ್ರ ಮತ್ತು ಭಾವಚಿತ್ರಗಳನ್ನು ರಚಿಸುವುದರಲ್ಲಿ ತಮ್ಮತನವನ್ನು ಸ್ಥಾಪಿಸಿ, ಅನೇಕ ನವಶೈಲಿಯ ಸರಣಿಗಳನ್ನು ರಚಿಸಿದ ಖಂಡೇರಾವರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಎರಡು ವರ್ಣ ಮತ್ತು ೧೬ ಕಪ್ಪು ಬಿಳುಪು ಚಿತ್ರಗಳಿಂದ ಕೂಡಿದ ಒಟ್ಟು ೧೮ ಕಲಾಕೃತಿಗಳ ಛಾಯಾಚಿತ್ರಗಳನ್ನು ಇಲ್ಲಿ ಹಾಕಲಾಗಿದೆ. ಮೇಘ ಸಂದೇಶ, ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಶಕುಂತಲೆ ಸಖಿಯರೊಂದಿಗೆ, ಮಹಿಷ ಮರ್ದಿನಿ, ವರಹ ಯಕ್ಷನ ಕನಸು, ಗೋಕುಲ ನಿರ್ಗಮನ ಮುಂತಾದ ಕಲಾಕೃತಿಗಳ ಬಗ್ಗೆ ತಿಳಿಸಿದ್ದಾರೆ. ಈ ಕೃತಿಯೂ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ರಚನೆಯಾಗಿದೆ"[೧೭].

ಬಿ.ಕೆ. ಹುಬ್ಬಳ್ಳಿ[೧೮] : ಡಿ. ಎಸ್. ಚೌಗಲೆ ಅವರು ಈ ಕೃತಿಯನ್ನು ೧೯೯೯ರಲ್ಲಿ

---

೧೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೪೦
೧೬. ಕುಪ್ಪಣ್ಣ ಕಂದಗಲ್ : ಜೆ. ಎಸ್. ಖಂಡೇರಾವ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೯
೧೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೪೨
೧೮. ಡಿ. ಎಸ್. ಚೌಗಲೆ : ಬಿ. ಕೆ. ಹುಬಳಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೯

ರಚಿಸಿದ್ದು, "ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುಗಟಖಾನ ಹುಬ್ಬಳ್ಳಿ ಊರಿನವರಾದ ಬಿ. ಕೆ. ಹುಬ್ಬಳಿಯವರ ಜೀವನ ಮತ್ತು ಕಲಾಕೃತಿಗಳ ಬಗ್ಗೆ ಪರಿಚಯಾತ್ಮಕ ಕೃತಿಯಾಗಿದೆ. ಈ ಕೃತಿಯು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿದೆ. ಈ ಕೃತಿಯಲ್ಲಿ ಬಿ.ಕೆ. ಹುಬಳಿಯವರ ಬಾಲ್ಯ ಜೀವನ, ಶಿಕ್ಷಣ, ಚಿತ್ರಕಲೆಗೆ ದೊರೆತ ಪ್ರೋತ್ಸಾಹ, ಪರೀಕ್ಷೆಯ ಸಿದ್ಧತೆ, ಎಲಿಮೆಂಟರಿ ಪರೀಕ್ಷೆ, ಹಾಲಭಾವಿಯವರ ಸ್ಕೂಲಿನಿಂದ ಜೆ.ಜೆ.ವರೆಗೆ, ಮುಂಬೈಯಲ್ಲಿಯ ಜೀವನ, ಮದುವೆ, ಪಾಶ್ಚಾತ್ಯ ಕಲಾವಿದರ ಪ್ರಭಾವ, ದೇಶಿತನದ ಸಂಸ್ಕಾರ, ಲಲಿತಕಲಾ ಅಕಾಡೆಮಿ ಸದಸ್ಯ, ಸಂದರ್ಶಕ ಉಪನ್ಯಾಸಕ, ಅವರಿಗೆ ಬಂದಿರುವ ಪ್ರಶಸ್ತಿಗಳು, ಈ ಎಲ್ಲದರ ಬಗೆಗೆ ವಿವರವಾಗಿ ವಿಷಯ ಮೂಡಿಬಂದಿದೆ. ಬಿ.ಕೆ. ಹುಬಳಿಯವರು ರೇಖಾಚಿತ್ರಗಳನ್ನು, ಜಲವರ್ಣಕೃತಿಗಳನ್ನು ಮತ್ತು ತೈಲವರ್ಣಚಿತ್ರಗಳನ್ನು ರಚಿಸಿರುವುದರ ಬಗ್ಗೆ ತಿಳಿಸಿದ್ದಾರೆ. ಈ ಕೃತಿಯಲ್ಲಿ ೪ ವರ್ಣಚಿತ್ರಗಳು, ೯ ಕಪ್ಪು ಬಿಳುಪು ಚಿತ್ರಗಳು ಮತ್ತು ರೇಖಾಚಿತ್ರಗಳು ಇಲ್ಲಿ ಸಂಗ್ರಹಗೊಂಡಿವೆ. ಬಿ.ಕೆ. ಹುಬಳಿಯವರು ಕೇವಲ ಕಲಾವಿದರಾಗದೇ ನಾಟ್ಯ, ಸಂಗೀತ ಪ್ರೇಮಿ ಆಗಿದ್ದರು. ಕಲೆಯ ಸಾಧನೆಯೆಂದರೆ ಒಂದು ತಪಸ್ಸಿನಂತೆ ಎಂದು ಹೇಳುತ್ತಿದ್ದರು. ಒಟ್ಟಾರೆ ಬಿ.ಕೆ. ಹುಬಳಿಯವರ ಜೀವನ ಸಾಧನೆಯ ಕಿರು ಚಿತ್ರಣವಿದೆ"[೧೯].

ಎಂ. ಟಿ ಭೋಪಲೆ[೨೦] **:** ೧೯೯೯ರ ಅವಧಿಯಲ್ಲಿ ಈ ಕೃತಿಯು ಪ್ರಕಟಗೊಂಡಿದ್ದು, ಡಿ. ಎನ್. ಅಕ್ಕಿಯವರು ಈ ಕೃತಿಯನ್ನು ರಚಿಸಿದ್ದಾರೆ. ಉಜ್ವಲ ತಾರೆ ಎನಿಸಿಕೊಂಡ ಕಲಾವಿದ ಮಾರ್ತಂಡರಾವ್ ತಿಪ್ಪಣ್ಣ ಭೋಪಳೆ (ಎಂ.ಟಿ. ಭೋಪಲೆ) ಇವರ ಪೂರ್ವಜರು ಕಲ್ಬುರ್ಗಿಜಿಲ್ಲೆಯ ಶಹಪೂರ ತಾಲ್ಲೂಕಿನ ಸಾಗರ ಗ್ರಾಮದವರು. ಸ್ವಕುಳ ಸಾಳಿ ಮತದವರು. ಇವರ ಬಾಲ್ಯಶಿಕ್ಷಣ ಕಲ್ಬುರ್ಗಿಯ ನೂತನ ವಿದ್ಯಾಲಯ ಶಿಕ್ಷಣ ಸಂಸ್ಥೆ, ನಂತರ ೧೯೩೦ರಲ್ಲಿ ಹದಿನಾರನೆಯ ವರ್ಷ ವಯಸ್ಸಿನಲ್ಲಿಯೆ ಮುಂಬಯಿಗೆ ಬಂದು ಅಲ್ಲಿನ ಜೆ.ಜೆ. ಕಲಾ ಶಾಲೆಯಲ್ಲಿ ಅವರು ಕಲಾ ವ್ಯಾಸಂಗವನ್ನು ಮುಗಿಸಿದರು. ವಿಶ್ವವೇ ಬೆರಳು ಕಚ್ಚುವಂತೆ ವಿಶ್ವಕ್ಕೆ ಆದರ್ಶವಾದ, ಅನುಕರಣೀಯವಾದ ಶಿಲ್ಪ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ಚಿತ್ರಕಲೆಯಂಥ ಲಲಿತ ಕಲೆಗಳಿಗೆ ಮಾರುಹೋಗುತ್ತಾರೆ. ಮುಂದೆ ಅಲೆಮಾರಿ ಹುಡುಗಿ, ನೆಹರು, ಬಿಗಿನಿಂಗ್ ಆಫ್ ಪ್ಲೇ, ಆಟದ ಆರಂಭ, ಎ ನ್ಯಾರೋ ಸ್ಟ್ರೀಟ್, ಇಕ್ಕಟ್ಟಾದ ಓಣಿ ಇತ್ಯಾದಿ ಚಿತ್ರಗಳನ್ನು ರಚಿಸಿದ್ದಾರೆ. ಇವರು ವಿದೇಶಗಳ ಅನೇಕ ಕಲಾಕೃತಿಗಳನ್ನು ಪ್ರದರ್ಶಿಸಿ ಅಪಾರ ಕೀರ್ತಿಯನ್ನು ಗಳಿಸಿದ್ದಾರೆ. ಅಲ್ಲದೆ ಅನೇಕ ಬಹುಮಾನಗಳು, ಪ್ರಶಸ್ತಿ ಪತ್ರಗಳನ್ನು

---

೧೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೪೫

೨೦. ಡಿ. ಎನ್. ಅಕ್ಕಿ : ಎಂ. ಟಿ. ಭೋಪಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೯

ಪಡೆದುಕೊಂಡಿದ್ದಾರೆ. ಇವರ ಪ್ರಮುಖ ಚಿತ್ರಗಳು ಮೋಹಿನಿ, ರುಕ್ಮಾಂಗದ, ಗಂಗಾವತರಣ, ತಾಂಡವ ನೃತ್ಯ, ಶಿವ ಪಂಚಾಯತನ, ದಮಯಂತಿ, ಸೀತಾದೇವಿ, ಶಕುಂತಲಾ ಪ್ರಣಯ, ಪತ್ರಲೇಖನ ಮುಂತಾದವುಗಳ ಜೊತೆ ಇಲ್ಲಿ ಕೆಲವು ಕೃತಿಗಳ ಛಾಯಾಚಿತ್ರಗಳಿವೆ[೨೧].

ಸೋಮಶೇಖರ ಸಾಲಿ[೨೨] : ಡಾ. ಬಿ. ಕೆ. ಹಿರೇಮಠ ಅವರು ಈ ಕೃತಿಯನ್ನು ಬರೆದಿದ್ದು, ೧೯೯೯ರ ಅವಧಿಯಲ್ಲಿ ಈ ಕೃತಿಯು ಪ್ರಕಟಗೊಂಡಿದ್ದು, ಈ ಕಿರು ಹೊತ್ತಿಗೆಯು ಗಾತ್ರದಲ್ಲಿ ಚಿಕ್ಕದಾದರೂ ಸೋಮಶೇಖರ ಸಾಲಿಯವರ ಜೀವನ, ಸಾಧನೆ ಮತ್ತು ಚಿತ್ರಕಲೆಗೆ ಅವರು ನೀಡಿದ ಕಾಣಿಕೆಯನ್ನು ಓದುಗರಿಗೆ ಸೂಕ್ತ ರೀತಿಯಲ್ಲಿ ಪರಿಚಯಿಸಿಕೊಡುತ್ತದೆ. ಇದರಲ್ಲಿ ಅವರ ಪ್ರಸಿದ್ಧಚಿತ್ರಗಳಾದ ವೀರವಿರಾಗಿಣಿ ಅಕ್ಕಮಹಾದೇವಿ, ತೈಲವರ್ಣ, ಕಲಾರಾಧನೆ, ಜಲವರ್ಣ, ರೂಪದರ್ಶಿ–ತೈಲವರ್ಣ, ಚರಖ–ಜಲವರ್ಣ, ಭಾವಚಿತ್ರ ತೈಲವರ್ಣ, ಭಾವಚಿತ್ರ ಪೆನ್ಸಿಲ್‌ಸ್ಕೆಚ್, ಮಹಿಳೆ ತೈಲವರ್ಣಚಿತ್ರ, ನಗ್ನರೂಪದರ್ಶಿ ಪೆನ್ಸಿಲ್‌ಸ್ಕೆಚ್, ನರ್ತಕಿ ಪೆನ್ಸಿಲ್‌ಸ್ಕೆಚ್, ರೂಪದರ್ಶಿ ಪೆನ್ಸಿಲ್‌ಸ್ಕೆಚ್, ಶ್ರೀಬಂಥನಾಳ ಸ್ವಾಮಿಜಿಯವರ ಭಾವಚಿತ್ರ–ಪೆನ್ಸಿಲ್‌ಸ್ಕೆಚ್– ಚಿತ್ರಗಳನ್ನು ಸುಂದರವಾಗಿ ವರ್ಣ ಹಾಗೂ ಕಪ್ಪು ವರ್ಣದಲ್ಲಿ ಮುದ್ರಿಸಿದ್ದಾರೆ[೨೩].

ಯೂಸುಫ್ ಅರಕ್ಕಲ್[೨೪] : ೧೯೯೯ರಲ್ಲಿ ಈ ಕೃತಿಯನ್ನು ಚಿತ್ರಕಲಾವಿದರಾದ ಚಿ. ಸು. ಕೃಷ್ಣಸೆಟ್ಟಿಯವರು ಬರೆದಿದ್ದಾರೆ. ಯೂಸೂಫ್ ಅರಕ್ಕಲ್ ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿ ಗಳಿಸುವುದರ ಮೂಲಕ ಕರ್ನಾಟಕಕ್ಕೆ ಕೀರ್ತಿ ತಂದವರು. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿರುವ ಈ ಕೃತಿಯು ೩ ವರ್ಣ ಚಿತ್ರಗಳನ್ನು ಮತ್ತು ೧೬ ಕಪ್ಪು ಬಿಳುಪು ಚಿತ್ರಗಳನ್ನು ಹೊಂದಿದೆ. ಇಲ್ಲಿ ಕಲಾವಿದರ ಜೀವನ ಸಾಧನೆಯ ವಿವಿಧ ಹಂತಗಳ ಕಲಾಕೃತಿಗಳ ಸಂಕ್ಷಿಪ್ತ ಚಿತ್ರಣವಿದೆ[೨೫].

ಕೆ.ಟಿ. ಶಿವಪ್ರಸಾದ್[೨೬] : ಚಿತ್ರಕಲಾವಿದರಾದ ಎಚ್. ಎ. ಅನಿಲ ಕುಮಾರ್ ಅವರು ಈ ಗ್ರಂಥವನ್ನು ೨೦೦೦ರ ಅವಧಿಯಲ್ಲಿ ರಚಿಸಿದ್ದಾರೆ. ಈ ಪುಸ್ತಕವು ಕಲಾವಿದ ಕೆ.ಟಿ. ಶಿವಪ್ರಸಾದ್ ಅವರ ಜೀವನ ಮತ್ತು ಕಲಾಕೃತಿಗಳ ಬಗ್ಗೆ ಇದೆ. ಶಿವಪ್ರಸಾದ್ ಅವರ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ಆಸ್ತಿಕ–ನಾಸ್ತಿಕ, ದೈವತ್ವ ಮುಂತಾದವುಗಳ ಬಗೆಗಿನ ಅವರ

---

೨೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೪೯

೨೨. ಡಾ. ಬಿ. ಕೆ. ಹಿರೇಮಠ : ಸೋಮಶೇಖರ ಸಾಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೯

೨೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೪೮

೨೪. ಚಿ.ಸು. ಕೃಷ್ಣಸೆಟ್ಟಿ : ಯೂಸುಫ್ ಅರಕ್ಕಲ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦

೨೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೪೯

೨೬. ಎಚ್. ಎ. ಅನಿಲ ಕುಮಾರ್ : ಕೆ. ಟಿ. ಶಿವಪ್ರಸಾದ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦

೨೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೫೦

ಅಭಿಪ್ರಾಯ, ಅವರ ಕೃತಿರಚನೆ, ಕಲಾಶೈಲಿ, ಚಿತ್ರರಚನಾ ವಸ್ತುವಿಷಯಗಳು, ಅಂತರ್ಮುಖಿ ಭಾವನೆಗಳು, ಸಮಾಜಕ್ಕಾಗಿ ಕಲೆ ಎಂಬ ಅವರ ಅನಿಸಿಕೆ ಮುಂತಾದ ವಿಷಯಗಳ ಬಗ್ಗೆ ಇಲ್ಲಿ ವಿವರಣೆ ಇದೆ[೨೭].

ಎಂ. ಬಿ. ಪಾಟೀಲ[೨೮] : ಬಿ. ಎಸ್. ವೆಂಕಟಲಕ್ಷ್ಮೀ ಅವರು ಬರೆದ ಈ ಕೃತಿಯನ್ನು ೨೦೦೦ರಲ್ಲಿ ಅಕಾಡೆಮಿಯು ಪ್ರಕಟಮಾಡಿದೆ. ಈ ಪುಸ್ತಕವು ಕಲಾವಿದ ಎಂ.ಬಿ. ಪಾಟೀಲರ ಜೀವನ ಮತ್ತು ಕಲಾಕೃತಿಗಳ ಕುರಿತಾಗಿದೆ. ದನ ಕಾಯುವ ಬಾಲಕನಿಗೆ ಚಿತ್ರಕಲೆಯ ನಂಟು ಅಂಟಿದ ಬಗ್ಗೆ, ಅಭಿನಯದ ಬಗೆಗೆ ಇರುವ ಒಲವು, ಚಿತ್ರಕಲೆಗೆ ಪಾದಾರ್ಪಣೆ, ಜೆ.ಜೆ. ಕಲಾಶಾಲೆಯಲ್ಲಿ ಪರೀಕ್ಷೆಗೆ ಕಟ್ಟುವ ಹಂತ, ಉದ್ಯೋಗಕ್ಕಾಗಿ ಹುಡುಕಾಟ, ಕಲಾ ಪ್ರದರ್ಶನ, ಕಲೆಯಲ್ಲಿನ ತಂತ್ರ, ಕಾರ್ಯ ವಿಧಾನ, ಅವರ ಸಂಘಟನೆ, ಜೀವನ ದೃಷ್ಟಿ, ಅವರ ಕಲಾಕೃತಿಗಳು ಮುಂತಾದ ವಿಷಯಗಳಿವೆ. ಜೊತೆಗೆ ಇವರ ಕಲಾ ಕೃತಿಗಳ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೨೯].

ವಿಜಯ ಸಿಂಧೂರ[೩೦] : ಕಲಾಸಾಹಿತಿ ಕೆ. ವಿ. ಸುಬ್ರಹ್ಮಣ್ಯಂ ಅವರು ಈ ಕೃತಿಯನ್ನು ೨೦೦೦ರಲ್ಲಿ ಬರೆದಿದ್ದಾರೆ. ಉತ್ತರ ಕರ್ನಾಟಕದ ಜಮಖಂಡಿಯಲ್ಲಿ ನೆಲೆಸಿರುವ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಚಿತ್ರಕಲಾವಿದ ಶ್ರೀ ವಿಜಯ ಸಿಂಧೂರರ ಕಲಾಜೀವನ ಕುರಿತಾಗಿರುವ ಪುಸ್ತಕ ಇದಾಗಿದೆ. ಬಾಲ್ಯ ಶಿಕ್ಷಣ, ನಂತರ ಜೆ.ಜೆ. ಕಲಾಶಾಲೆಯ ಶಿಕ್ಷಣ, ಅನುಭವಗಳು, ರಾಷ್ಟ್ರೀಯ ಖ್ಯಾತ ಕಲಾವಿದರಾದ ಜತಿನ್‌ದಾಸ್, ಕಾಮ್‌ಕರ್, ಪುಣಿಂಚಿತ್ತಾಯ ಮುಂತಾದವರ ಸ್ನೇಹದೊಂದಿಗಿನ ಅನುಭವ, ಇವರ ಚಿತ್ರರಚನೆಯ ಶೈಲಿ, ತಂತ್ರಗಾರಿಕೆ, ಇವುಗಳಿಗೆ ನೀಡಿದ ಇವರ ಸ್ಥಳೀಯ ಜೀವನ, ಭಾವಚಿತ್ರಗಳು, ಪ್ರಕೃತಿ ಚಿತ್ರಗಳಲ್ಲಿನ ಪ್ರಬಲ ಕೈಚಳಕ, ತೈಲವರ್ಣದಲ್ಲಿ ಇವರ ವಿಶಿಷ್ಟ ಪ್ರಯೋಗಗಳು, ಪಡೆದ ಪ್ರಶಸ್ತಿಗಳು, ವ್ಯಕ್ತಿ, ವಿವರ ಪ್ರದರ್ಶನಗಳು ಹಾಗೂ ಕಲಾಕೃತಿಗಳಲ್ಲಿನ ಭಾವ ಪ್ರತಿಕ್ರಿಯೆ, ಅಭಿವ್ಯಕ್ತಿ ಮುಂತಾದ ವಿಷಯಗಳ ಬಗ್ಗೆ ಲೇಖಕರು ಇಲ್ಲಿ ದಾಖಲಿಸಿದ್ದಾರೆ[೩೧].

ಎಂ. ರಾಮನರಸಯ್ಯ[೩೨] : ಕರಾವಳಿ ಚಿತ್ರಕಲಾವಿದರಾದ ಶ್ರೀ ರಾಮದಾಸ ಅಡ್ಯಂತಾಯ ಅವರು ಈ ಕೃತಿಯನ್ನು ಬರೆದಿದ್ದು, ೨೦೦೦ರಲ್ಲಿ ಪ್ರಸ್ತುತ ಗ್ರಂಥವು ಪ್ರಕಟಗೊಂಡಿದೆ.

---

೨೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೪೬
೨೮. ಬಿ. ಎಸ್. ವೆಂಕಟಲಕ್ಷ್ಮೀ : ಎಂ.ಬಿ. ಪಾಟೀಲ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦
೨೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೫೨
೩೦. ಕೆ. ವಿ. ಸುಬ್ರಹ್ಮಣ್ಯಂ : ವಿಜಯ ಸಿಂಧೂರ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦
೩೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೬೦
೩೨. ರಾಮದಾಸ ಅಡ್ಯಂತಾಯ : ಎಂ. ರಾಮನರಸಯ್ಯ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦

ಮೈಸೂರಿನ ಸಾಂಪ್ರದಾಯಿಕ ಚಿತ್ರಶೈಲಿಯ ಪ್ರಸಿದ್ಧ ಕಲಾವಿದರಲ್ಲಿ ಒಬ್ಬರಾದ ಎಂ. ರಾಮನರಸಯ್ಯನವರ ಜೀವನ ಮತ್ತು ಕಲಾಕೃತಿಗಳ ಕುರಿತಾಗಿ ಈ ಪುಸ್ತಕವಿದೆ. ರಾಮನರಸಯ್ಯನವರನ್ನು ಸಮೀಪದಿಂದ ಕಂಡಂತಹ ರಾಮದಾಸ ಅಡ್ಯಂತಾಯ ಅವರು ರಾಮನರಸಯ್ಯನವರ ಚಿತ್ರಶೈಲಿ, ಕಲಾಬದುಕು, ಕಲಾಕೃತಿಗಳ ವಿಮರ್ಶೆ ಜೊತೆಗೆ ಅವರ ಸೃಜನಶೀಲತೆಯ ವಿಚಾರಗಳ ಕುರಿತು ಸೂಕ್ಷ್ಮವಾಗಿ ಪರಿಚಯಿಸಿದ್ದಾರೆ. ಅಲ್ಲಲ್ಲಿ ಅವರ ಕಲಾಕೃತಿಗಳ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೩೩].

ಶಾಂತಲಿಂಗಪ್ಪ ಪಾಟೀಲ[೩೪] : ೨೦೦೦ರಲ್ಲಿ ಹನಮಂತ ಮಂತಟ್ಟಿಯವರ ಗುಲ್ಬರ್ಗಾ ಜಿಲ್ಲೆಯ ಖ್ಯಾತ ಕಲಾವಿದರಾದ ಶಾಂತಲಿಂಗಪ್ಪ ಪಾಟೀಲರ ಕಲಾಜೀವನವನ್ನು ಕುರಿತು ಸಿದ್ಧಗೊಂಡ ಕೃತಿ ಇದಾಗಿದೆ. ೧೮೮೨ರಲ್ಲಿ ಜನಿಸಿದ ಶಾಂತಲಿಂಗಪ್ಪ ಪಾಟೀಲರು ತಮ್ಮ ಕಲಾ ಶಿಕ್ಷಣವನ್ನು ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಪೂರೈಸಿದ್ದು, ಅಲ್ಲದೇ ಅವರ ಬದುಕಿನ ವಿವಿಧ ಘಟನೆಗಳಿಂದ ಕೂಡಿದ ಅವರ ವ್ಯಕ್ತಿಚಿತ್ರಣವನ್ನು ವಿವಿಧ ತಲೆಬರಹದೊಂದಿಗೆ ಹೆಣೆಯಲಾಗಿದೆ. ಉದಾಹರಣೆಗೆ, ಮನೆತನ ಮತ್ತು ಜನನ, ವ್ಯಾಸಂಗ ಮತ್ತು ಜೀವನ, ಕೃತಿಗಳು. ಇವುಗಳಲ್ಲಿ ಭಾವಚಿತ್ರ, ಶಿಲ್ಪಕಲಾಕೃತಿ, ವಸ್ತುಚಿತ್ರಣ, ಕಲಾವಿದರ ಕಲಾಪ್ರದರ್ಶನಗಳು ಮತ್ತು ಕೊನೆಯದಾಗಿ ಉಪಸಂಹಾರವನ್ನು ಒಳಗೊಂಡಿದೆ. ಇಲ್ಲಿ ಪಾಟೀಲರ ಕೆಲವು ವರ್ಣಚಿತ್ರ ಮತ್ತು ರೇಖಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೩೫].

ಎಸ್.ಜಿ. ವಾಸುದೇವ್[೩೬] : ಕೆ. ವಿ. ಸುಬ್ರಹ್ಮಣ್ಯಂರವರು ಬರೆದ ಈ ಕೃತಿಯು ೨೦೦೧ರಲ್ಲಿ ಪ್ರಕಟಗೊಂಡಿದ್ದು, ಇದು ಎಸ್.ಜಿ. ವಾಸುದೇವ್ ಅವರ ಜೀವನ ಕೃತಿಯಾಗಿದೆ. ಸಮಕಾಲೀನ ಕಲಾರಂಗಕ್ಕೆ ಅನನ್ಯ ರೂಪ ಕಲ್ಪನೆಯನ್ನು ಕೊಡುಗೆಯಾಗಿತ್ತ ಕಲಾಕೃತಿಗಳಲ್ಲಿ ಎಸ್. ಜಿ. ವಾಸುದೇವ್ ಅವರ 'ವೃಕ್ಷ' ಕೃತಿ ಸರಣಿ ಮುಖ್ಯವಾಗಿದೆ. ತಮ್ಮ ರೇಖೆ, ಬಣ್ಣ, ರೂಪಗಳಲ್ಲಿ ಪೌರ್ವಾತ್ಯ ಚಿಂತನೆಯ ಫಲದಂತೆ ಇಂದಿನ ಗ್ರಾಮೀಣ ಬದುಕಿನ ರಮ್ಯ ಒಳನೋಟಗಳನ್ನು, ಇತ್ತೀಚಿನ ಥಿಯೇಟರ್ ಆಫ್ ಲೈಫ್ ಕಲಾಕೃತಿಗಳಲ್ಲಿ ನೀಡಿರುವ ವಿವರಣೆಯಿದೆ. ಅಲಂಕರಣ ಹಾಗೂ ಕಲೆಗಳ ಉಪಯುಕ್ತತೆಯ ಬಗ್ಗೆ ಚರ್ಚೆಯಿದೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿದೆ. ೮ ಕಪ್ಪು ಬಿಳುಪು ಚಿತ್ರಗಳಿದ್ದು ವೃಕ್ಷದ ಸರಣಿ ಚಿತ್ರಗಳಿವೆ. ಕಲಾವಿದರ ಪರಿಚಯದ ಕೃತಿಯಾಗಿದೆ[೩೭].

---

೩೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೫೪

೩೪. ಹನಮಂತ ಮಂತಟ್ಟಿ : ಶಾಂತಲಿಂಗಪ್ಪ ಪಾಟೀಲ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦

೩೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೬೨

೩೬. ಕೆ. ವಿ. ಸುಬ್ರಹ್ಮಣ್ಯಂ : ಎಸ್. ಜಿ. ವಾಸುದೇವ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೧.

೩೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೭೧

ಎಂ. ಆರ್ ಬಾಳೀಕಾಯಿ[೩೮] : ಚಿತ್ರಕಲಾವಿದರಾದ ಶ್ರೀ ಸುರೇಶ ಡಿ. ಹಾಲಭಾವಿಯವರು ಧಾರವಾಡದ ಖ್ಯಾತ ಕಲಾವಿದರಾದ ಎಂ. ಆರ್. ಬಾಳೀಕಾಯಿಯವರ ಕುರಿತು ಬರೆದ ಈ ಕೃತಿಯು ವ್ಯಕ್ತಿ ಪರಿಚಯವಾಗಿದ್ದು, ೨೦೦೪ರಲ್ಲಿ ಪ್ರಸ್ತುತ ಗ್ರಂಥವು ಪ್ರಕಟಗೊಂಡಿದೆ. ಇಲ್ಲಿ ಲೇಖಕರು ಕಲಾವಿದ ಎಂ. ಆರ್. ಬಾಳೀಕಾಯಿ ಅವರ ಜನನ, ಬಾಲ್ಯಜೀವನ, ಅವರ ಕಲಾಶಿಕ್ಷಣ, ಕಲಾವಾತಾವರಣ ಮುಂತಾದವುಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದು ಅವರ ಕುಟುಂಬ, ಕಲಾಶಿಕ್ಷಕರಾಗಿ ಅವರ ಸೇವೆ, ವಿದ್ಯಾರ್ಥಿಗಳೊಂದಿಗಿನ ಅವರ ಉತ್ತಮ ಬಾಂಧವ್ಯ ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ ಅಲ್ಲದೆ ವೈವಿಧ್ಯಮಯವಾದ ಅವರ ಕಲಾಕೃತಿಗಳ ಮುಖ್ಯಧೋರಣೆಯ ಕಲಾಕೃತಿಗಳ ಹರವು ವಿವಿಧ ಮಾಧ್ಯಮಗಳಲ್ಲಿನ ಅವರ ಕಲಾಕೃತಿಗಳಲ್ಲಿನ ಅವರದೇ ಆದ ತಂತ್ರಗಾರಿಕೆ, ಪ್ರಭಾವಿಸಿದ ಕಲಾವಿದರು ವ್ಯಕ್ತಿಗಳು, ಅವರ ಕೋಲಾಜ್ ಕಲೆಯ ವೈಶಿಷ್ಟ್ಯ, ಟಿಕೇಟ್‌ಗಳು ಮತ್ತು ಆಮಂತ್ರಣ ಪತ್ರಿಕೆಗಳ ಹಿಂಬದಿಯಲ್ಲಿನ ಅವರ ರೇಖಾಚಿತ್ರಗಳ ಸೃಜನಾತ್ಮಕತೆ, ವಸ್ತುಗಳಲ್ಲಿನ ಹೊಸತನ, ಪ್ರಯೋಗಶೀಲ ಅವರ ವ್ಯಕ್ತಿತ್ವವನ್ನು ಇಲ್ಲಿ ಲೇಖಕರು ಕಟ್ಟಿಕೊಟ್ಟಿದ್ದಾರೆ[೩೯].

ಪುರುಷೋತ್ತಮ ಕಾರಂತ[೪೦] : ೨೦೦೪ರಲ್ಲಿ ಮುದ್ರಣಗೊಂಡ ಈ ಕೃತಿಯನ್ನು ಶ್ರೀ. ಬಿ. ಗಣೇಶ ಸೋಮಯಾಜಿಯವರು ಬರೆದಿದ್ದಾರೆ. ಇಲ್ಲಿ ಕಲಾವಿದ ಪುರುಷೋತ್ತಮ ಕಾರಂತ ಅವರ ಜೀವನ ಮತ್ತು ಸಾಧನೆಯನ್ನು ಕುರಿತ ವಿವರ ಮತ್ತು ಅವರು ರಚಿಸಿದ ಕೆಲವು ಕಲಾಕೃತಿಗಳ ಕಪ್ಪುಬಿಳುಪು ಮತ್ತು ವರ್ಣರಂಜಿತ ಚಿತ್ರಗಳನ್ನು ಒಳಗೊಂಡ ಕೃತಿ ಇದಾಗಿದೆ[೪೧].

ಕಲಾವಿದ ಎಚ್. ಎಸ್. ಇನಾಮತಿ[೪೨] : ಹಿರಿಯ ಖ್ಯಾತ ಚಿತ್ರಕಲಾ ಸಾಹಿತಿ ಮತ್ತು ಕಲಾವಿದರಾದ ಮೈಸೂರಿನ ಎಲ್. ಶಿವಲಿಂಗಪ್ಪನವರು ಈ ಕೃತಿಯನ್ನು ಬರೆದಿದ್ದು, ೨೦೦೪ರಲ್ಲಿ ಈ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದ್ದು, ಕರ್ನಾಟಕದ ಮತ್ತೊಬ್ಬ ಹಿರಿಯ ಕಲಾವಿದರಾದ ಎಚ್. ಎಸ್. ಇನಾಮತಿಯವರ ಕಲಾಜೀವನವನ್ನು ಪರಿಚಯಿಸುವ ಕೃತಿ. ಇನಾಮತಿಯವರ ಜಲವರ್ಣ ಕಲಾಕೃತಿಗಳ ವಿವರ ಮತ್ತು ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ ಎಂಬ ಸಂಸ್ಥೆ ಕಟ್ಟಿ ಬೆಂಗಳೂರಿನ ಕಲಾವಿದರ ಸಂಘಟನೆ ಮಾಡಿ ಮುನ್ನೆಡೆಸಿದ ಕಲಾಕೃತಿಗಳ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೪೩].

---

೩೮. ಸುರೇಶ ಡಿ. ಹಾಲಭಾವಿ : ಎಂ. ಆರ್. ಬಾಳೀಕಾಯಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೩೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೬೩

೪೦. ಬಿ. ಗಣೇಶ ಸೋಮಯಾಜಿ : ಪುರುಷೋತ್ತಮ ಕಾರಂತ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೪೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೨೦೧

೪೨. ಎಲ್. ಶಿವಲಿಂಗಪ್ಪ : ಕಲಾವಿದ ಎಚ್. ಎಸ್. ಇನಾಮತಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೪೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೯೦

ಕಲಾವಿದ ಎಸ್. ಕಾಳಪ್ಪ[೪೪] : ಎಲ್ ಶಿವಲಿಂಗಪ್ಪನವರ ಮತ್ತೊಂದು ಕೃತಿ ಇದಾಗಿದ್ದು, ಪ್ರಸ್ತುತ ಕೃತಿಯೂ ೨೦೦೪ರಲ್ಲಿ ಪ್ರಕಟಗೊಂಡಿದೆ. ಹಿರಿಯ ಕಲಾವಿದರಾದ ಎಸ್. ಕಾಳಪ್ಪರ ಕಲಾಜೀವನವನ್ನು ಪರಿಚಯಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಕಾಳಪ್ಪನವರು ಕಲಾವಿದರಾಗಿ, ಕಲಾಶಿಕ್ಷಕರಾಗಿ ಮತ್ತು ಮೈಸೂರಿನಲ್ಲಿ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಸ್ಥೆ ಕಟ್ಟಿ ಬೆಳೆಸಿದರು. ಕಲಾಕೃತಿಗಳ ಛಾಯಾಚಿತ್ರಗಳನ್ನೂ ಈ ಕೃತಿಯಲ್ಲಿ ಬಳಸಿಕೊಳ್ಳಲಾಗಿದೆ[೪೫].

ವಿ. ಜಿ. ಅಂದಾನಿ : ಡಾ. ಶಿವಾನಂದ ಎಚ್. ಬಂಟನೂರು ಅವರು ಬರೆದ ಈ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ೨೦೦೪ರಲ್ಲಿ ಪ್ರಕಟಿಸಿದೆ. ಕಲಾವಿದ ವಿ.ಜಿ. ಅಂದಾನಿಯವರ ಕಲಾಜೀವನವನ್ನು ಪರಿಚಯಿಸುವ ಕೃತಿ ಇದಾಗಿದ್ದು, ಇಲ್ಲಿ ಚಿತ್ರಕಲಾವಿದ ವಿ. ಜಿ. ಅಂದಾನಿಯವರ ಕಲಾವ್ಯಾಸಂಗ, ಕಲಾಸೃಷ್ಟಿ, ವರ್ಣಚಿತ್ರಗಳು, ರೇಖಾಚಿತ್ರಗಳನ್ನು ಕುರಿತು ಬರೆಯಲಾಗಿದೆ. ರೇಖಾಚಿತ್ರಗಳು ಮತ್ತು ವರ್ಣಚಿತ್ರಗಳನ್ನು ಈ ಕೃತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ. ಒಟ್ಟಾರೆ ಅವರ ಸಂಕ್ಷಿಪ್ತ ಪರಿಚಯವನ್ನು ಈ ಕೃತಿಯಲ್ಲಿ ನೀಡಿದ್ದಾರೆ.

ಕೆ. ಕೇಶವಯ್ಯ[೪೬] : ೨೦೦೪ರಲ್ಲಿ ಪ್ರಕಟಗೊಂಡ ಈ ಕೃತಿಯನ್ನು ಎಸ್. ವೆಂಕಟೇಶ ಅವರು ರಚಿಸಿದ್ದಾರೆ. ಕೇಶವಯ್ಯನವರು ಹಿರಿಯರು, ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ನೆಲೆಸಿದ್ದರು. ಅವರದು ಚಿತ್ರಗಾರರ ಮನೆತನ. ಮದ್ರಾಸ್ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾಶಿಕ್ಷಣ ಪಡೆದು, ಮೈಸೂರು ಅರಮನೆಯಲ್ಲಿ ಕಲಾವಿದರಾಗಿ ಕಲಾಕೃತಿಗಳನ್ನು ರಚಿಸಿದರು. ದಸರಾ ಮೆರವಣಿಗೆಯ ಕಲಾಕೃತಿಗಳ ಪ್ಯಾನೆಲ್‌ಗಳನ್ನು ರಚಿಸಿದ ಕಲಾವಿದರಲ್ಲಿ ಕೆ.ಕೇಶವಯ್ಯನವರು ಒಬ್ಬರು. ಕೇಶವಯ್ಯನವರು ೧೯೦೨ರಲ್ಲಿ ಅರಮನೆಯ ಕಲಾವಿದರಾಗಿ ನೇಮಕಗೊಂಡಂದಿನಿಂದ ೧೯೫೪ರಲ್ಲಿ ಕೊನೆಯುಸಿರೆಳೆಯುವವರೆಗೂ ನೂರಾರು ಕಲಾಕೃತಿಗಳನ್ನು, ಮುಖ್ಯವಾಗಿ ಭಾವಚಿತ್ರಗಳನ್ನು ರಚಿಸಿದ್ದಾರೆ. ಜಲವರ್ಣ ಕೃತಿಗಳು, ಬಣ್ಣದ ಛಾಯಾಚಿತ್ರಗಳು, ಶಿಷ್ಯವೃಂದ ಮತ್ತು ವೈಯಕ್ತಿಕ ಜೀವನದ ಕುರಿತು ವಿವರಿಸಿದ್ದಾರೆ. ಕಪ್ಪು ಬಿಳುಪಿನ ಮತ್ತು ವರ್ಣಕಲಾಕೃತಿಗಳನ್ನು ಈ ಕೃತಿಗಳಲ್ಲಿ ಬಳಸಿಕೊಳ್ಳಲಾಗಿದೆ[೪೭].

ವಿ.ಟಿ. ಕಾಳೆ[೪೮] : ೨೦೦೪ರಲ್ಲಿ ಈ ಕೃತಿಯನ್ನು ಡಾ. ಎಸ್. ಸಿ. ಪಾಟೀಲರು

---

೪೪. ಎಲ್. ಶಿವಲಿಂಗಪ್ಪ : ಎಸ್. ಕಾಳಪ್ಪ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೪೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೯೨

೪೬. ಎಸ್. ವೆಂಕಟೇಶ : ಕೆ. ಕೇಶವಯ್ಯ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೪೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೯೬

೪೮. ಡಾ. ಎಸ್. ಸಿ. ಪಾಟೀಲ : ವಿ. ಟಿ. ಕಾಳೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

ಬರೆದಿದ್ದಾರೆ. ನಾಡಿನ ಹಿರಿಯ ತಲೆಮಾರಿನ ಕಲಾವಿದರಲ್ಲಿ ಒಬ್ಬರಾದ ಸಂಡೂರಿನ ಚಿತ್ರಕಲಾವಿದ ವಿ.ಟಿ. ಕಾಳೆಯವರ ಜೀವನ ಮತ್ತು ಕಲಾಕೃತಿಗಳ ಕುರಿತು, ಅಲ್ಲದೇ ಕಾಳೆಯವರು ಚಿತ್ರಕಲಾವಿದ ಮಾತ್ರವಲ್ಲದೆ ಕಲಾಬರಹಗಾರರು, ಶಿಲ್ಪಕಲಾವಿದರು, ನಾಟಕಗಾರರು ಕಲಾಶಿಕ್ಷಕ, ಪ್ರಸಾಧನ ಕಲಾವಿದರು. ಹೀಗೆ ಅವರ ಬಹುಮುಖ ವ್ಯಕ್ತಿತ್ವದ ಬಗ್ಗೆ ಸ್ಥೂಲವಾದ ಸಂಕ್ಷಿಪ್ತವಾದ ಮಾಹಿತಿಯಿದ್ದರೂ ಅವರ ಇಲ್ಲಿಯವರೆಗಿನ ಕಲಾಸಾಧನೆಯ ಬಗ್ಗೆ ಮಾಹಿತಿಯಿದೆ. ಅಲ್ಲದೇ ಅವರ ವೈವಿಧ್ಯಮಯವಾದ ಕಲಾಕೃತಿಗಳು ವಿವಿಧ ಮಾದ್ಯಮಗಳಲ್ಲಿದ್ದು, ಅವುಗಳ ವಿವರಣೆ ಈ ಪುಸ್ತಕದಲ್ಲಿ ಕಂಡುಬರುತ್ತದೆ. ರೇಖಾಚಿತ್ರ ಕಪ್ಪು, ಬಿಳುಪು ಹಾಗೂ ವರ್ಣಚಿತ್ರಗಳನ್ನು ಅಳವಡಿಸಲಾಗಿದೆ[೪೯].

ಆರ್. ಎಂ. ಹಡಪದ್[೫೦] : ಎಂ. ಎಚ್. ಕೃಷ್ಣಯ್ಯ ಅವರು ಬರೆದ ಈ ಕೃತಿಯನ್ನು ೧೯೯೭ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದ್ದು, ಇಲ್ಲಿ ಕರ್ನಾಟಕದ ಐತಿಹಾಸಿಕ ಪರಂಪರೆಯ ಬಾದಾಮಿಯಲ್ಲಿ ಜನಿಸಿದ ಆರ್.ಎಂ. ಹಡಪದ ಅವರು ಕಲಾ ಶಿಕ್ಷಣವನ್ನು ಟಿ.ಪಿ. ಅಕ್ಕಿಯವರ ಮಾರ್ಗದರ್ಶನದಲ್ಲಿ ಗದಗದ ವಿಜಯಕಲಾ ಮಂದಿರದಲ್ಲಿ ಮಾಡುತ್ತಾರೆ. ಮುಂಬಯಿಯ ಜೆ.ಜೆ. ಕಲಾ ಶಾಲೆಯ ಡಿಪ್ಲೋಮಾ ಮುಗಿಸಿ ಮುಂದೆ ಕಲಾಶಿಕ್ಷಕರಾಗಿ ಜೀವನವನ್ನು ಪ್ರಾರಂಭಿಸಿದ್ದುದರ ಕುರಿತು ಇಲ್ಲಿ ಚರ್ಚಿಸಿದ್ದಾರೆ. ನಂತರ ಬೆಂಗಳೂರಿಗೆ ೧೯೬೧ರಲ್ಲಿ ಬಂದು ೧೯೬೮ರಲ್ಲಿ ಶಿಷ್ಯರ ಸಹಾಯದಿಂದ ಕೆನ್ ಸ್ಕೂಲ್ ಆಫ್ ಆರ್ಟ್ಸ್ ಕಲಾ ಶಾಲೆಯನ್ನು ಸ್ಥಾಪಿಸುತ್ತಾರೆ. ಅಲ್ಲಿ ಅವರು ಅನುಭವಿಸಿದ ನೋವು-ನಲಿವು, ಸಾಧಕ-ಬಾಧಕಗಳು ಮತ್ತು ಕಲಾಕೃತಿ ರಚನೆಗಳ ಕುರಿತು, ಮೂರ್ತದಿಂದ ಆಮೂರ್ತ ಶೈಲಿಗೆ ತಿರುಗಿದ ಇವರ ಕಲಾಶೈಲಿಗಳ ಕುರಿತು, ೧೯೬೪ರಲ್ಲಿ ವಿ-ಫೋರ್ ಎಂಬ ಕಲಾವಿದರ ಗುಂಪನ್ನು ಟಿ. ಕೆ. ಪಟೇಲ್, ಎಸ್. ಎಸ್. ಮುನೋಳಿ, ಜಿ. ವೈ. ಹುಬ್ಳೀಕರ್ ಜೊತೆ ಸೇರಿ ರಚಿಸಿಕೊಂಡು ಮಾಡಿದ ಹೋರಾಟ ಕಾರ್ಯಕ್ರಮಗಳು ಕರ್ನಾಟಕದ ಕಲಾ ಇತಿಹಾಸದಲ್ಲಿ ಮೈಲಿಗಲ್ಲಾಗಿರುವುದನ್ನು ಲೇಖಕರು ಗುರುತಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಸಲ್ಲಿಸಿರುವ ಸೇವೆಯಲ್ಲಿನ ಮಹತ್ಕಾರ್ಯಗಳನ್ನು, ಕಲಾ ಉಪನ್ಯಾಸಗಳ ವಿಚಾರಧಾರೆಯನ್ನು, ಕಲಾಕೃತಿಗಳ ವಿಭಿನ್ನ ಶೈಲಿಗಳನ್ನು ಲೇಖಕರು ಪ್ರಸ್ತುತಪಡಿಸಿದ್ದು, ಅನೇಕ ಕಲಾಕೃತಿಗಳ ಛಾಯಾಚಿತ್ರಗಳನ್ನು ಅಳವಡಿಸಿರುವ ಈ ಪುಸ್ತಕ ಹಡಪದರವರ ಕಿರುಪರಿಚಯವನ್ನು ವಿಸ್ತೃತವಾಗಿ ನೀಡಿದೆ[೫೧].

---

೪೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೮೪

೫೦. ಎಂ. ಎಚ್. ಕೃಷ್ಣಯ್ಯ : ಆರ್. ಎಂ. ಹಡಪದ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭

೫೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೮೬

ಎಸ್. ಎಂ. ಪಂಡಿತ್[೫೨] : ಕಲ್ಬುರ್ಗಿ ಜಿಲ್ಲೆ ಕಂಡ ಅತ್ಯಂತ ಖ್ಯಾತಿವೆತ್ತ ಕಲಾವಿದ ಡಾ. ಎಸ್. ಎಂ. ಪಂಡಿತರು ನೈಜ ಸಂಯೋಜನಾ ಚಿತ್ರಗಳನ್ನು ರಚಿಸುವುದರಲ್ಲಿ ರಾಜಾ ರವಿವರ್ಮನ ನಂತರದವರೆಂದೇ ಪ್ರಸಿದ್ಧಿಯನ್ನು ಪಡೆದವರು. ಇವರು ಚಿತ್ರಿಸಿದ ಭಾವಚಿತ್ರ ಅಥವಾ ವ್ಯಕ್ತಿಚಿತ್ರಗಳನ್ನು ಕಂಡ ವಿದೇಶೀಯರು "ಎಸ್. ಎಂ. ಪಂಡಿತ್ ಭಾರತದ ರೆಂಬ್ರಾಂಟ್" ಎಂದೇ ಗುರುತಿಸುತ್ತಾರೆ. ರೇಖಾಚಿತ್ರ, ಭಾವಚಿತ್ರ, ವ್ಯಕ್ತಿಚಿತ್ರ, ನೈಜ ಸಂಯೋಜನಾ ಚಿತ್ರ, ನಿಸರ್ಗಚಿತ್ರಗಳನ್ನು ಚಿತ್ರಿಸುವಲ್ಲಿ ಇವರು ಸಿದ್ಧಹಸ್ತರು. ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಪೋಸ್ಟರ್‌ಗಳನ್ನು ರಚಿಸುವುದನ್ನು ಹುಟ್ಟು ಹಾಕಿದ ಇವರು ನೈಜ ಸಂಯೋಜನಾ ಚಿತ್ರಗಳನ್ನು ರಚಿಸುವಾಗ ಶೃಂಗಾರ, ಪೌರಾಣಿಕ ಸನ್ನಿವೇಶಗಳಿಗೆ ಹೆಚ್ಚು ಒತ್ತು ಕೊಟ್ಟು ಚಿತ್ರಗಳನ್ನು ಚಿತ್ರಿಸಿದ್ದು ಕಂಡುಬರುತ್ತದೆ. ಹೀಗೆ ಪಂಡಿತರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ಈ ಕಿರುಹೊತ್ತಿಗೆಯಲ್ಲಿ ವಿವರಿಸಲಾಗಿದೆ. ಅಲ್ಲದೆ ಅವರ ಕಲಾಕೃತಿಗಳ ಛಾಯಾಚಿತ್ರಗಳನ್ನೂ ಸಹ ಇಲ್ಲಿ ಬಳಸಲಾಗಿದೆ.[೫೩] ಈ ಕೃತಿಯನ್ನು ನಾಡಿನ ಹಿರಿಯ ಕಲಾವಿದರಾದ ಶ್ರೀ ವಿ. ಟಿ. ಕಾಳೆಯವರು. ೧೯೮೯ರಲ್ಲಿ ಈ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ.

ಶಂಕರಗೌಡ ಬೆಟ್ಟದೂರ್[೫೪] : ಎಚ್. ಎ. ಅನಿಲ್ ಕುಮಾರ್ ಅವರು ಈ ಕೃತಿಯನ್ನು ಬರೆದಿದ್ದಾರೆ. ೨೦೦೭ರಲ್ಲಿ ಈ ಕೃತಿಯು ಮುದ್ರಣಗೊಂಡಿದೆ. ಈ ಕೃತಿಯಲ್ಲಿ ಕರ್ನಾಟಕದ ಹೆಸರಾಂತ ಕಲಾವಿದರಾದ ಶಂಕರಗೌಡ ಬೆಟ್ಟದೂರ ಅವರ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸಲಾಗಿದೆ. ೧೯೫೦ರ ದಶಕದಲ್ಲಿ ಶಾಂತಿನಿಕೇತನದ ಕಲಾಭವನದಲ್ಲಿ ಚಿತ್ರಕಲೆಯನ್ನು ಕಲಿಯುವಾಗ ನಂದಲಾಲ್ ಬೋಸ್, ರಾಮಕಿಂಕರ್ ಬೈಜ್, ವಿನೋದ ಬಿಹಾರಿ ಮುಖರ್ಜಿ ಮುಂತಾದವರು ಇವರ ಗುರುಗಳಾಗಿದ್ದರು ಎಂದು ಹೇಳುತ್ತ, ಅವರ ವಿದ್ಯಾಭ್ಯಾಸ, ಮರಳಿ ನಾಡಿಗೆ ಬಂದಿದ್ದು ಮತ್ತು ಅವರ ಕಲಾಸಾಧನೆ, ಕಲಾಕೃತಿ ಕುರಿತು ಬರೆದಿದ್ದಾರೆ. ಈ ಕೃತಿಯಲ್ಲಿ ಕೆಲವು ವರ್ಣಚಿತ್ರಗಳು ಮತ್ತು ಕಪ್ಪು ಬಿಳುಪಿನ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೫೫].

ಮ. ಈ. ಗುರು[೫೬] : ಲೇಖಕರಾದ ಎಲ್. ಶಿವಲಿಂಗಪ್ಪನವರು ಕಲಾವಿದ ಮಠದ ಈಶ್ವರಯ್ಯ ಗುರು ಪಾದಯ್ಯನವರ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸಿಕೊಟ್ಟಿದ್ದಾರೆ.

---

೫೨. ವಿ. ಟಿ. ಕಾಳೆ : ಎಸ್. ಎಂ. ಪಂಡಿತ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೯
೫೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೨೦೫
೫೪. ಎಚ್. ಎ. ಅನಿಲ್ ಕುಮಾರ್ : ಶಂಕರಗೌಡ ಬೆಟ್ಟದೂರ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭
೫೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೧೫
೫೬. ಎಲ್. ಶಿವಲಿಂಗಪ್ಪ : ಮ. ಈ. ಗುರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭

೨೦೦೭ರಲ್ಲಿ ಈ ಕೃತಿಯು ಬಿಡುಗಡೆಗೊಂಡಿದೆ. ಎಲೆಮರೆ ಕಾಯಿಯಂತಿರುವ ಮ.ಈ. ಗುರು ಅವರ ಬಾಲ್ಯಪರಿಸರದಲ್ಲಿ ಕಲೆ ಬೆಳೆದುಬಂದ ಬಗೆ, ಇವರ ವಿದ್ಯಾಭ್ಯಾಸ, ಕಲಾ ಶಿಕ್ಷಣ ಪಡೆಯುತ್ತಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಚಿತ್ರಕಲಾವಿದರಾಗಿ ಬೆಳೆದು ಅನೇಕ ರೇಖಾಚಿತ್ರಗಳು ಮತ್ತು ಸಂಯೋಜನಾ ವರ್ಣಚಿತ್ರಗಳು, ಭಿತ್ತಿಚಿತ್ರ, ಭಿತ್ತಿಪತ್ರ, ಶ್ರೀ ಶರಣ ಚರಿತಾಮೃತ ಹಾಗೂ ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ಧಾರ್ಮಿಕ ವಿಷಯಗಳ ಕಥೆಯನ್ನಾಧರಿಸಿದ ಸಾಂದರ್ಭಿಕ ಚಿತ್ರಗಳನ್ನು ರಚಿಸಿದ ಕುರಿತು ಅಲ್ಲದೇ ಕಲಾವಿದರೂ ಹಾಗೂ ಕವಿಗಳೂ ಆಗಿದ್ದ ಮ.ಈ.ಗುರು ಅವರ ಕಲಾಬದುಕಿನ ವಿವಿಧ ಹಂತಗಳ ಬಗ್ಗೆ ಈ ಪುಸ್ತಕದಲ್ಲಿ ಎಲ್. ಶಿವಲಿಂಗಪ್ಪನವರು ವಿವರಣೆ ನೀಡಿದ್ದಾರೆ[೫೭].

ವೈ. ಸುಬ್ರಹ್ಮಣ್ಯ ರಾಜು[೫೮] : ೧೯೮೭ರಲ್ಲಿ ಪ್ರಕಟಗೊಂಡ ಎಂ. ಎಸ್. ಚಂದ್ರಶೇಖರ ಅವರ ಈ ಕೃತಿಯು ವ್ಯಕ್ತಿ ಅಧ್ಯಯನದ ಕುರಿತಾಗಿದೆ. ಇಲ್ಲಿ ಸುಬ್ರಹ್ಮಣ್ಯ ರಾಜು ಅವರ ಜೀವನಚಿತ್ರಕ್ಕೆ ಸಂಬಂಧಪಟ್ಟಂತೆ ಹೇಳುವಾಗ ಕೆಲವು ಘಟನೆಗಳ ಸಂದರ್ಭದಲ್ಲಿ ಅವುಗಳಿಗೆ ವಿಶೇಷ ತಲೆಬರಹವನ್ನು ಕೊಟ್ಟು ಕೃತಿಯನ್ನು ಎಂ.ಎಸ್. ಚಂದ್ರಶೇಖರ್ ಅವರು ರಚಿಸಿದ್ದಾರೆ. ಕಾರ್ಯತತ್ಪರತೆ, ದೀಪದ ಹೊದಿಕೆ, ನುರಿತ ಗುರುಗಳು, ಡಿಪ್ಲೊಮಾಗಳಿಕೆ, ಖ್ಯಾತ ಪ್ಯಾನೆಲ್‌ಗಳು, ಶಿಷ್ಯವೃಂದ, ಎಲ್ಲೆಡೆ ಮಾನ್ಯತೆ ಹೀಗೆ ಮುಂತಾದ ತಲೆಬರಹಗಳಿವೆ. ಈ ಕೃತಿಯಲ್ಲಿ ಸುಬ್ರಹ್ಮಣ್ಯರಾಜು ಅವರು ಚಿತ್ರಿಸಿದ ಚಿತ್ರಗಳನ್ನು ಹಾಕಲಾಗಿದೆ. ಇವುಗಳಲ್ಲಿ ಭಾವಚಿತ್ರಗಳು, ಸಂಯೋಜನಾ ಚಿತ್ರಗಳು ಮತ್ತು ರೇಖಾಚಿತ್ರಗಳೂ ಸೇರಿವೆ. ಅದರಲ್ಲೂ ಮೈಸೂರು ದಸರಾ ಮೆರವಣಿಗೆಯ ದೃಶ್ಯಗಳಿಗೆ ಸಂಬಂಧಪಟ್ಟ ಕಲಾಕೃತಿಗಳು ಕೆಲವು ವಿಶಿಷ್ಟ ಕಲಾಕೃತಿಗಳಾಗಿವೆ. ಇಲ್ಲಿ ವೈ. ಸುಬ್ರಹ್ಮಣ್ಯರಾಜು ಅವರ ಜೀವನ, ಕಲಾಕೃತಿಗಳ ಸಂಕ್ಷಿಪ್ತ ಪರಿಚಯವಿದೆ[೫೯].

ಕೆ. ಕೆ. ಹೆಬ್ಬಾರ್[೬೦] : ನಾಡಿನ ಹಿರಿಯ ಕಲಾಸಾಹಿತಿಯಾದ ಎನ್. ಮರಿಶಾಮಾಚಾರ್ ಅವರು ಈ ಕೃತಿಯನ್ನು ಬರೆದಿದ್ದಾರೆ. ೧೯೮೭ರಲ್ಲಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಕರ್ನಾಟಕದಿಂದ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿದ ಮತ್ತು ಕಲಾಜೀವನದಲ್ಲಿ ಸ್ವಂತಿಕೆಯ ಪ್ರಯೋಗಗಳನ್ನು ನೀಡಿದ ಕಲಾವಿದ ಶ್ರೀ ಕೆ.ಕೆ. ಹೆಬ್ಬಾರರ ಕಲಾಜೀವನದ ಬಗೆಗೆ ಈ ಪುಸ್ತಕ ಕಿರುಪರಿಚಯವನ್ನು ನೀಡುತ್ತದೆ. ಇದರಲ್ಲಿ ಕೆ.ಕೆ.

---

೫೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೦೬
೫೮. ಎಂ. ಎಸ್. ಚಂದ್ರಶೇಖರ್ : ವೈ. ಸುಬ್ರಹ್ಮಣ್ಯರಾಜು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೭
೫೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೦೮
೬೦. ಎನ್. ಮರಿಶಾಮಾಚಾರ್ : ಕೆ. ಕೆ. ಹೆಬ್ಬಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೭

ಹೆಬ್ಬಾರರ ಬಾಲ್ಯ, ಶಿಕ್ಷಣ, ಬಡತನ, ಮುಂಬಯಿಯ ಫೋಟೋಗ್ರಾಫರನ ಬಳಿ ಕೆಲಸಕ್ಕಿದ್ದ ಬಗ್ಗೆ, ಜೆ.ಜೆ. ಕಲಾಶಾಲೆ ಸೇರಿ ಸ್ವತಂತ್ರ ದಾರಿಯಲ್ಲಿ ಮುಂದುವರೆದದ್ದು, ಯುರೋಪ್ ಪ್ರವಾಸ, ಪರಿಸರದ ಪ್ರಭಾವಕ್ಕೆ ಒಳಗಾಗಿ ಕೃತಿಗಳನ್ನು ರಚಿಸಿದ್ದು, ವೈಜ್ಞಾನಿಕ ಅನ್ವೇಷಣೆಯ ಕೃತಿಗಳು, ಸಂಗೀತದ ಬಗೆಗೆ ಕೃತಿಗಳು, ಮಾನವನ ಕುರಿತ ಚಿತ್ರಗಳು, ರೇಖಾಚಿತ್ರಗಳು, ಸುಖಮಯ ಸಂಸಾರಕ್ಕೆ ಮರಳಿದ್ದು, ಸಮಕಾಲೀನ ಕಲೆಗೆ, ಭಾರತೀಯ ಕಲೆಗೆ ಇವರ ಕೊಡುಗೆ, ಅಕಾಡೆಮಿ ಅಧ್ಯಕ್ಷರಾಗಿ ಸಲ್ಲಿಸಿದ ಮಹತ್ಕಾರ್ಯಗಳು, ಪ್ರಶಸ್ತಿಗಳು, ವ್ಯಕ್ತಿವಿವರ ಮುಂತಾದವುಗಳ ಬಗ್ಗೆ, ಕೆಲವು ಛಾಯಾಚಿತ್ರಗಳನ್ನು ಇಲ್ಲಿ ಅಳವಡಿಸಿ ಕಲಾವಿದರ ಜೀವನದ ಸಾಧನೆಯ ಬಗ್ಗೆ ಪರಿಚಯವನ್ನು ಸ್ಥೂಲವಾಗಿ ಲೇಖಕರು ಮಾಡಿದ್ದಾರೆ[೬೧].

ಕೆ. ವೆಂಕಟಪ್ಪ[೬೨] : ಇವರನ್ನು ಕಲಾ ತಪಸ್ವಿ ಕಲಾಯೋಗಿ ಎಂದೆಲ್ಲಾ ಕರೆಯುತ್ತಿದ್ದರು. ಆದರೆ ನಾನು ಕಲಾ ತಪಸ್ವಿಯಲ್ಲ, ಯಾವಾಗಲೂ ನಾನೊಬ್ಬ ಕಲಾವಿದ್ಯಾರ್ಥಿ ಎಂದು ಹೇಳುತ್ತಿದ್ದ ವಿಷಯ ಮತ್ತು ಸಂಗೀತ ಪ್ರಿಯತೆ ಕಲಾಶಿಕ್ಷಣವನ್ನು ಮದ್ರಾಸ್ ಹಾಗೂ ಕಲ್ಕತ್ತದಲ್ಲಿ ಅವನೀಂದ್ರನಾಥ ಟ್ಯಾಗೋರ ಅವರ ಹತ್ತಿರ ಮುಗಿಸಿ ಬಂದ ವಿವರಣೆಯಿದೆ. ಮೈಸೂರು ಮಹಾರಾಜರಿಗೆ ಬಹಳ ಪ್ರೀತಿಯ ಕಲಾವಿದರಾಗಿದ್ದರು. ಇವರ ಆಶ್ರಯದಿಂದಲೇ ಕಲ್ಕತ್ತಾಕ್ಕೆ ಹೋಗಿ ಕಲಿಯುವ ಅವಕಾಶ ಸಿಕ್ಕಿತು. ಇವರು ಶಿಲ್ಪ ಚಿತ್ರಕಲೆ, ಪ್ಲಾಸ್ಟರ್ ಆಫ್ ಪ್ಯಾರೀಸ್ ಈ ಕಲೆಗಳಲ್ಲಿ ಸಿದ್ಧಹಸ್ತರಾಗಿದ್ದರು. ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ವೆಂಕಟಪ್ಪ ಚಿತ್ರಶಾಲೆ ಎಂದು ಪ್ರದರ್ಶನಾಲಯವಿದ್ದು ಮತ್ತು ಇವರಿಗೆ ಗೌರವಸೂಚಕವಾಗಿ ಕರ್ನಾಟಕ ಸರಕಾರದವರು ಪ್ರತಿವರ್ಷ ಒಬ್ಬ ಉತ್ತಮ ಚಿತ್ರಕಲಾವಿದನಿಗೆ ೩ ಲಕ್ಷ ರೂ.ಗಳ ಬಹುಮಾನ ಕೊಟ್ಟು, ಆಯ್ಕೆಯಾದ ಕಲಾವಿದನನ್ನು ಗೌರವಿಸುವ ವ್ಯವಸ್ಥೆ ಇದೆ. ಇಂತಹ ಅದ್ಭುತವಾದ ಕೃತಿಯನ್ನು ನಾಡಿನ ಜನರಿಗೆ ಕೊಡುಗೆಯಾಗಿ ನೀಡಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಉತ್ತಮ ಕೃತಿಯು ಇದಾಗಿದ್ದು, ೧೯೯೭ರಲ್ಲಿ ಈ ಕೃತಿಯನ್ನು ಕರ್ನಾಟಕದ ಜನಪದ ಸಂಗ್ರಹಾಲಯವೆಂದೇ ಖ್ಯಾತಿಪಡೆದ ಕಲಾವಿದ, ಕಲಾಸಾಹಿತಿಯಾದ ಶ್ರೀ. ಪಿ. ಆರ್. ತಿಪ್ಪೇಸ್ವಾಮಿಯವರು[೬೩].

ಡಾ. ಬಿ. ಕೆ. ಹಿರೇಮಠ[೬೪] : ೨೦೦೮ರಲ್ಲಿ ಈ ಕೃತಿಯು ಮುದ್ರಣಗೊಂಡಿದ್ದು, ಡಾ. ಸಿದ್ದಲಿಂಗಸ್ವಾಮಿ ಹಿರೇಮಠ ಅವರು ಈ ಕೃತಿಯನ್ನು ಬರೆದಿದ್ದಾರೆ. ಇಲ್ಲಿ ಹಿರಿಯ

---

೬೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೮೫
೬೨. ಪಿ. ಆರ್. ತಿಪ್ಪೇಸ್ವಾಮಿ : ಕೆ. ವೆಂಕಟಪ್ಪ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭
೬೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೮೮
೬೪. ಡಾ. ಸಿದ್ದಲಿಂಗಸ್ವಾಮಿ ಹಿರೇಮಠ : ಡಾ. ಬಿ. ಕೆ. ಹಿರೇಮಠ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮

ಕಲಾವಿದರಾಗಿ, ಕಲಾಬರಹಗಾರರಾಗಿ ಗುರುತಿಸಲ್ಪಡುವ ಡಾ. ಬಿ.ಕೆ. ಹಿರೇಮಠ ಅವರ ಕಲಾಜೀವನ ಪರಿಚಯಿಸುವ ಕೃತಿ. ಹಿರೇಮಠರು ರೇಖಾಚಿತ್ರ, ಭಾವಚಿತ್ರ, ನಿಸರ್ಗಚಿತ್ರಣ ಮತ್ತು ಸಂಯೋಜನೆಗಳನ್ನು ರಚಿಸಿದ್ದಾರೆ. ಕಲಾವಿದನ ಮನಸ್ಸು, ದೇವರು ಮತ್ತು ಧರ್ಮಗಳು, ಸತ್ಯಕ್ಕೆ ಜಯ, ಸತ್ಯದ ಸಹನೆ, ಕಲ್ಕಿ ಮತ್ತು ವಿಶ್ವರೂಪದರ್ಶನ ಮುಂತಾದ ಚಿತ್ರಗಳ ಕುರಿತು ವಿವರಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೯೫ರಲ್ಲಿ ಗೌರವ ಪ್ರಶಸ್ತಿ ನೀಡಿ ಗೌರವಿಸಿದ ವಿವರಗಳಿವೆ[೧೫].

ಸುಭಾಷಿಣಿ ದೇವಿ[೧೬] : ಎಲ್. ಶಿವಲಿಂಗಪ್ಪನವರು ಈ ಕೃತಿಯನ್ನು ಬರೆದಿದ್ದಾರೆ. ೨೦೦೭ರಲ್ಲಿ ಪ್ರಸ್ತುತ ಗ್ರಂಥವು ಪ್ರಕಟಗೊಂಡಿದ್ದು, ಮೈಸೂರಲ್ಲಿ ೨೦.೦೫.೧೯೨೦ರಲ್ಲಿ ಜನಸಿದ ಸುಭಾಷಿಣಿ ದೇವಿಯವರು ಕರ್ನಾಟಕದ ಮಹಿಳಾ ಕಲಾವಿದರಲ್ಲಿ ಪ್ರಮುಖರು. ಇವರ ಜೀವನ ಮತ್ತು ಕಲಾಕೃತಿಗಳ ಕುರಿತು ಎಲ್. ಶಿವಲಿಂಗಪ್ಪನವರು ವಿವರವಾಗಿ ಬರೆದಿದ್ದಾರೆ. ಪ್ರೇರಣೆ ಮತ್ತು ಪರಿಸರ, ಪ್ರದರ್ಶನ, ಬಹುಮಾನ, ಕಲಾಕೃತಿಗಳ ಕುರಿತು ಮತ್ತು ಆದರ್ಶ ಅಂತ್ಯ ಎಂಬ ಶೀರ್ಷಿಕೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಪ್ರಮುಖ ಕಲಾಕೃತಿಗಳಾದ ತಾಯಿ ಮಗು, ಸಿದ್ಧಾರ್ಥನ ಪಯಣದ ಹಾದಿ, ಸರಸ್ವತಿ ಮತ್ತು ಭೂದೃಶ್ಯಗಳ ಬಗ್ಗೆ ವಿವರಿಸಿದ್ದಾರೆ. ಕಪ್ಪು ಬಿಳುಪಿನ ಚಿತ್ರ ಮತ್ತು ವರ್ಣಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೧೭].

ಜಿ. ವೈ. ಹುಬ್ಳೀಕರ್[೧೮] : ಪ್ರಜಾಮತ ವಾರಪತ್ರಿಕೆಯಲ್ಲಿ ಚಿಂಗಾರಿ ಶೀರ್ಷಿಕೆಯಲ್ಲಿ ಮೂಡಿ ಬಂದ ವ್ಯಂಗ್ಯ ಚಿತ್ರಗಳಿಂದ ಕರ್ನಾಟಕದ ಬಹುತೇಕ ಮನೆಗಳಲ್ಲಿ ಹುಬ್ಳೀಕರ್ ಈಗಲೂ ಚಿರಪರಿಚಿತ. ಇವರು ಉತ್ತರಕರ್ನಾಟಕದ ಕಲಾವಿದರು. ಈ ಕೃತಿಯನ್ನು ಕೋಟೆ ಕುಮಾರ್ ಅವರು ಬರೆದಿದ್ದು, ೨೦೦೭ರಲ್ಲಿ ಈ ಗ್ರಂಥವು ಪ್ರಟಕಗೊಂಡಿದೆ. ಇಲ್ಲಿ ಕಲಾವಿದ ಜಿ. ವೈ. ಹುಬ್ಳೀಕರ್ ಅವರ ಬಾಲ್ಯದ ನೆನಪು, ಬದುಕಿಗಾಗಿ ಹುಡುಕಾಟ, ದಾಂಪತ್ಯಸಾಧನೆಯ ಮೆಟ್ಟಿಲುಗಳು, ವಿದೇಶಕ್ಕೆ ಹುಬ್ಳೀಕರ್, ವಿದೇಶಕ್ಕೆ ಚಿಂಗಾರಿ ಮತ್ತು ಜಿ.ವೈ. ಹುಬ್ಳೀಕರ್ ಒಂದು ಕಿರು ನೋಟ ಎಂಬ ಶೀರ್ಷಿಕೆಯಲ್ಲಿ ವಿವರವಾಗಿ ಬರೆದಿದ್ದಾರೆ. ವ್ಯಂಗ್ಯಚಿತ್ರ ಮತ್ತು ವರ್ಣಚಿತ್ರಗಳನ್ನು ಈ ಕೃತಿಯಲ್ಲಿ ಬಳಸಿಕೊಳ್ಳಲಾಗಿದೆ[೧೯].

ಸಿ. ಪಿ. ನಾಗೌಡ[೨೦] : ಡಾ. ಲಕ್ಷ್ಮೀದೇವಿ ಗವಾಯಿ ಅವರು ಈ ಕೃತಿಯನ್ನು

---

೧೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೯೪
೧೬. ಎಲ್. ಶಿವಲಿಂಗಪ್ಪ : ಸುಭಾಷಿಣಿ ದೇವಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭
೧೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೨೦
೧೮. ಕೋಟೆ ಕುಮಾರ್ : ಜಿ. ವೈ. ಹುಬ್ಳೀಕರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭
೧೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೬೬
೨೦. ಡಾ. ಲಕ್ಷ್ಮೀದೇವಿ ಗವಾಯಿ : ಸಿ ಪಿ. ನಾಗೌಡ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭

ಬರೆದಿದ್ದು, ೨೦೦೭ರಲ್ಲಿ ಈ ಗ್ರಂಥವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಮುದ್ರಿಸಿದೆ. ಕರ್ನಾಟಕದ ಹಿರಿಯ ಕಲಾವಿದರಲ್ಲಿ ಒಬ್ಬರಾದ ಸಿ.ಪಿ. ನಾಗೌಡ ಅವರ ಕಲಾ ಜೀವನವನ್ನು ಪರಿಚಯಿಸುವ ಕೃತಿ ಇದಾಗಿದೆ. ಕಲಾಪ್ರೇರಣೆ, ಕಲಾ ವ್ಯಾಸಂಗ, ಕಲಾಸೃಷ್ಟಿ, ವರ್ಣಚಿತ್ರಗಳು ಮತ್ತು ರೇಖಾಚಿತ್ರಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ೨೦೦೧ರಲ್ಲಿ ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅವರ ಕಪ್ಪು ಬಿಳುಪಿನ ಛಾಯಾಚಿತ್ರಗಳೊಂದಿಗೆ ಅವರ ರೇಖಾಚಿತ್ರ, ವರ್ಣಚಿತ್ರಗಳನ್ನು ಈ ಕೃತಿಯಲ್ಲಿ ಬಳಸಿಕೊಳ್ಳಲಾಗಿದೆ[೭೧].

ಟಿ. ವಿ. ಗಣೇಶಗುಡಿ[೭೨] : ಹಿರಿಯ ಕಲಾವಿದರಾದ ಚಂದ್ರಕಾಂತ ಕುಸನೂರ ಅವರು ಪ್ರಸ್ತುತ ಗ್ರಂಥವನ್ನು ರಚಿಸಿದ್ದಾರೆ. ಇಲ್ಲಿ ಕಲಾಸಾಹಿತಿ ಬರಹಗಾರ, ಚಿತ್ರಕಲಾವಿದ ಚಂದ್ರಕಾಂತ ಕುಸನೂರ ಅವರು ದಾವಣಗೆರೆಯ ಕಲಾವಿದ ಟಿ.ವಿ. ಗಣೇಶಗುಡಿಯವರ ಬಾಲ್ಯ ಪರಿಸರ, ವಿದ್ಯಾಭ್ಯಾಸ, ವೃತ್ತಿ ಜೀವನ, ಕಲಾಕೃತಿಗಳ ರಚನೆ, ಅವುಗಳ ವಸ್ತುವಿಷಯ ಮುಂತಾದ ಅಂಶಗಳ ಕುರಿತು ವೈಚಾರಿಕವಾಗಿ ಗಣೇಶಗುಡಿಯವರ ಜೀವನ ಸಾಧನೆಯನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಇದು ಕನ್ನಡ ಮತ್ತು ಆಂಗ್ಲ ಎರಡೂ ಭಾಷೆಯಲ್ಲಿ ಪ್ರಕಟಣೆಗೊಂಡಿದೆ[೭೩]. ಇಲ್ಲಿ ಗಣೇಶಗುಡಿಯವರ ವರ್ಣಚಿತ್ರಗಳು, ಕಪ್ಪುಬಿಳುಪು ಚಿತ್ರಗಳು ಸಂಗ್ರಹಗೊಂಡಿವೆ. ೨೦೧೧ರಲ್ಲಿ ಈ ಗ್ರಂಥವು ಮುದ್ರಣಗೊಂಡಿದೆ.

ಎಂ. ಬಿ. ಲೋಹಾರ[೭೪] : ಡಾ. ಶಿವಾನಂದ ಎಚ್. ಬಂಟನೂರು ಅವರು ಈ ಕೃತಿಯನ್ನು ೨೦೧೧ರಲ್ಲಿ ಬರೆದಿದ್ದು, ಕರ್ನಾಟಕದಲ್ಲಿ ಚಿತ್ರಕಲಾಕ್ಷೇತ್ರದಲ್ಲಿರುವಂತಹ ಹಿರಿಯ ಕಲಾವಿದರಲ್ಲೊಬ್ಬರಾದ ಎಂ.ಬಿ. ಲೋಹರ ಅವರ ಜೀವನ ಮತ್ತು ಕಲಾಕೃತಿಗಳನ್ನು ಪರಿಚಯಿಸಿಕೊಡುವುದರ ಜೊತೆಗೆ ಅವರು ರಚಿಸಿದಂತಹ ಕಲಾಕೃತಿಗಳಲ್ಲಿ ಪ್ರಮುಖವಾದ ಕೆಲವು ಕಲಾಕೃತಿಗಳನ್ನು ಸಹ ಈ ಕೃತಿಯಲ್ಲಿ ಬಳಸಿಕೊಳ್ಳಲಾಗಿದೆ. ಈ ಕೃತಿಯು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿಯೂ ಮುದ್ರಣಗೊಂಡಿದೆ[೭೫].

೦೨. ಕಲೆಯ ಕುರಿತು ಪ್ರಕಟಗೊಂಡ ಗ್ರಂಥಗಳು

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಸ್ತುತ ಸಾಲಿನವರೆಗೂ ಸುಮಾರು ೪೦ ಕೃತಿಗಳು ಕರ್ನಾಟಕ ಹಾಗೂ ಕರ್ನಾಟಕೇತರ ಕಲೆಯ ಕುರಿತು ಪ್ರಕಟಗೊಂಡಿದ್ದು, ಆ ಕೃತಿಗಳ ಸಂಕ್ಷಿಪ್ತ ಅವಲೋಕನ ಈ ಕೆಳಗಿನಂತೆ ಮಾಡಲಾಗಿದೆ.

---

೭೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೩೪

೭೨. ಚಂದ್ರಕಾಂತ ಕುಸನೂರ : ಟಿ. ವಿ. ಗಣೇಶಗುಡಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೧೧

೭೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೫೩

೭೪. ಡಾ. ಶಿವಾನಂದ ಎಚ್. ಬಂಟನೂರು : ಎಂ. ಬಿ. ಲೋಹಾರ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೧೧

೭೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೪೪





ಕಲಾವಿದರ ಕಲಾಮಾಲಿಕೆ

೦೧. ಮಧ್ಯಪ್ರದೇಶದ ಕಲೆ ೦೨. ಶಿಲ್ಪಕಲೆ

೦೩. ದೃಶ್ಯಕಲೆ ಎಂದರೇನು? ೦೪. ಪೋಸ್ಟ್ ಮಾಡರ್ನಿಸಂ

೦೫. ಫೋಟೋ ರಿಯಲಿಸಂ ೦೬. ಜನಪದ ಕಲೆ

೦೭. ಸಾಂಪ್ರದಾಯಿಕ ಶಿಲ್ಪಕಲೆ ೦೮. ಇಂಪ್ರಸನಿಸಂ

೦೯. ಸರ್‍ರಿಯಲಿಸಂ ೧೦. ಅಬ್‌ಸ್ಟ್ರಾಕ್ಟ್ ಕಲೆ

೧೧. ಪಾಪ್ ಕಲೆ ೧೨. ಗ್ರಾಫಿಕ್ ಕಲೆ

೧೩. ಪಾಪ್ ಕಲೆ ೧೪. ದೃಶ್ಯಕಲಾ ವಿಮರ್ಶೆ

೧೫. ಚಿತ್ತಾರ ಬೊಂಬೆ ೧೬. ಶೀಗಿಯ ಚಿತ್ರಕಲೆ

೧೭. ಕಸೂತಿ ಚಿತ್ರಕಲೆ ೧೮. ಬೆಳದಿಂಗಳ ಚಿತ್ರಕಲೆ

೧೯. ನಾಗಾರಾಧನೆ ಚಿತ್ರಕಲೆ ೨೦. ಬಿದರಿ ಚಿತ್ರಕಲೆ

೨೧. ರಂಗೋಲಿ ಚಿತ್ರಕಲೆ ೨೨. ಹಚ್ಚೆ ಚಿತ್ರಕಲೆ

೨೩. ಯಕ್ಷಗಾನ ಚಿತ್ರಕಲೆ ೨೪. ಚಿತ್ರಕಲಾ ಸಂಪುಟ ಭಾಗ–೫

೨೫. ಚಿತ್ರಕಲಾ ಸಂಪುಟ ಭಾಗ–೬ ೨೬. ಚಿತ್ರಕಲಾ ದರ್ಪಣ

೨೭. ರೇಖಾಚಿತ್ರ ೨೮. ಇನ್‌ಸ್ಟಾಲೇಷನ್ ಕಲಾಪ್ರಪಂಚ

೨೯. ನೋಟ ಪಲ್ಲಟ ೩೦. ಕಲಾಕೋಶ

೩೧. ಚಿತ್ರಕಲಾ ಪ್ರಪಂಚ ೩೨. ಬಾರೋಕ್ ಕಲೆ

೩೩. ದೃಗ್ದರ್ಶನ ೩೪. ಕಲಾಸಂಪುಟ–೧

೩೫. ಕಲಾಸಂಪುಟ–೨ ೩೬. ಕಲಾಸಂಪುಟ–೩

೩೭. ಕಲಾಸಂಪುಟ–೪ ೩೮. ಕಲಾಸಂಪುಟ–೫

೩೯. ಕಲಾಸಂಪುಟ–೬ ೪೦. ದೃಶ್ಯಧ್ಯಾನ

ಮಧ್ಯಪ್ರದೇಶದ ಕಲೆ[೭೬] : ೧೯೯೫ರಲ್ಲಿ ಈ ಕೃತಿಯನ್ನು ಕೆ. ವಿ. ಸುಬ್ರಹ್ಮಣ್ಯಂ ಅವರು ಬರೆದಿದ್ದು, ಭಾರತದಲ್ಲಿ ಕಲಾ ಐತಿಹ್ಯಗಳನ್ನು ಹೊಂದಿರುವ ರಾಜ್ಯಗಳ ಬಗ್ಗೆ

೭೬. ಕೆ. ವಿ. ಸುಬ್ರಹ್ಮಣ್ಯಂ : ಮಧ್ಯಪ್ರದೇಶದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

ಪ್ರವಾಸ ಲೇಖನವನ್ನು ಲೇಖಕರು, ಲಲಿತಕಲಾ ಅಕಾಡೆಮಿ ಧನಸಹಾಯ ಪಡೆದು ಪ್ರಕಟಿಸಿರುವ ಪುಸ್ತಕ ಇದಾಗಿದೆ. ಮಧ್ಯಪ್ರದೇಶದ ಕಲೆ ತನ್ನದೇ ಆದ ಕೊಡುಗೆ ಪ್ರೋತ್ಸಾಹದಿಂದ ಸಾಕ್ಷೀಕರಿಸಿಕೊಂಡಿರುವ ಪ್ರಮುಖ ಸ್ಥಳಗಳಾದ ಬೀಂಬೇಟ್ಕಾ ಶಿಲಾಶ್ರಯ ಚಿತ್ರಗಳು, ಸಾಂಚಿಯ ಸ್ತೂಪ, ಬಸ್ತಾರ್‌ನ ಕಲೆಯ ವಿಭಿನ್ನ ಪ್ರಕಾರಗಳು, ಓರ್ಛಾಲಕ್ಷ್ಮಿ ನಾರಾಯಣ ದೇವಾಲಯದ ಕಲೆ, ಕಿಲೇಪಾಲ್‌ನ ಚಿತ್ರಗಳು, ಹಚ್ಚೆ ಕಲೆ, ಉದಯಗಿರಿ ಗುಹೆಗಳು, ಶಿಲ್ಪಗಳು, ಖಜುರಾಹೋ ದೇವಾಲಯ ಶಿಲ್ಪಗಳು ಹಾಗೂ ಕಲಾವಿದರಾದಂತಹ ಎನ್.ಎಸ್. ಬೇಂದ್ರೆ, ಎಸ್.ಎಚ್. ರಝೂಬಾವರಿ, ಭಾರತ ಭವನ, ಇಂದಿರಾಗಾಂಧಿ ರಾಷ್ಟ್ರೀಯ ವಿಮಾನ ಸಂಗ್ರಹಾಲಯಗಳ ಕುರಿತು ಮಧ್ಯಪ್ರದೇಶದ ಕಲಾ ವೈಭವ ಪರಿಚಯವನ್ನು ಲೇಖಕರೇ ಖುದ್ದಾಗಿ ಪ್ರವಾಸ ಮಾಡಿ ವಿಷಯ ಸಂಗ್ರಹಿಸಿ, ಪುಸ್ತಕ ಹೊರತಂದಿರುವುದು ಗಮನಾರ್ಹವಾಗಿದೆ[೭೭].

ಫೋಟೊ ರಿಯಲಿಸಂ[೭೮] : ಕೆ. ವಿ. ಸುಬ್ರಹ್ಮಣ್ಯಂ ಅವರ ಮತ್ತೊಂದು ಗ್ರಂಥ ಇದಾಗಿದ್ದು, ಈ ಕೃತಿಯೂ ೧೯೯೫ರಲ್ಲಿ ಮುದ್ರಣಗೊಂಡಿದೆ. ಪಾಪ್ ಕಲೆಯ ಉತ್ತರಾಧಿಕಾರಿ ಎಂಬಂತೆ ಹುಟ್ಟಿಕೊಂಡ ಫೋಟೊರಿಯಲಿಸಂ ಕಲಾಶೈಲಿಯ ಕುರಿತಾಗಿ ಸ್ಥೂಲ ಮಾಹಿತಿಯನ್ನು ಈ ಪುಸ್ತಕ ಹೊಂದಿದೆ. ಫೋಟೊರಿಯಲಿಸಂ ಕಲೆಯ ಅರ್ಥ ವ್ಯಾಪ್ತಿ, ಹುಟ್ಟು, ಬೆಳವಣಿಗೆ, ಕಲಾವಿದರು ಮತ್ತು ಕಲಾಕೃತಿಗಳ ಬಗ್ಗೆ ಕಿರು ಮಾಹಿತಿಯನ್ನು ಈ ಪುಟ್ಟ ಕೃತಿಯಲ್ಲಿ ಪರಿಚಯಿಸಲಾಗಿದೆ[೭೯].

ಪೋಸ್ಟ್ ಮಾಡರ್ನಿಸಂ[೮೦] : ನೇಮಿರಾಜ ಶೆಟ್ಟಿಯವರು ಈ ಕೃತಿಯನ್ನು ೧೯೯೫ರಲ್ಲಿ ಬರೆದಿದ್ದಾರೆ. ಪೋಸ್ಟ್ ಮಾಡರ್ನಿಸಂ– ಆಧುನಿಕೋತ್ತರ ಕಲೆಯ ಸಂಕ್ಷಿಪ್ತ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ. ಪ್ರಾಚೀನ ಮಾನವನ ಕಲಾ ಸೃಷ್ಟಿ, ನಾಗರಿಕತೆಯ ಕಾಲದ ಕಲಾ ಬೆಳವಣಿಗೆ, ಪುನರುಜ್ಜೀವನ ಯುಗ, ಆಧುನಿಕ ಕಲೆ ಇವುಗಳನ್ನು ಸಂಕ್ಷಿಪ್ತವಾಗಿ ವಿವೇಚಿಸಿ ನಂತರ ಆಧುನಿಕೋತ್ತರ ಕಾಲದ ಕಲಾ ವಿಚಾರಗಳ ಬಗ್ಗೆ ಹೇಳಲಾಗಿದೆ. ಜೊತೆಗೆ ಪಾಶ್ಚಾತ್ಯ ಭಾರತೀಯ ಮತ್ತು ಕರ್ನಾಟಕದ ಆಧುನಿಕೋತ್ತರ ಕಲಾವಿದರನ್ನು ಹಾಗೂ ಅವರ ಕಲಾಕೃತಿಗಳನ್ನು ಸಂಕ್ಷಿಪ್ತವಾಗಿ ಹೆಸರಿಸಲಾಗಿದೆ. ಕಪ್ಪು ಬಿಳುಪು ಛಾಯಾಚಿತ್ರಗಳಿವೆ[೮೧].

ಜನಪದ ಕಲೆ[೮೨] : ೧೯೯೫ರಲ್ಲಿ ಈ ಚಿಕ್ಕ ಪುಸ್ತಿಕೆಯನ್ನು ಡಾ. ಎಸ್. ಸಿ.

---

೭೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೯೮
೭೮. ಕೆ. ವಿ. ಸುಬ್ರಹ್ಮಣ್ಯಂ : ಫೋಟೋ ರಿಯಲಿಸಂ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫
೭೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೬
೮೦. ನೇಮಿರಾಜ ಶೆಟ್ಟಿ : ಪೋಸ್ಟ್ ಮಾಡರ್ನಿಸಂ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫
೮೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೬
೮೨. ಡಾ. ಎಸ್. ಸಿ. ಪಾಟೀಲ : ಜನಪದ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

ಪಾಟೀಲರವರು ಬರೆದಿದ್ದಾರೆ. ಈ ಕೃತಿಯಲ್ಲಿ ಜನಪದ ಚಿತ್ರಕಲೆಯ ಕುರಿತು ಪರಿಚಯವಿದೆ. ಜನಪದ ಮತ್ತು ಶಿಷ್ಟಪದ ಚಿತ್ರಕಲೆ, ವೈಲಕ್ಷಣಗಳು, ಜನಪದ ಚಿತ್ರಕಲೆಯ ವರ್ಗೀಕರಣದಲ್ಲಿ ಹಚ್ಚೆ, ಮದರಂಗಿ, ಕೌದಿ ಕಲೆ, ಕಸೂತಿ ಕಲೆ, ಗಂಜೀಫಾ ಕಲೆ ಮತ್ತು ತೊಗಲುಗೊಂಬೆ ಚಿತ್ರಕಲೆಯ ಕುರಿತ ಸ್ಥೂಲ ಮಾಹಿತಿಯನ್ನು ನೀಡಿದ್ದಾರೆ. ವೃತ್ತಿಮೂಲ ಜನಪದ ಚಿತ್ರಕಲೆಯಲ್ಲಿ ಗೋಕಾಕ ಕಲೆ, ಕಿನ್ನಾಳ ಕಲೆ ಮತ್ತು ಕಲಘಟಗಿ ಕಲೆಯ ಬಗ್ಗೆ ವಿವರಣೆ ನೀಡಿದ್ದಾರೆ. ಸೌಂದರ್ಯಮೂಲ, ಧರ್ಮಮೂಲ ಚಿತ್ರಗಳ ಸ್ಥೂಲ ಪರಿಚಯವಿದೆ. ಕಲಾಕೃತಿಗಳ ಕಪ್ಪು ಬಿಳುಪಿನ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೮೩].

ಇಂಪ್ರಸನಿಸಂ[೮೪] : ಡಾ. ಅ. ಲ. ನರಸಿಂಹನ್ ಅವರು ಬರೆದ ಈ ಗ್ರಂಥವನ್ನು ೧೯೯೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ. ಪಾಶ್ಚಾತ್ಯ ಚಿತ್ರಕಲಾ ಶೈಲಿಯಲ್ಲಿ ಹೊಸ ಕ್ರಾಂತಿಯನ್ನು ಹುಟ್ಟುಹಾಕಿ ರೋಮಾಂಚನ ಕಾರಿಯಾದ ಅಧ್ಯಾಯ ತೆರೆದು ಅವಸಾನದ ಅಂಚು ತಲುಪಿದ ಇಂಪ್ರಸನಿಸಂನ ಬಗ್ಗೆ ಸುಮಾರು ೧೧ ಹಂತಗಳಲ್ಲಿ ಲೇಖಕರು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಇಂಪ್ರಸನಿಸಂ (ಭಾವಮುದ್ರ ಪಂಥ) ಹೊಸ ಪಂಥದ ಉಗಮ ಮತ್ತು ಸ್ವರೂಪ, ಕಲಾವಿದರು ಹಾಗೂ ಕೃತಿಗಳು, ಆರಂಭದ ಕಾಲ, ಫ್ರಾನ್ಸ್, ಪರ್ಷಿಯನ್ ಯುದ್ಧದ ಸಂದರ್ಭದಲ್ಲಿ ಪ್ರೌಢಾವಸ್ಥೆಯತ್ತ ಇಂಪ್ರಸನಿಸಂ, ಪೋಸ್ಟ್ ಇಂಪ್ರಸನಿಸಂ, ಇಂಪ್ರಷನಸಂ ಶಿಲ್ಪಿಗಳು, ಕಲೆಗಾಗಿ ಕಲೆ ಮತ್ತು ಸಾಹಿತ್ಯ ಮತ್ತು ಭಾರತದಲ್ಲಿ ಇಂಪ್ರಸನಿಸಂ ಕಲೆ, ಕಲಾವಿದರ ಬಗೆಗೆ ಸಾಕಷ್ಟು ಮಾಹಿತಿಯನ್ನು ಈ ಪುಸ್ತಕ ನೀಡುತ್ತದೆ[೮೫].

ಸರ್ರಿಯಲಿಸಂ[೮೬] : ೧೯೯೫ರಲ್ಲಿ ಈ ಗ್ರಂಥವನ್ನು ಎನ್. ಮರಿಶಾಮಾಚಾರ್ ಅವರು ರಚಿಸಿದ್ದು, ಈ ಪುಸ್ತಕವು ಇಪ್ಪತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡ ಹೊಸ ಕಲಾ ಪಂಥಗಳಲ್ಲಿ ಪ್ರಮುಖವಾದ ಸರ್ರಿಯಲಿಸಂ ಶೈಲಿಯನ್ನು ಕುರಿತಾಗಿದೆ. ಸರ್ರಿಯಲಿಸಂ ಎಂದರೇನು? ಅರ್ಥ, ಸ್ವರೂಪ, ಹುಟ್ಟು, ಬೆಳವಣಿಗೆಗಳಲ್ಲದೇ ಈ ಶೈಲಿಯ ಕಲಾವಿದರು, ಕಲಾಕೃತಿಗಳು, ರಚನಾ ಹಿನ್ನೆಲೆ, ಉದ್ದೇಶ, ಕಲಾವಿದನ ಮನೋಸ್ಥಿತಿ ಮುಂತಾದ ಅಂಶಗಳನ್ನು ಸ್ಥೂಲವಾಗಿ ವಿವೇಚಿಸಲಾಗಿದೆ. ಜೊತೆಗೆ ಈ ಶೈಲಿಯ ಕೆಲವು ಕಲಾಕೃತಿಗಳ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೮೭].

ಅಬ್‌ಸ್ಟ್ರಾಕ್ಟ್ ಕಲೆ[೮೮] : ಅಬ್‌ಸ್ಟ್ರಾಕ್ಟ್ ಕಲೆ (ಅಮೂರ್ತ ಕಲೆ) ಯಾವುದೇ ನಿರ್ದಿಷ್ಟ

---

೮೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೨೧

೮೪. ಡಾ. ಅ. ಲ. ನರಸಿಂಹನ್ : ಇಂಪ್ರಸನಿಸಂ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

೮೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೪

೮೬. ಎನ್. ಮರಿಶಾಮಾಚಾರ್ : ಸರ್ರಿಯಲಿಸಂ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

೮೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೪೩

೮೮. ಆರ್. ಎ. ಶಾಂತರಾಜ್ : ಅಬ್‌ಸ್ಟ್ರಾಕ್ಟ್ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

ರೂಪವಿರದ ಆಕಾರಗಳು ಇಲ್ಲಿ ರಚನೆಯಾಗಿರುತ್ತವೆ. ಈ ಪುಸ್ತಕದಲ್ಲಿ ಅಮೂರ್ತ ಕಲೆ ಎಂದರೇನು? ಅದರ ಚರಿತ್ರೆ, ಮೂರ್ತ-ಅಮೂರ್ತಗಳ ನೆಲೆ, ಅದರ ವಿವಿಧ ಆಯಾಮಗಳು, ಶತಮಾನದ ಅಮೂರ್ತ ಕಲೆ, ಲಕ್ಷಣಗಳು, ರಚನಾ ಶೈಲಿ, ಅಮೂರ್ತ ಶೈಲಿಯ ಪ್ರಮುಖ ಕಲಾವಿದರು, ಜಗತ್ತಿನ, ಭಾರತದ ಮತ್ತು ರಾಜ್ಯದ ಅಮೂರ್ತ ಕಲಾವಿದರನ್ನು ಹೆಸರಿಸಲಾಗಿದೆ. ಜೊತೆಗೆ ಕೆಲವು ಕಲಾಕೃತಿಗಳನ್ನು ನೀಡಲಾಗಿದೆ. ಇದೊಂದು ಪರಿಚಯಾತ್ಮಕ ಕಿರು ಗ್ರಂಥವಾಗಿದೆ. ೧೯೯೫ರಲ್ಲಿ ಮುದ್ರಣಗೊಂಡ ಈ ಕೃತಿಯನ್ನು ಆರ್. ಎ. ಶಾಂತರಾಜ್ ಅವರು ಬರೆದಿದ್ದಾರೆ[೮೯].

ಪಾಪ್ ಕಲೆ[೯೦] : ಚಿತ್ರಕಲಾವಿದ ಹಾಗೂ ಚಿತ್ರಕಲಾಸಾಹಿತಿಯಾದ ರವಿಕುಮಾರ ಕಾಶಿಯವರು ಈ ಕೃತಿಯನ್ನು ಬರೆದಿದ್ದಾರೆ. ೧೯೯೭ರಲ್ಲಿ ಈ ಗ್ರಂಥವು ಪ್ರಕಟಗೊಂಡಿದೆ. ಈ ಪುಸ್ತಕದಲ್ಲಿ ಪಾಪ್‌ಕಲೆಯ ಅರ್ಥ, ವ್ಯಾಖ್ಯೆಯನ್ನು ವಿವೇಚಿಸುತ್ತ ನ್ಯೂಯಾರ್ಕನಲ್ಲಿ ಪಾಪ್, ಬ್ರಿಟನ್ ಮತ್ತು ಇತರ ದೇಶಗಳಲ್ಲಿ ಪಾಪ್‌ಕಲೆ, ೫೦ರ ದಶಕದಲ್ಲಿ ಪಾಪ್‌ಕಲೆ ಬೆಳವಣಿಗೆಯ ಹೆಜ್ಜೆಗಳು, ಭಾರತದಲ್ಲಿ ಪಾಪ್‌ಕಲೆ, ಈ ಶೈಲಿಯ ಕಲಾವಿದರು ಮತ್ತು ಕಲಾಕೃತಿಗಳ ಬಗ್ಗೆ ಸ್ಥೂಲ ಮಾಹಿತಿಯನ್ನು ಈ ಕೃತಿ ನೀಡುತ್ತದೆ[೯೧].

ಗ್ರಾಫಿಕ್ ಕಲೆ[೯೨] : ರವಿಕುಮಾರ ಕಾಶಿಯವರ ಮತ್ತೊಂದು ಕೃತಿ ಇದಾಗಿದ್ದು, ಈ ಕೃತಿಯು ೧೯೯೬ರಲ್ಲಿ ಪ್ರಕಟಗೊಂಡಿದೆ. ಇದೊಂದು ಚಿಕ್ಕ ಕೃತಿಯಾಗಿದ್ದು, ಈ ಪುಸ್ತಕವು ಗ್ರಾಫಿಕ್ ಕಲೆಯ ಕುರಿತಾದ ಸಂಕ್ಷಿಪ್ತ ಮಾಹಿತಿಯನ್ನು ಹೊಂದಿದೆ. ಗ್ರಾಫಿಕ್ ಕಲೆ ಎಂದರೇನು? ಅದರ ಪ್ರಕಾರಗಳು, ರಚನಾ ವಿಧಾನ, ರಿಲೀಫ್ ಮುದ್ರಣ, ವುಡ್‌ಕಟ್ ಇತಿಹಾಸ, ವುಡ್‌ಕಟ್ ಉಪಕರಣಗಳು, ವುಡ್ ಎನ್‌ಗ್ರೇವಿಂಗ್, ಅದರ ಉಪಕರಣಗಳು. ಲೀನೋಕಟ್ ಮುದ್ರಣ ತಂತ್ರಗಳು, ಇಂಟಾಂಗ್ಲಿಯೋ ಮುದ್ರಣ, ಎನ್‌ಗ್ರೇವಿಂಗ್, ಎಚ್ಚಿಂಗ್ ಇತಿಹಾಸ. ಎಚ್ಚಿಂಗ್ ತಂತ್ರ, ಅಕ್ವಾಟಿಂಟ್ ಸಾಫ್ಟ್‌ಗ್ರೌಂಡ್, ವಿಸ್ಕೊಸಿಟಿ ತಂತ್ರ, ಲಿಥೋಗ್ರಾಫಿ, ಸೆರಿಗ್ರಾಫಿ, ಭಾರತದಲ್ಲಿ ಮುದ್ರಣ ಕಲೆಯ ಇತಿಹಾಸ ಮುಂತಾದ ಅಂಶಗಳು ಇಲ್ಲಿ ಸಂಕ್ಷಿಪ್ತವಾಗಿ ಹೇಳಲ್ಪಟ್ಟಿವೆ[೯೩].

ಪಾಪ್ ಕಲೆ[೯೪] : ರವಿಕುಮಾರ ಕಾಶಿಯವರು ಪಾಪ್ ಕಲೆಯ ಕುರಿತು ಬರೆದ ಮತ್ತೊಂದು ಗ್ರಂಥ ಇದಾಗಿದೆ. ೧೯೯೭ರಲ್ಲಿ ಈ ಪುಸ್ತಕವು ಪ್ರಕಟಗೊಂಡಿದೆ. ಕಲಾವಿದ,

---

೮೯. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೨

೯೦. ರವಿಕುಮಾರ ಕಾಶಿ : ಪಾಪ್ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭

೯೧. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೨

೯೨. ರವಿಕುಮಾರ ಕಾಶಿ : ಗ್ರಾಫಿಕ್ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೬

೯೩. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೩

೯೪. ರವಿಕುಮಾರ ಕಾಶಿ : ಪಾಪ್ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭

ಕಲಾ ಬರಹಗಾರರಾದ ರವಿಕುಮಾರ್ ಕಾಶಿಯವರು ಅಮೆರಿಕಾ-ಬ್ರಿಟನ್ ಕಲೆಯ ಕ್ರಾಂತಿಯಲ್ಲಿನ ಒಂದು ಹಂತದ ಕಲಾ ಶೈಲಿಯಾದ ಪಾಪ್‌ಕಲೆ ಬಗ್ಗೆ ಬರೆದಿರುವ ಪುಸ್ತಕ ಇದಾಗಿದೆ. ಇದರಲ್ಲಿ ಅವರು ಪಾಪ್ ಕಲೆಯ ಹುಟ್ಟು, ಬೆಳವಣಿಗೆ, ಅನಿವಾರ್ಯತೆ, ಬಳಕೆ ಕುರಿತು, ಪಾಪ್‌ಕಲೆಯ ವ್ಯಾಖ್ಯೆ, ನ್ಯೂಯಾರ್ಕ್‌ನಲ್ಲಿ ಪಾಪ್‌ಕಲೆಯ ಬೆಳವಣಿಗೆ, ಪ್ರಭಾವ, ಕಲಾವಿದರು, ಬ್ರಿಟನ್ ಮತ್ತು ಇತರ ಕಡೆಗಳಲ್ಲಿ ಪಾಪ್‌ಕಲೆ ಹರಡಿದ ಬಗ್ಗೆ ಹಾಗೂ ಸಮಕಾಲೀನ ನವೀನ ಕಲೆಯೊಂದಿಗೆ ಪಾಪ್‌ಕಲೆಯ ಮುಖಾಮುಖಿಯ ಕುರಿತು ಛಾಯಾಚಿತ್ರಗಳೊಂದಿಗೆ ವಿವರಿಸಿದ್ದಾರೆ[೯೩].

ಚಿತ್ತಾರದ ಗೊಂಬೆ ಚಿತ್ರಕಲೆ[೯೪] : ಡಾ. ಟಿ. ಗೋವಿಂದರಾಜು ಅವರು ಬರೆದ ಈ ಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ೨೦೦೪ರಲ್ಲಿ ಪ್ರಕಟಿಸಿದೆ. ಚಿತ್ತಾರದ ಗೊಂಬೆ ಚಿತ್ರಕಲೆ ಕೃತಿಯು ಈ ಕಲಾ ಪ್ರಕಾರದ ಬಗೆಗಿನ ಒಟ್ಟು ನೋಟವನ್ನು ವಿಭಿನ್ನ ನೆಲೆಯಲ್ಲಿ ನೀಡುವಂತಹದ್ದಾಗಿರುವುದು ವಿಶೇಷವಾಗಿದೆ. ಗೊಂಬೆಗಳ ಕಲಾತ್ಮಕತೆಗೆ ಸಂಬಂಧಿಸಿದಂತೆ ಮತ್ತು ವರ್ಣಗಾರಿಕೆ, ಸಂಯೋಜನೆ, ತೆರಪಿನ ಸಂಕಲ್ಪನೆ, ಆಧುನಿಕ ಸಂದರ್ಭದಲ್ಲಿ ಈ ಕೃತಿ ಬಳಕೆಯಾಗುತ್ತಿರುವ ಬಗೆ ಇವೆಲ್ಲವನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಕಪ್ಪು ಬಿಳುಪಿನ ಮತ್ತು ವರ್ಣದ ಗೊಂಬೆ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೯೫].

ಶೀಗಿ ಚಿತ್ರಕಲೆ[೯೬] : ಡಾ. ಎಸ್. ಸಿ. ಪಾಟೀಲರವರ ಸಂಪಾದನೆಯಲ್ಲಿ ಜನಪದ ಕಲಾ ಮಾಲೆಯೆಂಬ ಸರಣಿ ಕೃತಿಗಳ ರಚನೆಯು ೨೦೦೪ರಲ್ಲಿ ಪ್ರಾರಂಭವಾಯಿತು. ಡಾ. ಯಾದಪ್ಪ ಬಿ. ಪರದೇಶಿಯವರು ಪ್ರಸ್ತುತ ಪುಸ್ತಕವನ್ನು ಬರೆದಿದ್ದು, ಶೀಗಿ ಚಿತ್ರಕಲೆ ಎಂದರೆ ಶೀಗಿ ಹುಣ್ಣಿಮೆ ಹಬ್ಬದ ಸಂದರ್ಭದಲ್ಲಿ ಚಿತ್ರ ಬರೆಯುವುದಾಗಿದೆ. ಶೀಗಿಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಸ್ತ್ರೀದೇವತೆಯಾಗಿ ಪೂಜಿಸುತ್ತಾರೆ. ಶೀಗಿ ಚಿತ್ರಕಲೆಯನ್ನು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಸ್ವರೂಪ, ಮಾಧ್ಯಮ ಮತ್ತು ಸ್ಥಳಗಳಲ್ಲಿ ರಚನೆ ಮಾಡಲಾಗುತ್ತದೆ. ಬೀದರ್‌ಭಾಗದಲ್ಲಿ ಮನೆಯ ಹೊರಗೋಡೆಯಲ್ಲಿ ಚಿತ್ರಿಸಿದರೆ, ಬಾಗಲಕೋಟೆ, ವಿಜಾಪುರ, ಬೆಳಗಾವಿ, ಧಾರವಾಡ ಭಾಗಗಳಲ್ಲಿ ಮನೆಯ ಒಳಗೋಡೆಯಲ್ಲಿ ಚಿತ್ರ ಬರೆಯುತ್ತಾರೆ. ಶೀಗಿ ಚಿತ್ರಕಲೆಯ ಸ್ವರೂಪ, ಮಾಧ್ಯಮ, ಸಿದ್ಧತಾ ಪರಿಕರಗಳು ಮತ್ತು ಸಿದ್ದತಾ ಹಂತ, ಚಿತ್ರ ರಚನಾ ವಿಧಾನದ ಕುರಿತು ವಿವರಿಸಿದ್ದಾರೆ. ಕೃತಿಯಲ್ಲಿ ವರ್ಣದ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೯೭].

---

೯೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೨೩

೯೪. ಡಾ. ಟಿ. ಗೋವಿಂದರಾಜು : ಚಿತ್ತಾರದ ಗೊಂಬೆ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೯೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೬

೯೬. ಡಾ. ಯಾದಪ್ಪ ಪರದೇಶಿ : ಶೀಗಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೯೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೩

ಕಸೂತಿ ಚಿತ್ರಕಲೆ[೧೦೦] : ಮಹಾದೇವ ಎಂ. ಜಗತಾಪ ಅವರು ಬರೆದ ಈ ಕೃತಿಯನ್ನು ಡಾ. ಎಸ್. ಸಿ. ಪಾಟೀಲರವರು ಸಂಪಾದಿಸಿದ್ದಾರೆ. ಈ ಕೃತಿಯೂ ೨೦೦೪ರಲ್ಲಿ ಮುದ್ರಣಗೊಂಡಿದೆ. ಈ ಕೃತಿಯಲ್ಲಿ ಕಸೂತಿ ಕಲೆ ರಚನೆಯ ಸಾಮಗ್ರಿಗಳು, ಕಸೂತಿ ಪ್ರಕಾರಗಳಾದ ದೇಶೀ ಕಸೂತಿ, ಮೆಂತೆ ಕಸೂತಿ, ನೇಯ್ಗೆ ಕಸೂತಿ, ಮುರುಗಿ ಕಸೂತಿ, ಕೈ ಕಸೂತಿಗಳ ವಿವರಣೆ ನೀಡಲಾಗಿದೆ. ಕುಲಾಯಿ ಕುಂಚಿಗೆಗಳ ಮೇಲೆ ಕಸೂತಿ, ಝೂಲದ ಕಸೂತಿ ಹೀಗೆ ಅನೇಕ ಪ್ರಕಾರದ ಕಸೂತಿಯ ವಿವರಣೆಯೊಂದಿಗೆ ಕಸೂತಿಕಲಾವಿದೆಯರ ಪರಿಚಯುವನ್ನು ನೀಡಿದ್ದಾರೆ. ಕಸೂತಿಕಲೆಯು ವರ್ಣಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ[೧೦೧].

ಬೆಳದಿಂಗಳ ಚಿತ್ರಕಲೆ[೧೦೨] : ಆನಂದ ಕೆ. ಪೂಜಾರ ಅವರು ಬರೆದ ಈ ಗ್ರಂಥವನ್ನು ೨೦೦೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಣೆಗೊಳಿಸಿದೆ. ಮನುಷ್ಯನ ಸಾರಸರ್ವಸ್ವವೇ ಪ್ರಕೃತಿ. ಪ್ರಕೃತಿಯ ಚಟುವಟಿಕೆಗಳಾದ ಹಗಲು, ರಾತ್ರಿ, ಮೋಡ, ಮಳೆ, ಗುಡುಗು, ಸೂರ್ಯ, ಚಂದ್ರ, ನಕ್ಷತ್ರಗಳು ವ್ಯಕ್ತಿಯ ಬದುಕಿನ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಪರಿಣಾಮವನ್ನುಂಟು ಮಾಡಿವೆ. ಚಂದ್ರನ ಪೂಜೆ ಅಥವಾ ಬೆಳದಿಂಗಳ ಪೂಜೆಯೂ ಒಂದು. ಚಂದ್ರನ ಆರಾಧನೆ ಜಗತ್ತಿನ ಎಲ್ಲ ಜನಾಂಗಗಳಲ್ಲೂ ಭಿನ್ನ ಭಿನ್ನ ರೂಪಗಳಲ್ಲಿ ಕಂಡುಬರುತ್ತದೆ. ಬೆಳದಿಂಗಳ ಚಿತ್ರಕಲೆಯ ಆರಾಧನಾಕ್ರಮ, ಸ್ವರೂಪ, ಪರಿಕರಗಳ ರಚನಾ ವಿಧಾನ, ಸಿದ್ಧತಾ ಹಂತ, ಚಿತ್ರರಚನಾ ಹಂತ, ವಸ್ತು ವಿಷಯಗಳ ಮತ್ತು ನಂಬಿಕೆಗಳ ಬಗ್ಗೆ ಇಲ್ಲಿ ಚಿತ್ರಗಳೊಂದಿಗೆ ವಿವರಿಸಿದ್ದಾರೆ[೧೦೩].

ನಾಗಾರಾಧನೆ ಮತ್ತು ಚಿತ್ರಕಲೆ[೧೦೪] : ಉಪಾಧ್ಯಾಯ ಮೂಡುಬೆಳ್ಳೆಯವರ ಈ ಪುಸ್ತಕವು ೨೦೦೪ರಲ್ಲಿ ಮುದ್ರಣಗೊಂಡಿದ್ದು, ಜನಪದ ಆಚರಣೆಗಳಲ್ಲಿ ಒಂದಾದ ಈ ಕಲೆಯನ್ನು ಲಲಿತಕಲಾ ಅಕಾಡೆಮಿಯು ಜನಪ್ರಿಯ ದೇಶಿ ಕಲಾಮಾಲಿಕೆಯ ಅಡಿಯಲ್ಲಿ ಪ್ರಕಟಿಸಿದೆ. ಕರ್ನಾಟಕದ ದೇಶಿ ಚಿತ್ರಕಲೆಯೊಂದನ್ನು ಅದರ ಪ್ರಾದೇಶಿಕ ವೈಶಿಷ್ಟ್ಯದ ಹಿನ್ನೆಲೆಯೊಂದಿಗೆ ಲೇಖಕರು ಈ ಕಿರುಹೊತ್ತಿಗೆಯನ್ನು ಸಿದ್ಧಪಡಿಸಿರುವರು. ಕರಾವಳಿ ಕರ್ನಾಟಕದಲ್ಲಿ ಮಾತ್ರ ಕಂಡುಬರುವ ನಾಗಾರಾಧನೆಯಲ್ಲಿ ಬಳಕೆಯಾಗುವ ಚಿತ್ರಕಲೆಯ ವಿವಿರವನ್ನು ಚರ್ಚಿಸಲಾಗಿದೆ. ಲೇಖನಕ್ಕೆ ತಕ್ಕಂತೆ ಛಾಯಾಚಿತ್ರಗಳ ಬಳಕೆಯು ಇಲ್ಲಿ ಕಂಡುಬರುತ್ತದೆ[೧೦೫].

---

೧೦೦. ಮಹಾದೇವ ಎಂ. ಜಗತಾಪ : ಕಸೂತಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪
೧೦೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೨೫
೧೦೨. ಆನಂದ ಕೆ. ಪೂಜಾರ : ಬೆಳದಿಂಗಳ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪
೧೦೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೩೦
೧೦೪. ಉಪಾಧ್ಯಾಯ ಮೂಡುಬೆಳ್ಳೆ: ನಾಗಾರಾಧನೆ ಮತ್ತು ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪
೧೦೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೨೭

ಬಿದರಿ ಚಿತ್ರಕಲೆ[೧೦೬] : ಬೀದರ ಪ್ರದೇಶದ ಈ ಕಲೆಯ ಕುರಿತು ಡಾ. ವಿ. ಎಂ. ಬಾಗಾಯತ ಅವರು ೨೦೦೪ರಲ್ಲಿ ಬರೆದಿದ್ದಾರೆ. ಈ ಕೃತಿಯಲ್ಲಿ ಬಿದರಿ ಕಲೆಯ ಇತಿಹಾಸ, ಬಿದರಿ ಕಲೆಯ ಹುಟ್ಟು ಮತ್ತು ಬೆಳವಣಿಗೆ, ಬಿದರಿ ಕಲೆ ತಯಾರಿಕೆಗೆ ಬೇಕಾಗುವ ಕಚ್ಚಾ ವಸ್ತುಗಳು, ಪರಿಕರಗಳು, ಬಿದರಿ ಕರಕುಶಲತೆಯ ಪ್ರಾಚೀನ ಪ್ರಕಾರಗಳು ಮತ್ತು ಬಿದರಿ ಕಲೆ ತಯಾರಿಕೆಯ ಹಂತಗಳ ಬಗ್ಗೆ ವಿವರಿಸಿದ್ದಾರೆ. ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪಡೆದ ಕಲಾವಿದರ ಪರಿಚಯವನ್ನು ಬಳಸಿಕೊಳ್ಳಲಾಗಿದೆ[೧೦೭].

ರಂಗೋಲಿ ಚಿತ್ರಕಲೆ[೧೦೮] : ಡಾ. ಎಸ್. ಸಿ. ಪಾಟೀಲರವರ ಮತ್ತೊಂದು ಕೃತಿಯಿದಾಗಿದ್ದು, ೨೦೦೪ರಲ್ಲಿ ಈ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ. ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಧಿಕಾರ ಆಯಾ ದೇಶದ ಕಲೆಗಳಿಗಿರುತ್ತದೆ. ಸಾಮಾನ್ಯವಾಗಿ ದೇಶಿ ಮೂಲದ ಕಲೆಗಳು ಅವುಗಳದೇ ಆದ ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುತ್ತವೆ. ಜನಪದ ಕಲೆ ಸೌಂದರ್ಯದ ಆಶಯವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಮತ್ತು ವೃತ್ತಿ ಮೂಲದ ಸಂದರ್ಭಗಳಲ್ಲಿ ಜನಿಸಿರುವ ಕಲೆಗಳಲ್ಲೊಂದಾದ ರಂಗೋಲಿ ಚಿತ್ರಕಲೆಯು ಶಿಷ್ಟಪದ ಮತ್ತು ಜನಪದ ಮೂಲದ ಸಮ್ಮಿಶ್ರ ಕಲೆಯಾಗಿದೆ. ರಂಗೋಲಿ ಭಾರತದ ಅತ್ಯಂತ ಪ್ರಾಚೀನ ಚಿತ್ರಕಲೆ. ಬದುಕಿನ ಖುಷಿಯನ್ನು, ಸೌಭಾಗ್ಯ ಮಂಗಳಕರ ಪ್ರಸನ್ನತೆಯನ್ನು, ಶುಭ ಸನ್ನಿವೇಶವನ್ನು ಹೇಳುವ ಲಾಲಿತ್ಯ ಪೂರ್ಣ ಕಲಾ ಕೌಶಲವನ್ನು ರಂಗೋಲಿಯಲ್ಲಿ ಕಾಣಬಹುದು. ಈ ರಂಗೋಲಿಯ ಪ್ರಾಚೀನತೆ, ರಂಗೋಲಿ ಕಲೆಯ ಕುರಿತ ಕಥೆ, ಐತಿಹ್ಯ, ನಂಬಿಕೆಗಳು, ಒಗಟು, ಗಾದೆ, ಒಡಪುಗಳು, ರಂಗೋಲಿಯ ಸಾಮಗ್ರಿಗಳು, ಹಾಕುವ ವಿಧಾನಗಳು, ಆಧುನಿಕ ರೀತಿಯ ರಂಗೋಲಿಗಳು ಮತ್ತು ವ್ರತ ಮಾಡುವಾಗ, ದೀಕ್ಷಾ ಸಂದರ್ಭದಲ್ಲಿ, ದೇವರ ಮುಂದೆ, ಹಬ್ಬದಲ್ಲಿ, ಮದುವೆಯಲ್ಲಿ, ಉತ್ಸಾಹದಲ್ಲಿ, ಶೇಡಿಯ ರಂಗೋಲಿ, ಜಾತ್ರೆಯ ರಂಗೋಲಿ, ನವಗ್ರಹ ಶಾಂತಿಯ ರಂಗೋಲಿ, ಗೃಹಶಾಂತಿಯ, ವ್ಯಾಧಿ ನವಾರಣೆಯ, ಭೂತ ಬಿಡಿಸುವ, ಮೋಡಿಯಾಟದ, ಸಮಾಧಿಯ ರಂಗೋಲಿ ಹೀಗೆ ನಾನಾ ಸಂದರ್ಭಗಳಲ್ಲಿ ರಂಗೋಲಿ ಹಾಕುವುದನ್ನು, ಅದರ ಸಾಂಪ್ರದಾಯಿಕ ಹಿನ್ನೆಲೆಗಳನ್ನು ಲೇಖಕರು ಸವಿಸ್ತಾರವಾಗಿ ಕೃತಿಯ ಮೂಲಕ ಓದುಗರಿಗೆ ಒದಗಿಸಿದ್ದಾರೆ[೧೦೯].

ಹಚ್ಚೆ ಚಿತ್ರಕಲೆ[೧೧೦] : ಜನಪದ ಚಿತ್ರಕಲೆಯಲ್ಲಿ ಒಂದಾದ, ತುಂಬಾ ವೈಶಿಷ್ಟ್ಯವನ್ನು

---

೧೦೬. ಡಾ. ವಿ. ಎಂ. ಬಾಗಾಯತ : ಬಿದರಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೧೦೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೩೧

೧೦೮. ಡಾ. ಎಸ್. ಸಿ. ಪಾಟೀಲ : ರಂಗೋಲಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೧೦೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೪೧

೧೧೦. ಡಾ. ಎಸ್. ಸಿ. ಪಾಟೀಲ : ಹಚ್ಚೆ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

ಹೊಂದಿರುವ ಹಚ್ಚೆ ಚಿತ್ರಕಲೆಯ ಬಗ್ಗೆ ಡಾ. ಎಸ್. ಸಿ. ಪಾಟೀಲ ಅವರು ಈ ಪುಸ್ತಕದಲ್ಲಿ ಸವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಜನಪದ ಮೂಲವಾದ ಹಚ್ಚೆ ಕಲೆಯು ತನ್ನದೇ ಆದ ಇತಿಹಾಸವನ್ನು ಹೊಂದಿರುವ ಈ ಕೃತಿಯು ೨೦೦೪ರಲ್ಲಿ ಮುದ್ರಣಗೊಂಡಿದೆ. ಹಚ್ಚೆ ಚಿತ್ರಕಲೆಯ ಪ್ರಾಚೀನತೆ, ಭಾರತ ಹಾಗೂ ಕರ್ನಾಟಕದ ಹಚ್ಚೆಯ ಐತಿಹ್ಯ ಕುರಿತು ವಿವರಿಸಿದ್ದಾರೆ. ಹಚ್ಚೆಯ ಅಧ್ಯಯನದ ಬಗ್ಗೆ, ಹಾಗೆಯೇ ಹಚ್ಚೆಯನ್ನು ಕುರಿತ ನಂಬಿಕೆಗಳು, ಹಚ್ಚೆಗೆ ಬಳಸುವ ಸಾಮಗ್ರಿಗಳು, ಅದರ ಮಸಿಯನ್ನು ತಯಾರಿಸುವ ವಿಧಾನ, ಹಚ್ಚೆ ಹಾಕುವ ವಿಧಾನ, ಅದರ ಪ್ರಾಚೀನ ಹಿನ್ನೆಲೆ, ಹಚ್ಚೆ ಹಾಕಿಸಿಕೊಂಡ ಮೇಲೆ ಅನುಸರಿಸುವ ನಿಯಮಗಳು, ಹಚ್ಚೆ ಹಾಕುವ ಜನಾಂಗಗಳು, ಹಚ್ಚೆಯ ಹಾಡು, ಹಚ್ಚೆಯ ಚಿತ್ರವಿನ್ಯಾಸದ ಬಗ್ಗೆ ಲೇಖಕರು ವಿವರವಾಗಿ ಈ ಕೃತಿಯಲ್ಲಿ ಚಿತ್ರಗಳೊಂದಿಗೆ ವಿವರಿಸಿದ್ದಾರೆ[೧೧೧].

ಯಕ್ಷಗಾನ ಮತ್ತು ಚಿತ್ರಕಲೆ[೧೧೨] : ಕಲಾವಿದ ಉಪಾಧ್ಯಾಯ ಮಾಡುಬೆಳ್ಳಿಯವರ ಮತ್ತೊಂದು ಪುಸ್ತಕ ಇದಾಗಿದ್ದು, ೨೦೦೪ರಲ್ಲಿ ಮುದ್ರಣಗೊಂಡ ಈ ಕೃತಿಯಲ್ಲಿ ಯಕ್ಷಗಾನದ ವಿಧಗಳು, ಯಕ್ಷಗಾನದ ಅವಯವಗಳು, ಯಕ್ಷಗಾನ ಸಾಹಿತ್ಯ, ಭಾಗವತಿಕೆ, ರಂಗ ಸಿದ್ಧತೆ, ಯಕ್ಷಗಾನ ಚೌಕಿಕಲೆ ಮತ್ತುಬಣ್ಣಗಾರಿಕೆ ಹಾಗೂ ವೇಷಭೂಷಣ, ಶೃಂಗಾರಗಳ ಬಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ, ವರ್ಣಚಿತ್ರಗಳು ಮತ್ತು ಕಪ್ಪು ಬಿಳುಪಿನ ಚಿತ್ರಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ[೧೧೩].

ಚಿತ್ರಕಲಾ ದರ್ಪಣ[೧೧೪] : ನಾಡಿನ ಹಿರಿಯ ಚಿತ್ರಕಲಾವಿದರಾದ ನಾಡೋಜ ಡಾ. ವಿ. ಟಿ. ಕಾಳೆಯವರು ಬರೆದ ಈ ಕೃತಿಯು ೧೯೯೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ. ಈ ಪುಸ್ತಕವು ಚಿತ್ರಕಲೆಯ ಬಗ್ಗೆ ಸ್ಥೂಲವಾದ ವಿವರಣೆ ಕೊಡುತ್ತದೆ. ಕಲೆ ಎಂದರೇನು? ಇತಿಹಾಸಪೂರ್ವ ಕಾಲದ ಕಲೆ, ಪ್ರಾಚೀನ ಕಲಾ ಸಂಸ್ಕೃತಿಗಳು, ಭಾರತೀಯ ಕಲಾ ಪರಂಪರೆಗಳು, ಭಿತ್ತಿಚಿತ್ರಗಳು, ಕಿರುರೂಪ ಶೈಲಿಯ ಚಿತ್ರಗಳು, ಮುಸ್ಲಿಮ್ ಶೈಲಿ ಚಿತ್ರಗಳು, ದಕ್ಷಿಣ ಭಾರತದ ಚಿತ್ರಕಲೆ, ವಿಜಯನಗರ, ಮೈಸೂರು, ನಾಯಕ ಶೈಲಿಯ ಚಿತ್ರಕಲೆ, ಪಾಶ್ಚಾತ್ಯ ಕಲಾಸಂಪ್ರದಾಯಗಳು, ಪುನರುಜ್ಜೀವನ ಕಾಲದ ಕಲೆ, ಬಾರೋಕ್ ಕಲೆ, ರೋಕೋಕೋ ಕಲೆ, ರಮ್ಯ ಶೈಲಿ, ಬ್ರಿಟಿಷ್ ಕಲೆ, ಜಪಾನೀ ಚಿತ್ರಕಲೆ, ಅಮೇರಿಕ ಕಲೆ, ಆಧುನಿಕ ಕಲಾ ಪಂಥಗಳು, ಬೆಜೆಂಟೈನಾ ಕಲೆ, ಆಫ್ರಿಕನ್ ಕಲೆ, ಗೋಥಿಕ್ ಕಲೆ, ಜರ್ಮನ್ ಕಲೆ, ಭಾರತೀಯ ಕಲೆಯ ಪ್ರಮುಖ ಕಲಾಕೃತಿಗಳು,

---

೧೧೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೨೪

೧೧೨. ಉಪಾಧ್ಯಾಯ ಮೂಡುಬೆಳ್ಳಿ : ಯಕ್ಷಗಾನ ಮತ್ತು ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪

೧೧೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೧೩೪

೧೧೪. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

ವರ್ಣಗಳು ಮತ್ತು ವರ್ಣಚಿತ್ರಣ ವಿಧಾನಗಳು ಹೀಗೆ ಹಲವಾರು ಅಂಶಗಳನ್ನು ಸ್ಥೂಲವಾಗಿ ಈ ಕೃತಿಯಲ್ಲಿ ಚರ್ಚಿಸಲಾಗಿದೆ[೧೧೫].

ಇನ್‌ಸ್ಟಾಲೇಷನ್ ಕಲಾಪ್ರಪಂಚ[೧೧೬] : ನಾಡಿನ ಹಿರಿಯ ಕಲಾಸಾಹಿತಿಯಾದ ಕೆ.ವಿ. ಸುಬ್ರಹ್ಮಣ್ಯಂ ಅವರು ಈ ಪುಸ್ತಕವನ್ನು ೨೦೦೮ರಲ್ಲಿ ಬರೆದಿದ್ದು, ಇನ್‌ಸ್ಟಾಲೇಷನ್(ಪ್ರತಿಷ್ಠಾಪನ ಕೃತಿಯ) ಕುರಿತು, ಇಲ್ಲಿ ಹಿಂದೆ-ಮುಂದೆ ವೀಕ್ಷಕರು ಅಭಿವ್ಯಕ್ತಿಯ ಅವಿಭಾಜ್ಯ ಅಂಗವಾಗಿ, ಕೆಲವು ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು ಮತ್ತು ಇನ್‌ಸ್ಟಾಲೇಷನ್ ಕಲಾ ಪ್ರದರ್ಶನಗಳ ಆಯ್ದ ಹೇಳಿಕೆಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ವಿವರವಾಗಿ ಪರಿಚಯಿಸಿದ್ದಾರೆ. ಕಪ್ಪು ಬಿಳುಪಿನ ಮತ್ತು ವರ್ಣರಂಜಿತ ಇನ್‌ಸ್ಟಾಲೇಷನ್ ಕಲಾಕೃತಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ[೧೧೭].

ಬಾರೋಕ್ ಕಲೆ[೧೧೮] : ೧೯೮೭ರಲ್ಲಿ ಡಾ. ಎಸ್. ಸಿ. ಪಾಟೀಲರು ಬರೆದ ಈ ಕೃತಿಯನ್ನು ೨೦೦೯ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಮರು ಮುದ್ರಣ ಮಾಡಿದೆ. ಪಾಶ್ಚಾತ್ಯ ಕಲಾ ರಂಗದಲ್ಲಿ ಕ್ರಿ.ಶ. ೧೬ನೇ ಶತಮಾನದಲ್ಲಿ ಹುಟ್ಟಿಕೊಂಡು ಮುಂದಿನ ಮೂರು ಶತಮಾನಗಳ ಕಾಲ ವೈಭವದಿಂದ ಮೆರೆದ ಬಾರೋಕ್ ಕಲೆಯನ್ನು ಕುರಿತು ಸಂಶೋಧನಾತ್ಮಕವಾಗಿ ಈ ಕೃತಿ ರಚಿತಗೊಂಡಿದೆ. ಬಾರೋಕ್ ಕಲೆಯ ಹುಟ್ಟು, ಬೆಳವಣಿಗೆ, ಬಾರೋಕ್ ವಾಸ್ತುಕಲೆ, ಶಿಲ್ಪಕಲೆ, ಬಾರೋಕ್ ಚಿತ್ರಕಲೆ, ಬಾರೋಕ್ ಶೈಲಿಯ ಕಲಾವಿದರು ಮತ್ತು ಅವರ ಕಲಾಕೃತಿಗಳ ವಿಶ್ಲೇಷಣೆ ಹೀಗೆ ಬಾರೋಕ್ ಕಲಾಪ್ರಕಾರವನ್ನು ಕುರಿತ ಅತ್ಯಂತ ಮಹತ್ವದ ಅಂಶಗಳು ಇಲ್ಲಿ ಚರ್ಚಿತಗೊಂಡಿವೆ. ಕಪ್ಪು ಬಿಳುಪು ಮತ್ತು ಹದಿನಾರು ಪುಟಗಳ ವರ್ಣರಂಜಿತ ಕಲಾಕೃತಿಗಳ ಛಾಯಾಚಿತ್ರಗಳಿವೆ[೧೧೯].

ದೃಶ್ಯಕಲಾ ವಿಮರ್ಶೆ[೧೨೦] : ಎಚ್. ಶಂಕರಪ್ಪ ಅವರ ಈ ಕೃತಿಯು ೨೦೦೦ರಲ್ಲಿ ಮುದ್ರಣಗೊಂಡಿದೆ. ಒಟ್ಟು ೨೨ ಲೇಖನಗಳನ್ನು ಹೊಂದಿರುವ ಈ ಪುಸ್ತಕ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಹೊರಬಂದಿದೆ. ಇಲ್ಲಿನ ಲೇಖನಗಳನ್ನು ಹಿರೇಮಠ ೨, ವೀರಣ್ಣ ದಂಡೆ ೧, ಎಚ್.ವಿ. ಮಂತಕಟ್ಟಿ ೧, ವಿಜಯಾನಂದ ಬಿ. ಕಾಲವಾಡ ೩, ಚಿ.ಸು. ಕೃಷ್ಣಸೆಟ್ಟಿ ೩, ಕುಪ್ಪಣ್ಣ ಕಂದಗಲ್ ೨, ಉಪಾಧ್ಯಾಯ ಮೂಡುಬೆಳ್ಳೆ ೨, ಕೆ.ವಿ. ಸುಬ್ರಹ್ಮಣ್ಯ

---

೧೧೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೨೮

೧೧೬. ಕೆ. ವಿ. ಸುಬ್ರಹ್ಮಣ್ಯಂ : ಇನ್‌ಸ್ಟಾಲೇಷನ್ ಕಲಾಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮

೧೧೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೧೦

೧೧೮. ಡಾ. ಎಸ್. ಸಿ. ಪಾಟೀಲ : ಬಾರೋಕ್ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೯

೧೧೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೩೨

೧೨೦. ಎಚ್. ಶಂಕರಪ್ಪ : ದೃಶ್ಯಕಲಾ ವಿಮರ್ಶೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦

೨, ಪಿ. ಚಂದ್ರಿಕಾ ೧ ಮುಂತಾದವರ ಲೇಖನಗಳು ಕನ್ನಡದಲ್ಲಿದ್ದರೆ, ಎಚ್.ಎ. ಅನಲ್‌ಕುಮಾರ್-ವೀಣಾ ಕೋಟೀನ್, ತಿಮ್ಮಯ್ಯರ ತಲಾ ಒಂದೊಂದು ಲೇಖನ, ಚಂದ್ರಾನಂದಿನ ತುಷಾರ್ ಅವರ ಎರಡು ಇಂಗ್ಲಿಷ್ ಲೇಖನಗಳಿವೆ. ಸಮಕಾಲೀನ ಕಲೆಯ ಕುರಿತಾದ ಉತ್ತಮ ಲೇಖನಗಳ ಸಂಗ್ರಹದ ಪುಸ್ತಕ ಇದಾಗಿದೆ[೨೧].

ನೋಟ ಪಲ್ಲಟ[೨೨] : ಎಚ್. ಎ. ಅನಿಲಕುಮಾರ್ ಅವರ ಈ ಗ್ರಂಥವು ೨೦೦೦ರಲ್ಲಿ ಪ್ರಕಟಗೊಂಡಿದೆ. ಈ ಗ್ರಂಥದಲ್ಲಿ ೧೦ ಬಿಡಿ ಲೇಖನಗಳಿವೆ. ಸಮಕಾಲೀನ ಬದುಕಿನ ಚಿತ್ರಣಕ್ಕೆ ಬಳಸುವ ಪರಿಭಾಷೆ ಹೊಸದಾಗಿದೆ. ಅಲ್ಲದೆ ಅಂತರ್‌ಶಿಸ್ತೀಯ ಅಧ್ಯಯನದಿಂದ ಲೇಖಕರಿಗೆ ಸಂಧಿತವಾದ ಅನೇಕ ಹೊಸ ವಿಚಾರಗಳು ಈ ಬರಹಗಳ ಮೂಲಕ ವ್ಯಕ್ತವಾಗಿವೆ[೧೨೩].

ಕರ್ನಾಟಕದ ಭಿತ್ತಿಚಿತ್ರಗಳು (ಚಿತ್ರ ಸಂಪುಟ – ೧)[೨೪] : ಎಸ್. ಎನ್. ಚಂದ್ರಶೇಖರ್ ಅವರ ಸಂಪಾದನೆಯಲ್ಲಿ ಈ ಕೃತಿಯು ಹೊರಬಂದಿದ್ದು, ಈ ಸಂಪುಟದಲ್ಲಿ ಸೀಬಿಯ ಲಕ್ಷ್ಮೀನರಸಿಂಹ ದೇವಾಲಯ, ಸಿರಾ, ರೇವಣ್ಣಸಿದ್ದೇಶ್ವರ ಮಂದಿರದ ದೃಶ್ಯ, ಜೈನಮಠ, ಶ್ರವಣಬೆಳಗೊಳ, ಮೈಸೂರು, ಗೋಪಿಕೆಯರ ಮಧ್ಯೆ ಕೃಷ್ಣ ವರಾಹಸ್ವಾಮಿ ದೇವಾಲಯದ ಭಿತ್ತಿಚಿತ್ರಗಳ ಸಂಗ್ರಹ ಇರುವ ಚಿತ್ರ ಸಂಪುಟವಿದಾಗಿದೆ. ಚಿತ್ರಗಳೊಂದಿಗೆ ಸ್ಥೂಲಪರಿಚಯವಿದೆ[೧೨೫].

ಕಲಾ (ವೈಚಾರಿಕ ಸಾಹಿತ್ಯ – ಚಿತ್ರ ಸಂಪುಟ ೧)[೧೨೬] : ಡಾ. ಎಂ. ಎಸ್. ಮೂರ್ತಿಯವರ ಪ್ರಧಾನ ಸಂಪಾದನೆಯಲ್ಲಿ ಹಾಗೂ ರಾಜು ಮಳವಳ್ಳಿಯವರ ಸಂಪಾದನೆಯಲ್ಲಿ ಈ ಕೃತಿಯು ಪ್ರಕಟಗೊಂಡಿದೆ. ೨೦೧೬ರಲ್ಲಿ ಈ ಗ್ರಂಥವು ಮುದ್ರಣಗೊಂಡಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ೫೦ರ ಸುವರ್ಣ ಸಂಭ್ರಮದ ಅವಧಿಯಲ್ಲಿ ಅನೇಕ ಕಲಾಶಿಬಿರ, ಕಲಾಕಮ್ಮಟ, ವಿಚಾರ ಸಂಕಿರಣ ಮುಂತಾದ ಹಲವು ಕಲಾಚಟುವಟಿಕೆಗಳನ್ನು ಹಮ್ಮಿಕೊಂಡಿತ್ತು. ಪ್ರಸ್ತುತ ಕೃತಿಯ ಅಕಾಡೆಮಿಯು ಮಡಿಕೇರಿಯಲ್ಲಿ ನಡೆದ "ದೃಶ್ಯಕಲೆಯಲ್ಲಿ ರೇಖೆಗಳ ಮಹತ್ವ" ಎಂಬ ಅಪರೂಪದ

---

೧೨೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೪

೧೨೨. ಎಚ್. ಎ. ಅನಲ್‌ಕುಮಾರ್ : ನೋಟ ಪಲ್ಲಟ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦

೧೨೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೬

೧೨೪. ಎಸ್. ಎನ್. ಚಂದ್ರಶೇಖರ್ (ಸಂ.) : ಕರ್ನಾಟಕದ ಭಿತ್ತಿಚಿತ್ರಗಳು (ಚಿತ್ರ ಸಂಪುಟ–೧), ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೨೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೩೧

೧೨೬ ಡಾ. ಎಂ. ಎಸ್. ಮೂರ್ತಿ(ಪ್ರಸಂ.), ರಾಜು ಮಳವಳ್ಳಿ (ಸಂ.): ಕಲಾ (ವೈಚಾರಿಕ ಸಾಹಿತ್ಯ–ಚಿತ್ರಸಂಪುಟ), ಕ.ಲ.ಕ.ಅ. ಬೆಂಗಳೂರು. ೨೦೧೬

ವಿಷಯ ಕುರಿತು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಕಲಾವಿದರು, ಸಂಶೋಧಕರು ಮತ್ತು ಕಲಾಚರಿತ್ರಕಾರರು ಮಂಡಿಸಿದ ಪ್ರಬಂಧಗಳು ಇಲ್ಲಿವೆ. ಇದರೊಂದಿಗೆ ವಿಚಾರ ಸಂಕಿರಣದಲ್ಲಿ 'ಸಂವಾದ'ಕ್ಕೆ ಆಹ್ವಾನಿತ ಕಲಾವಿದರ ಅಭಿಪ್ರಾಯಗಳು, ಕೆಲವು ಪ್ರಾತಿನಿಧಿಕ ರೇಖಾಚಿತ್ರಗಳು ಚರಿತ್ರೆಯ ದಾಖಲೆ ದೃಷ್ಟಿಯಿಂದ ಇಲ್ಲಿ ಪ್ರಕಟಿಸಲಾಗಿದೆ. ಕೃತಿಯ ಅನುಕ್ರಮಣಿಕೆಯಲ್ಲಿ ಡಾ. ಆರ್. ಎಚ್. ಕುಲಕರ್ಣಿಯವರ 'ಕರ್ನಾಟಕ ಪಾರಂಪರಿಕ ಚಿತ್ರಕಲೆಯಲ್ಲಿ ರೇಖೆಗಳ ಸ್ಥಾನ', ಕೆ. ವಿ. ಸುಬ್ರಹ್ಮಣ್ಯಂ ಅವರ 'ದೃಶ್ಯಕಲೆ ಮತ್ತು ರೇಖಾಚಿತ್ರದ ಆಯಾಮಗಳು', ರಾಜಶೇಖರ ಬಿಲ್ವಪತ್ರಿ ಅವರ 'ರೇಖಾಚಿತ್ರದ ಸೊಗಸು ಮತ್ತು ಮೌಲ್ಯ', ಕಿರಣ್‌ಕುಮಾರ್ ಮಾಡಾಳು ಅವರ 'ಆಧುನಿಕ ಕಲಾ ಸಂದರ್ಭದಲ್ಲಿ ರೇಖಾಚಿತ್ರಗಳ ಪ್ರಯೋಗಗಳು', ಪುರುಷೋತ್ತಮ ಅಡ್ವೆ ಅವರ 'ಕರಾವಳಿಯ ಸಾಂಪ್ರದಾಯಿಕ ಕಲೆಗಳಲ್ಲಿ ರೇಖೆಗಳ ಮಹತ್ವ', ನಳಿನ ಮಾಲವಿಯಾ ಅವರ *'Linear Progressions : Tracing the Line in Karnataka'* ಮುಂತಾದ ಲೇಖನಗಳು ಇಲ್ಲಿ ಸಂಗ್ರಹಗೊಂಡಿವೆ. ಒಟ್ಟಾರೆ ರೇಖೆಯ ಮಹತ್ವವನ್ನು ತಿಳಿಸಿಕೊಡುವ ಮತ್ತು ಹಲವು ಹಿರಿಯ ಕಲಾವಿದರುಗಳ ರೇಖಾಚಿತ್ರಗಳನ್ನು ದಾಖಲೆ ಮಾಡಲಾಗಿದೆ[೧೨೭].

ಕಲಾಕೋಶ[೧೨೮] : ಎನ್. ಮರಿಶಾಮಾಚಾರ್, ಡಾ. ಅ.ಲ. ನರಸಿಂಹನ್, ವಿ. ಟಿ. ಕಾಳೆ ಹಾಗೂ ಡಾ. ಬಿ. ಕೆ. ಹಿರೇಮಠ ಮುಂತಾದವರ ಸಂಪಾದನೆಯಲ್ಲಿ ೧೯೯೪ರಲ್ಲಿ ಈ ಗ್ರಂಥವು ಮುದ್ರಣಗೊಂಡಿದೆ. ಕನ್ನಡದಲ್ಲಿ ಕೋಶಗಳ ರಚನೆ ಅಪರೂಪವೇನಲ್ಲ. ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದಿಂದ ವಿಶ್ವಕೋಶ ಸಂಪುಟಗಳು ಹಾಗೂ ವಿಷಯ ವಿಶ್ವಕೋಶ, ಸಾಹಿತ್ಯ ಪರಿಷತ್ತಿನಿಂದ ಜಾನಪದ ವಿಶ್ವಕೋಶ, ನಿರಂಜನರ ಜ್ಞಾನಗಂಗೋತ್ರಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಕಿರಿಯರ ಕೋಶಗಳಲ್ಲದೇ ಇತ್ಯಾದಿ ಕೋಶಗಳು ಹೊರಬಂದಿದೆ. ಇವುಗಳಲ್ಲೆಲ್ಲ ಪ್ರಾಸಂಗಿಕವಾಗಿ ಚಿತ್ರಕಲೆ, ಕಲಾವಿದರ ಬಗ್ಗೆಯೂ ವಿವರಗಳಿವೆ. ಆದರೆ ಕನ್ನಡದಲ್ಲಿ ಶಿಲ್ಪಚಿತ್ರಕಲೆಗೆ ಮೀಸಲಾದ ಈ ಕಲಾಕೋಶದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ವಿವಿಧ ಪ್ರದೇಶದ ಕಲೆಗಳು, ಆಧುನಿಕ ಪಂಥ, ಕಲಾಪರಿಕರಗಗಳು, ಕಲಾ ಮಾಧ್ಯಮಗಳು, ವರ್ಣ ಶಿಲ್ಪ, ವಾಸ್ತುಶಿಲ್ಪ, ಶಿಲ್ಪೋಪಕರಣಗಳು, ಗ್ರಾಫಿಕ್, ಸೌಂದರ್ಯಶಾಸ್ತ್ರ, ಕಲಾವಿಮರ್ಶೆ, ಶಾಸ್ತ್ರಗ್ರಂಥಗಳು, ಚಿತ್ರಕಲೆಯ ವ್ಯಾಕರಣ, ಕಲಾಪ್ರಕಾರಗಳು ಅಲ್ಲದೇ ಇತರ ಕಲೆಗಳ ವರ್ಗೀಕರಣಗಳಿಂದ ಕೂಡಿದ ಸುಮಾರು ಮುನ್ನೂರು ನಮೂದುಗಳನ್ನು ಆರಿಸಿ, ಅಕಾರಾದಿಯಾಗಿ ಜೋಡಿಸಿ ಇಲ್ಲಿ ಸಂಕ್ಷಿಪ್ತ ನೋಟವನ್ನು ನೀಡಲಾಗಿದೆ[೧೨೯].

---

೧೨೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೨೫೧

೧೨೮. ಎನ್.ಮರಿಶಾಮಾಚಾರ್, ಡಾ.ಅ.ಲ. ನರಸಿಂಹನ್, ವಿ.ಟಿ.ಕಾಳೆ, ಡಾ.ಬಿ.ಕೆ. ಹಿರೇಮಠ (ಸಂ.) ಕಲಾಕೋಶ, ಕ.ಲ.ಕ.ಅ. ಬೆಂಗಳೂರು. ೨೦೧೬

೧೨೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೨೦

ಚಿತ್ರಕಲಾ ಪ್ರಪಂಚ[೧೩೦] : ಅ. ಲ. ನರಸಿಂಹನ್ ಮತ್ತು ಎನ್. ಮರಿಶಾಮಾಚಾರ್ ಅವರ ಸಂಪಾದನೆಯಲ್ಲಿ ೧೯೯೩ರಲ್ಲಿ ಹೊರಬಂದ ಈ ಕೃತಿಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ತೊಡಗಿ ನವ್ಯ ಕಲೆಯವರೆಗೆ ವಿವಿಧ ಕಾಲಘಟ್ಟಗಳಿಗೆ ಅನುಗುಣವಾಗಿ ಮತ್ತು ವಿವಿಧ ಕವಲುಗಳಾಗಿ ಬೆಳೆದ ಚಿತ್ರಕಲೆಯನ್ನು ಸ್ಥೂಲವಾಗಿ ಪರಿಚಯಿಸುವ ಲೇಖನಗಳಿವೆ. ಪ್ರಾಚೀನ ಚಿತ್ರಕಲೆ, ಚಿತ್ರದುರ್ಗದ ಪ್ರಾಗೈತಿಹಾಸಿಕ ಕಾಲದ ಚಿತ್ರಗಳು, ಸಿಬಿಯ ಭಿತ್ತಿಚಿತ್ರಗಳು, ಸಂಪ್ರದಾಯ ಚಿತ್ರಕಲೆ, ಭಾರತೀಯ ಚಿತ್ರಕಲೆ, ಕನ್ನಡನಾಡಿನ ಲಲಿತಕಲೆಗಳು, ಸಾಹಿತ್ಯದಲ್ಲಿ ಚಿತ್ರಕಲೆಯ ಉಲ್ಲೇಖಗಳು, ಭಾಸನಲ್ಲಿ ಚಿತ್ರಕಲೆ, ಮಾನಸೋಲ್ಲಾಸದಲ್ಲಿ ಚಿತ್ರಕಲೆ, ಪ್ರಾಚೀನ ಚಿತ್ರರಚನೆಯಲ್ಲಿ ಭಿತ್ತಿಸಿದ್ಧತೆ, ಜನಪದಶಿಲ್ಪ ಚಿತ್ರಕಲೆ, ಗಿರಿಜನರ ಚಿತ್ರಕಲೆ, ಕಲೆ ಎಂದರೇನು? ಚಿತ್ರ ಮತ್ತು ಯುದ್ಧ, ಕಲೆ ಮತ್ತು ನಗ್ನತೆ, ರಸ ಮತ್ತು ಸೌಂದರ್ಯ, ರೇಖಾಚಿತ್ರಕಲೆ, ನಿಗೂಢ ಚಿತ್ರಕಲೆ, ಸ್ವಾತಂತ್ರ್ಯಪೂರ್ವ ಚಿತ್ರಕಲೆ, ಮಕ್ಕಳಿಗೆ ಕಲಾ ಶಿಕ್ಷಣದ ಅಗತ್ಯ ಹೀಗೆ ಒಟ್ಟು ೭೦ ಲೇಖನಗಳಿವೆ. ಚಿತ್ರಕಲಾ ಅಧ್ಯಯನಕಾರರಿಗೆ ಇದೊಂದು ಉತ್ತಮ ಆಕರ ಗ್ರಂಥವಾಗಿದೆ[೧೩೧].

ರೇಖಾಚಿತ್ರ[೧೩೨] : ಬಿ.ವಿ.ಕೆ. ಶಾಸ್ತ್ರೀ ಅವರ ಈ ಕೃತಿಯು ೨೦೦೮ರಲ್ಲಿ ಮುದ್ರಣಗೊಂಡಿದೆ. ರೇಖೆ ಮಾನವ ಇತಿಹಾಸದಷ್ಟೆ ಪ್ರಾಚೀನವಾದುದು. ಗೆರೆ ರೇಖೆಯಕ್ಕು ಎಂದಿದ್ದಾನೆ ಮಂಗರಾಜ ತನ್ನ ನಿಘಂಟಿನಲ್ಲಿ. ಸಂಸ್ಕೃತದ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗೀಟು. ಅಪ್ಪ ಹಾಕಿದ ಗೆರೆ ದಾಟುವುದಿಲ್ಲ ಎಂಬ ಗಾದೆ ಇಲ್ಲವೇ? ಹಾಗೆಯೇ ಲಕ್ಷ್ಮಣ ರೇಖೆ, ಅದೃಷ್ಟ ರೇಖೆ ಎಂಬ ಪದಗಳನ್ನು ಕೇಳಿದ್ದೇವೆ. ಹೀಗೆ ರೇಖೆ ನಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಹಾಸುಹೊಕ್ಕಾಗಿದೆ. ರೇಖೆ ಹಾಗೂ ರೇಖಾಚಿತ್ರಗಳ ಚಾರಿತ್ರಿಕ ಹಿನ್ನೆಲೆ, ರೇಖಾಚಿತ್ರ ಪ್ರಾಚೀನ ಪಾಶ್ಚಾತ್ಯ. ಭಾರತದಲ್ಲಿ ಅಚ್ಚು ಚಿತ್ರಕಲೆಯ ಇತಿಹಾಸ ಮತ್ತು ಬೆಳವಣಿಗೆ, ರೇಖಾ ಚಿತ್ರಕಲೆ ಚೈನಾ ಮತ್ತು ಜಪಾನ್ ಮತ್ತು ಭಾರತದ ಸಮಕಾಲೀನ ರೇಖಾ ಚಿತ್ರಗಳ ಬಗ್ಗೆ ಅ.ಲ. ನರಸಿಂಹನ್, ಕೆ.ವಿ. ಸುಬ್ರಹ್ಮಣ್ಯ ಮತ್ತು ಪ್ರೊ. ಎಂ. ಎಚ್. ಕೃಷ್ಣಯ್ಯರವರ ಲೇಖನಗಳ ಸಂಗ್ರಹವಿದೆ[೧೩೩].

೦೩. ಕಲೆಯ ತೌಲನಿಕಕ್ಕೆ ಸಂಬಂಧಪಟ್ಟಂತೆ ಪ್ರಕಟಗೊಂಡ ಗ್ರಂಥಗಳು

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ೭ ಕೃತಿಗಳು ಕಲೆಯ ತೌಲನಿಕಕ್ಕೆ ಸಂಬಂಧಪಟ್ಟಂತೆ ಪ್ರಕಟಗೊಂಡಿದ್ದು, ಆ ಕೃತಿಗಳ ಸಂಕ್ಷಿಪ್ತ ಅವಲೋಕನ ಈ ಕೆಳಗಿನಂತೆ ಮಾಡಲಾಗಿದೆ.

---

೧೩೦. ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್ (ಸಂ.) ಚಿತ್ರಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೩

೧೩೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೩೧

೧೩೨. ಬಿ. ವಿ. ಕೆ. ಶಾಸ್ತ್ರೀ : ರೇಖಾಚಿತ್ರ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮

೧೩೩. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೫೬

೦೧. ಚಿತ್ರಕಲೆ ಮತ್ತು ಮನೋವಿಕಾಸ ೦೨. ದೃಶ್ಯಕಲೆಗಳ ಗುಣಗ್ರಹಣ

೦೩. ಚಿತ್ರಕಲೆ ಮತ್ತು ಸಂವಹನ ೦೪. ಮುಖಗಳೊಂದಿಗೆ ಮುಖಾಮುಖಿ

೦೫. ಕಲೆ ಮತ್ತು ಕಲಾನುಭವ ೦೬. ಕಲೆ ಮತ್ತು ರಸಸ್ವಾದನೆ

೦೭. ದೃಕ್-ಗ್ರಹಿಕೆ ಮತ್ತು ಚಿತ್ರಾಂಗಗಳು

ಚಿತ್ರಕಲೆ ಮತ್ತು ಮನೋವಿಕಾಸ[೧೩೪] : ಡಾ. ಸಿ. ಆರ್. ಚಂದ್ರಶೇಖರ್ ಅವರು ಈ ಕೃತಿಯನ್ನು ಬರೆದಿದ್ದು, ೧೯೯೫ರಲ್ಲಿ ಈ ಚಿಕ್ಕ ಪುಸ್ತಿಕೆಯು ಮುದ್ರಣಗೊಂಡಿದೆ. ಚಿತ್ರಕಲೆ ಮಾನವನ ಮನಸ್ಸಿನ ವಿಕಾಸದೊಂದಿಗೆ ಬೆಳೆಯುತ್ತ ಬೇರೆ ಬೇರೆ ಹಂತಗಳನ್ನು ಪಡೆದುಕೊಳ್ಳುತ್ತದೆ. ಇದನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ಡಾ. ಸಿ.ಆರ್. ಚಂದ್ರಶೇಖರ್ ಅವರು ಸ್ಥೂಲವಾಗಿ ಹೇಳಿದ್ದಾರೆ. ಮನಸ್ಸು ಎಂದರೇನು? ಇದ್, ಈಗೋ, ಸೂಪರ್ ಇಗೋ, ಮಿದುಳಿನ ವಿಕಾಸ, ಕಲಾ ಸಾಮರ್ಥ್ಯ ಮತ್ತು ಅದರ ಬೆಳವಣಿಗೆ, ಚಿತ್ರಗಳ ಮೂಲಕ ಕಲಿಕೆ, ಕಲಾ ಚಿಕಿತ್ಸೆ, ಕಲೆಯಿಂದ ಮನೋವಿಕಾಸ, ಮಾನಸಿಕ ಆರೋಗ್ಯ ಇಂತಹ ವಿಚಾರಗಳು ಚರ್ಚಿತಗೊಂಡಿವೆ[೧೩೫].

ದೃಶ್ಯಕಲೆಗಳ ಗುಣಗ್ರಹಣ[೧೩೬] : ಡಾ. ಅ. ಲ. ನರಸಿಂಹನ್ ಅವರ ಮತ್ತೊಂದು ಕೃತಿ ಇದಾಗಿದ್ದು, ೧೯೯೫ರಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ದೃಶ್ಯಕಲೆಗಳಲ್ಲಿ ಲಲಿತಕಲೆಗಳ ರಚನೆ, ಆಕಾರ, ಬಣ್ಣ ಸಂಯೋಜನೆ, ಭಿತ್ತಿ ಫಲಕ, ಆಧುನಿಕ ಕಲೆಯಲ್ಲಿ ಬಣ್ಣ, ಕುಂಚದ ಕೆಲಸ, ಆದಿಮ ಚಿತ್ರಗಳು, ಮಧ್ಯಯುಗದ ಚಿತ್ರಗಳು, ಧರ್ಮಾಧಾರಿತ ಕೃತಿಗಳು, ರಸಭಾವಗಳು, ಭಾರತೀಯ ವಿವಿಧ ಶೈಲಿಯ ಚಿತ್ರಕಲೆಗಳ ಬಗ್ಗೆ, ಸಂಕೇತಗಳ ಬಗ್ಗೆ, ಶಿಲ್ಪಕಲೆಯ, ಮಾಧ್ಯಮ, ಕೃತಿಗಳ ರಚನೆಗಳ ಬಗ್ಗೆ ಕಿರುಪರಿಚಯವನ್ನು ಈ ಪುಸ್ತಕ ನೀಡುತ್ತದೆ. ೭ ಕಲಾ ಕೃತಿಗಳ ಛಾಯಾಚಿತ್ರಗಳನ್ನು ಲೇಖಕರು ಅಳವಡಿಸಿದ್ದಾರೆ[೧೩೭].

ಚಿತ್ರಕಲೆ ಮತ್ತು ಸಂವಹನ (ಅನ್ವಯ ಕಲೆಯನ್ನು ಕುರಿತಂತೆ)[೧೩೮] : ಈ ಪುಸ್ತಕವನ್ನು ಜೆ. ಮಲ್ಲಿಕಾರ್ಜುನ ಅವರು ಬರೆದಿದ್ದು, ೧೯೯೬ರಲ್ಲಿ ಮುದ್ರಣಗೊಂಡಿದೆ. ಈ ಪುಸ್ತಕದಲ್ಲಿ

---

೧೩೪. ಡಾ. ಸಿ. ಆರ್. ಚಂದ್ರಶೇಖರ್ : ಚಿತ್ರಕಲೆ ಮತ್ತು ಮನೋವಿಕಾಸ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

೧೩೫. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೬೩

೧೩೬. ಡಾ. ಅ.ಲ. ನರಸಿಂಹನ್ : ದೃಶ್ಯಕಲೆಗಳ ಗುಣಗ್ರಹಣ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫

೧೩೭. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೪೪

೧೩೮. ಜೆ. ಮಲ್ಲಿಕಾರ್ಜುನ : ಚಿತ್ರಕಲೆ ಮತ್ತು ಸಂವಹನ (ಅನ್ವಯ ಕಲೆಯನ್ನು ಕುರಿತಂತೆ), ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೬

ಚಿತ್ರಕಲೆಯ ಶ್ರೇಷ್ಠತೆಯನ್ನು ಕಾಣಬಹುದಾಗಿದೆ. ಪ್ರತಿಯೊಬ್ಬರಿಗೂ ಶಾಲೆಗಳಲ್ಲಿ ವಸ್ತು, ಪಕ್ಷಿ, ಪ್ರಾಣಿಗಳನ್ನು ಗುರುತಿಸಲು ಚಿತ್ರಗಳು ಬೇಕು. ಭಾಷೆ–ಲಿಪಿ ಬದಲಾಗಬಹುದು, ಚಿತ್ರಗಳು ಬೇರೆ ಅರ್ಥ ನೀಡಲಾರವು. ಇದು ಚಿತ್ರಕಲೆಯ ವೈಶಿಷ್ಟ್ಯವಾಗಿದೆ. ಸಂವಹನ ಎಂದರೆ ಯಾವುದೇ ವ್ಯಕ್ತಿ ಮತ್ತೊಬ್ಬನಿಗೆ ತನ್ನ ಅನಿಸಿಕೆಯನ್ನು ಅವನಿಗೆ ಅರ್ಥವಾಗುವಂತೆ ಹೇಳುವುದು. ಇದಕ್ಕೆ ನಾವು ಗುಹಾಂತರ ಪ್ರಾಗೈತಿಹಾಸದ ಚಿತ್ರಗಳನ್ನು ಗಮನಿಸಬಹುದು. ಇವುಗಳು ಸರಿಯಾಗಿ ತಿಳಿಯುವುದಿಲ್ಲ. ಆದರೂ ಫ್ರಾನ್ಸ್ ದೇಶದ ಲ್ಯಾಸ್‌ಕ್ಸ್ ಎಂಬಲ್ಲಿ ಗುಹಾಂತರ ಚಿತ್ರಗಳ ದಾಖಲೆಗಳನ್ನು ಗುರ್ತಿಸಿದ್ದಾರೆ. ಕಪ್ಪು ಬಿಳುಪಿನ ಚಿತ್ರಗಳನ್ನು ಕಾಣಬಹುದು. ಇಲ್ಲಿ ಚಿತ್ರಕಲೆ ಹೇಗೆ ಸಂವಹನಗೊಳ್ಳುತ್ತದೆ ಎಂಬ ವಿವರಗಳಿವೆ[೧೩೯].

ಕಲೆ ಮತ್ತು ರಸಾಸ್ವಾದನೆ[೧೪೦] : ಪ್ರೊ. ಎಂ. ಎಚ್. ಕೃಷ್ಣಯ್ಯನವರು ಈ ಗ್ರಂಥವನ್ನು ೧೯೮೯ರಲ್ಲಿ ಬರೆದಿದ್ದಾರೆ. ದಿನಾಂಕ ೧೨.೧೨.೧೯೮೮ರಿಂದ ೧೬.೧೨.೧೯೮೮ರವರೆಗೆ ನಡೆದ ಕಲಾ ರಸಗ್ರಹಣ ಕಾರ್ಯಾಗಾರ ಅವಧಿಯಲ್ಲಿ ವಿದ್ವಾಂಸರು, ಕಲಾ ವಿಮರ್ಶಕರು ಮಂಡಿಸಿದ ಉಪನ್ಯಾಸಗಳನ್ನು ಇಲ್ಲಿ ಲೇಖನರೂಪದಲ್ಲಿ ಸಂಗ್ರಹಿಸಿ ಪುಸ್ತಕವನ್ನು ಹೊರತಂದಿದೆ. ೧. ಶಿಕ್ಷಣ ಕಲೆ ೨. ಕಲಾರಸಗ್ರಹಣ, ಕಮ್ಮಟ ೩. ಕಲೆ ಮಾಧ್ಯಮ ಮತ್ತು ರಸಾನುಭವ ೪. ಕಲೆ ಎಂದರೇನು? ೫. ಚಿತ್ರಕಲೆಯ ಪರಿಭಾಷೆ ಮತ್ತು ಸಾಮಗ್ರಿಗಳು ೬. ಪ್ರಾಚೀನ ಗ್ರಂಥಗಳಲ್ಲಿ ಚಿತ್ರಕಲೆ ೭. ಕರ್ನಾಟಕದಲ್ಲಿ ಚಿತ್ರಕಲೆ ೮. ಭಾರತೀಯ ಸಾಂಪ್ರದಾಯಿಕ ಶಿಲ್ಪಕಲೆ ೯. ವಿವಿಧ ಕಲೆಗಳ ನಡುವಣ ಸಂಬಂಧ ೧೦. ಕಲೆ ಮತ್ತು ಮನಃಶಾಸ್ತ್ರ ೧೧. ರಸತತ್ವ ಸೌಂದರ್ಯಪ್ರಜ್ಞೆ ೧೨. ನಾನು ಹೇಗೆ ಕಲಾವಿಮರ್ಶೆ ಮಾಡುತ್ತೇನೆ? ೧೩. ಸಂಯೋಜನೆ ಒಂದು ಟಿಪ್ಪಣಿ ಎನ್ನುವ ಹದಿಮೂರು ಲೇಖನಗಳನ್ನು ಈ ಪುಸ್ತಕವು ಒಳಗೊಂಡಿದೆ. ಹದಿನೈದು ಕಪ್ಪು ಬಿಳುಪು ಛಾಯಾ ಚಿತ್ರ, ಕಲಾಕೃತಿಗಳನ್ನು ಅಚ್ಚುಗೊಳಿಸಲಾಗಿದೆ.[೧೪೧]

ಈ ಮೇಲಿನ ಕೃತಿಗಳಲ್ಲದೇ ಅಕಾಡೆಮಿಯು ವಿಶೇಷ ಮತ್ತು ವಿಶಿಷ್ಟವಾಗಿ ತನ್ನ ಕಲಾಚಟುವಟಿಕೆಗಳನ್ನು ನಾಡಿನ ಜನತೆಗೆ ಮುಟ್ಟುವ ಹಿನ್ನೆಲೆಯಲ್ಲಿ "**ಕಲಾವಾರ್ತೆ**" ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಟಿಸುತ್ತಾ ಬರುತ್ತಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಯುವ ಕಲಾ ಚಟುವಟಿಕೆಗಳನ್ನು ವಾರ್ತಾರೂಪದಲ್ಲಿ ಪ್ರಕಟಿಸುವ ಕೆಲಸವನ್ನು ಅಕಾಡೆಮಿಯು ಮಾಡುತ್ತಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಚಟುವಟಿಕೆಗಳು ಗಣನೀಯ ಸಂಖ್ಯೆಯಲ್ಲಿ

---

೧೩೯. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು.೬೪

೧೪೦. ಪ್ರೊ. ಎಂ. ಎಚ್. ಕೃಷ್ಣಯ್ಯ : ಕಲೆ ಮತ್ತು ರಸಾಸ್ವಾದನೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೯

೧೪೧. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು. ೭೪

ಜರುಗಿವೆ. ಸುವರ್ಣ ಕರ್ನಾಟಕ ವರ್ಷಾಚರಣೆಯ ಅಂಗವಾಗಿ ಬೆಳಗಾವಿ, ಬೆಂಗಳೂರು, ಉಡುಪಿ, ಗುಲಬರ್ಗಾ, ಧಾರವಾಡ, ಕುಪ್ಪಳ್ಳಿ, ಬೀದರ, ರಾಯಚೂರ, ಕಲಾಶಿಬಿರಗಳನ್ನು ಹಮ್ಮಿಕೋಳ್ಳಲಾಗಿದೆ. 'ತಿಂಗಳ ಚಿತ್ರ' ಕಲಾಪ್ರದರ್ಶಣ ಮತ್ತು ಕಲಾಶಿಬಿರಗಳು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹಲವಾರು ಶಿಬಿರಗಳನ್ನು ಜನ ಮೆಚ್ಚುಗೆಯೊಂದಿಗೆ ನಡೆದಿವೆ. ಈ ಎಲ್ಲಾ ಮಾಹಿತಿಗಳೊಂದಿಗೆ ಬೇರೆ ಬೇರೆ ಸಂಘ-ಸಂಸ್ಥೆಗಳ ಕಲಾಚಟುವಟಿಕೆಗಳ ಮಾಹಿತಿಯನ್ನು ಕಲಾವಾರ್ತೆಯಲ್ಲಿ ಪ್ರಕಟಿಸಲಾಗಿದೆ.

ಒಟ್ಟಾರೆ ದೃಶ್ಯಕಲೆಯ ಪುಸ್ತಕ ಪ್ರಕಟಣೆಯಲ್ಲಿ ಇಡೀ ಭಾರತದ ದೇಶೀಭಾಷೆಗಳಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗಣನೀಯ ಕೆಲಸವನ್ನು ಮಾಡಿದೆ. ಅದೇ ಹಾದಿಯಲ್ಲಿ ಹಲವು ದಿಟ್ಟ ಹೆಜ್ಜೆಗಳನ್ನು ಇಡುತ್ತಾ ಸಾಗುತ್ತಿದೆ. ಕನ್ನಡದ ಹಿರಿಯ ಸಮಕಾಲೀನ ಕಲಾವಿದರನೇಕರ ಕಲೆಯ ಕುರಿತು ಪ್ರಕಟನೆಗಳು ಸಂಖ್ಯೆಯಿಂದ ಮಾತ್ರವೇ ಅಲ್ಲದೆ ಗುಣ ಮೌಲ್ಯದಿಂದಲೂ ಹೆಚ್ಚಿನದನ್ನು ಸಾಧಿಸಿರುವುದು ಸಹೃದಯರಾದ ತಮಗೆಲ್ಲಾ ಪರಿಚಿತ. ಕನ್ನಡದ ದೃಶ್ಯಕಲೆಯ ಕಲಾವಿದರೆ ಅಲ್ಲದೆ ಕಲೆ, ಅದರ ಹಲವು ಮಗ್ಗಲುಗಳ, ನೋಟ ಪಲ್ಲಟಗಳ ಕುರಿತು ಈ ಪ್ರಕಟಣೆಗಳಲ್ಲಿ ಐತಿಹಾಸಿಕತೆಯ ಜತೆ ಜತೆಗೆ ಸಮಕಾಲೀನತೆಯನ್ನೂ ಬಿಂಬಿಸಲಾಗಿದೆ. ಈ ಪ್ರಕಟಣೆಗಳು ಕಲಾವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಆಸಕ್ತ ಕಲಾ-ಭಿಮಾನಿಗಳಿಗೂ, ಕನ್ನಡ ಕಲೆಯ ಅಧ್ಯಾಯನಶೀಲರಿಗೂ ಉಪಯುಕ್ತ ಆಕರಗಳಾಗಿಯೂ ಮೂಡಿಬಂದಿವೆ.

❑❑❑


ಪಾಪ್ ಕಲೆ
ಅಬ್‌ಸ್ಟ್ರಾಕ್ಟ್ ಕಲೆ
ಇಂಪ್ರೆಶನಿಸಂ
ದೃಶ್ಯಕಲೆಗಳ ಗುಣಗ್ರಹಣ
ಗ್ರಾಫಿಕ್ ಕಲೆ
ದೃಶ್ಯಕಲೆ ಎಂದರೇನು?
ಚಿತ್ರಕಲೆ ಮತ್ತು ಸಂವಹನ
ಸಾಂಪ್ರದಾಯಿಕ ಶಿಲ್ಪಕಲೆ
ಜನಪದ ಕಲೆ
ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ಕಲಾಮಾಲಿಕೆ





ಜನಪ್ರಿಯ ದೇಶಿ ಕಲಾಮಾಲೆ

ಅಧ್ಯಾಯ : ಐದು

ಸಮಾರೋಪ

ಅಧ್ಯಾಯ : ಐದು

ಸಮಾರೋಪ

ಕರ್ನಾಟಕದ ಹಲವು ಅಜ್ಞಾತ ಕಲೆ ಮತ್ತು ಕಲಾವಿದರನ್ನು ನಾಡಿಗೆ ಪರಿಚಯಿಸಿಕೊಟ್ಟ ಕೀರ್ತಿ ನಮ್ಮ ಕರ್ನಾಟಕ ಲಲಿತಕಲಾ ಅಕಾಡೆಮಿಯದ್ದಾಗಿದೆ. ಇದರೊಂದಿಗೆ ಹಲವು ಕಲೆಗಳ ಶೋಧನೆ, ಪ್ರೋತ್ಸಾಹ ಮತ್ತು ಬೆಳವಣಿಗೆಗೆ ವಿಶೇಷವಾಗಿ ಒತ್ತು ನೀಡಿ ಜೀವಂತವಾಗಿ ಈ ಕಲೆಗಳು ಇಂದಿಗೂ ಉಳಿದಿರಲು ಅಕಾಡೆಮಿಯ ಪಾತ್ರ ಮಹತ್ವದ್ದಾಗಿದೆ. ಈ ಕಲೆಗಳೊಂದಿಗೆ ಹಲವು ಅಜ್ಞಾತ ಹಿರಿಯ ಮತ್ತು ಯುವ ಕಲಾವಿದರನ್ನು ನಾನಾ ಭಾಗಗಳಿಂದ ಆಯ್ದು ಅವರ ಕಲಾವಲಯದಲ್ಲಿ ಬೆಳವಣಿಗೆ ಹೊಂದಲು ಕೈಜೋಡಿಸಿ, ಅವರ ಕಲೆಯನ್ನು ಇಡೀ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸುವಿಕೆ ಕಾರ್ಯ ಮಾಡಿದ್ದುದು ಹೆಮ್ಮೆಯ ಸಂಗತಿ.

ಕರ್ನಾಟಕ ಸರ್ಕಾರದ ಕರ್ನಾಟಕ ಲಲಿತಕಲಾ ಅಕಾಡೆಮಿ ಕಾರ್ಯವೈಖರಿಗಳೆಲ್ಲವೂ ಕರ್ನಾಟಕದ ಕಲೆಗಳ ಮತ್ತು ಕಲಾವಿದರ ಪೋಷಣೆ, ಸಂರಕ್ಷಣೆ ಮುಂತಾದವುಗಳಲ್ಲಿ ತೊಡಗಿಸಿಕೊಂಡು ಹೊಸ ಹೊಸ ಯೋಜನೆಗಳ ಮೂಲಕ ನಾಡಿನ ಜನತೆಗೆ ನಶಿಸಿ ಹೋದ ಅನೇಕ ಕಲೆಗಳನ್ನು ಪುನಃ ಕಣ್ಮುಂದೆ ತಂದು ಅವುಗಳನ್ನು ಜೀವಂತಗೊಳಿಸಿರುವುದು ನಮ್ಮ ಮತ್ತು ಮುಂದಿನ ಪೀಳಿಗೆಗೆ ಭಾಗ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಇಂತಹ ಮಹತ್ತರ ಕಾರ್ಯಗಳನ್ನು ಹಮ್ಮಿಕೊಂಡು ಇಂದಿಗೂ ತನ್ನದೇ ಆದ ಸ್ಥಾನಮಾನವನ್ನು ಹೊಂದಿರುವ ಕರ್ನಾಟಕ ಲಲಿತಕಲಾ ಅಕಾಡೆಮಿಯ ಹುಟ್ಟು ಮತ್ತು ಬೆಳವಣಿಗೆಯ ಕುರಿತು ಪ್ರಸ್ತುತ ಸಂಪ್ರಬಂಧವು ರೂಪುಗೊಂಡಿದೆ.

ಈ ಪ್ರಬಂಧದಲ್ಲಿ ಒಟ್ಟು ಐದು ಅಧ್ಯಾಯಗಳನ್ನು ಅಧ್ಯಯನದ ಅನುಕೂಲತೆಗಾಗಿ

ವಿಂಗಿಡಿಸಿಕೊಳ್ಳಲಾಗಿದೆ. ಆ ಐದು ಅಧ್ಯಾಯಗಳಲ್ಲಿನ ವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಸಮೀಕ್ಷಿಸುವ ಕಾರ್ಯ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನದ ಕುರಿತು ಚರ್ಚಿಸಿದ್ದು, ಕರ್ನಾಟಕ ಲಲಿತಕಲಾ ಅಕಾಡೆಮಿಯ ಕುರಿತಂತೆ ಅಧ್ಯಯನ ಕೈಗೊಳ್ಳಲು ಬಹುಮುಖ್ಯವಾದ ಉದ್ದೇಶಗಳನ್ನು ನೀಡುತ್ತ, ಈ ಅಧ್ಯಯನಕ್ಕೆ ಗಟ್ಟಿಯಾದ ತಳಪಾಯವನ್ನು ಈ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಹುಟ್ಟು ಮತ್ತು ಬೆಳವಣಿಗೆಯ ಕುರಿತು ಅಧ್ಯಯನ ಮಾಡಲಾಗಿದೆ. ಇಲ್ಲಿ ಅಕಾಡೆಮಿಯ ಹುಟ್ಟು, ಅದರ ಕಾರ್ಯವ್ಯಾಪ್ತಿ, ಕಾರ್ಯವೈಖರಿ, ಪ್ರಾರಂಭದಿಂದ ಇಂದಿನವರೆಗಿನ ಅಧ್ಯಕ್ಷರು ಮತ್ತು ಸದಸ್ಯರ ಆಡಳಿತ, ಪ್ರಮುಖ ಯೋಜನೆಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಲಾಚಟುವಟಿಕೆಗಳ ಕುರಿತದ್ದಾಗಿದ್ದು, ಇಲ್ಲಿ ಪ್ರಾರಂಭದಿಂದ ಇಂದಿನವರೆಗೂ ಅಕಾಡೆಮಿಯು ಕೈಗೊಂಡ ಹಲವು ಯೋಜನೆಗಳು, ಪ್ರದರ್ಶನಗಳು, ಕಲಾಶಿಬಿರಗಳು, ಕಲಾಕಮ್ಮಟಗಳು, ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಲಾವಿದರಿಗೆ ಗುರುತಿನ ಚೀಟಿ, ಅವರಿಗೆ ವೈದ್ಯಕೀಯ ನೆರವು ಹೀಗೆ ಹತ್ತು ಹಲವು ವಿಷಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಕಟಣೆ ಬಗ್ಗೆ ಅಧ್ಯಯನ ಮಾಡಲಾಗಿದ್ದು, ಅಕಾಡೆಮಿಯಿಂದ ಪ್ರಕಟಗೊಂಡ ಕಲೆ, ಕಲಾವಿದರ ಹಾಗೂ ತೌಲನಿಕ ಅಧ್ಯಯನಗಳ ಕುರಿತ ಗ್ರಂಥಗಳನ್ನು ವಿಷಯವಾರು ವರ್ಗೀಕರಿಸಿಕೊಂಡು ಅವುಗಳನ್ನು ಅವಲೋಕನೆ ಮಾಡುವ ಕಾರ್ಯ ಇಲ್ಲಿ ಮಾಡಲಾಗಿದೆ.

ಐದನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ನಾಲ್ಕು ಅಧ್ಯಾಯಗಳಿಂದ ಹಾಗೂ ಒಟ್ಟಾರೆ ಅಧ್ಯಯನದಿಂದ ಕಂಡು ಬಂದಿರುವ ಪ್ರಮುಖ ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

ಕರ್ನಾಟಕ ಲಲಿತಕಲಾ ಅಕಾಡೆಮಿ ಸ್ಥಾಪನೆಯಾದದ್ದು ೧೯೭೭ರಲ್ಲಿ. ಕರ್ನಾಟಕ ಸಾಹಿತ್ಯ ಅಕಾಡೆಮಿ ನಂತರ ಹುಟ್ಟು ಕೊಂಡ ರಾಜ್ಯದ ಎರಡನೇಯ ಅಕಾಡೆಮಿಯೆಂಬ

ಕೀರ್ತಿ ಲಲಿತಕಲಾ ಅಕಾಡೆಮಿಯದ್ದು. ಸಾಂಸ್ಥಿಕ ರೂಪ ಇಲ್ಲದ ಎಲ್ಲ ಕಲೆಗಳಿಗೂ ಅಕಾಡೆಮಿ ಆಸರೆ ನೀಡಿದ್ದು, ಅದರ ಬಹುಮುಖಿ ಸಾಧನೆ.

ಅವಕಾಶ ವಂಚಿತ ಕಲಾವಿದರಿಗೆ ಮೊದಲ ಬಾರಿಗೆ ಅಕಾಡೆಮಿಯಹು ವಿವಿಧ ಅವಕಾಶ ನೀಡಿದ್ದು, ೧೦೦ಕ್ಕೂ ಅಧಿಕ ಕಾರ್ಯಕ್ರಮಗಳನ್ನು ಆಯೋಜಿಸಿ, ಅದರಲ್ಲಿ ವಿಶೇಷವಾಗಿ ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶಿಬಿರಗಳನ್ನು ಕೈಗೊಂಡು, ಅಜ್ಞಾತ ಕಲಾವಿದರನ್ನು ಗುರುತಿಸಿ, ಅವರ ಕಲೆಯನ್ನು ನಾಡಿನ ಜನತೆಗೆ ಪರಿಚಯಿಸಿದ ಹೆಮ್ಮೆ ಅಕಾಡೆಮಿಯದ್ದಾಗಿದೆ.

ಕಲಾಸಂಸ್ಥೆಗಳಿಗೆ ಪ್ರೋತ್ಸಾಹ, ಶಿಷ್ಯವೇತನ, ಸಾಮೂಹಿಕ ಕಲಾಪ್ರದರ್ಶನಗಳಿಗೆ ಸಹಾಯಧನ ಇತ್ಯಾದಿ ಅಕಾಡೆಮಿಯ ಪ್ರಾರಂಭದ ಚಟುವಟಿಕೆಯಾಗಿತ್ತು. ಆನಂತರ ಕಲಾವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೇರಿದಂತೆ ಕಾರ್ಯಕ್ರಮಗಳ ವ್ಯಾಪ್ತಿ ವಿಸ್ತಾರವಾಗುತ್ತಾ ಸಾಗಿದ್ದು ಸಹಜ ಮುನ್ನಡೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಸರ್ಕಾರದ ನಿಯಮಗಳನ್ವಯ ಅನೇಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಹಿರಿಯ ಕಲಾವಿದರಿಗೆ ಗೌರವ ಫೆಲೋಶಿಪ್, ಯುವ ಕಲಾವಿದರಿಗೂ ಫೆಲೋಶಿಪ್ ಗೌರವಗಳನ್ನು ನೀಡಿದ್ದು, ಅಲ್ಲದೇ ಅಧ್ಯಯನ ಮಾಡುತ್ತಿರುವ ಕಲಾವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿರುವುದು ಒಂದು ಮಹತ್ವದ ಕಾರ್ಯವಾಗಿದೆ.

ವಿಶ್ವವಿದ್ಯಾಲಯಗಳ ಪ್ರಸಾಂಗಗಳ ಜಂಟಿ ಆಶ್ರಯದಲ್ಲಿ ಕವಿ, ಕಲಾವಿದ ಹಾಗೂ ಕಲಾ ವಿಮರ್ಶಕರನ್ನು ಆಹ್ವಾನಿಸಿ, ವಿಶೇಷೋಪನ್ಯಾಸಗಳನ್ನು ಏರ್ಪಡಿಸಿ, ಕರ್ನಾಟಕದ ಕಲಾವಿದರಲ್ಲದೇ ಕರ್ನಾಟಕೇತರ ಕಲಾವಿದರ ಮತ್ತು ವಿಮರ್ಶಕರನ್ನು ಇಲ್ಲಿ ಪಾಲ್ಗೊಂಡು, ಹೊಸ ಹೊಸ ವಿಚಾರಗಳನ್ನು ವಿನಿಮಯ ಮಾಡಿಸಿಕೊಟ್ಟ ಶ್ರೇಯಸ್ಸು ಅಕಾಡೆಮಿಯದ್ದಾಗಿದೆ.

ದೇಶದ ಪ್ರತಿಷ್ಠಿತ ಕಲಾಶಿಕ್ಷಣ ಕೇಂದ್ರಗಳಾದ ಶಾಂತಿನಿಕೇತನ, ಬರೋಡ, ನವದೆಹಲಿ, ಮುಂಬೈಗಳಿಗೆ ನಮ್ಮ ಕಲಾವಿದ್ಯಾರ್ಥಿಗಳನ್ನು ಮತ್ತು ಕಲಾವಿದರುಗಳನ್ನು ಹಾಗೂ ಕಲಾವಿದ್ವಾಂಸರನ್ನು ಆರ್ಥಿಕ ನೆರವು ನೀಡಿ ಕಳುಹಿಸುವ ವಿನೂತನ ಯೋಜನೆಯನ್ನು ಅಕಾಡೆಮಿಯು ಪ್ರಾರಂಭಿಸಿದೆ.

ಬೆಂಗಳೂರು ಮಾತ್ರವಲ್ಲದೇ ರಾಜ್ಯದ ಇತರ ಕಲಾಕೇಂದ್ರಗಳಲ್ಲೂ ಕಲಾಚಟುವಟಿಕೆಗಳು ಹುರುಪಿನಿಂದ ನಡೆಯುವಂತಹ ವಾತಾವರಣವನ್ನು ಅಕಾಡೆಮಿಯು ಸೃಷ್ಟಿಸಿದೆ. ಯುವ

ಕಲಾವಿದರ ಆಶೋತ್ತರಗಳಿಗೆ ಸ್ಪಂದಿಸಿ, ಹೊಸ ಹಾದಿಯೊಂದನ್ನು ಕರ್ನಾಟಕ ಕಲಾಲೋಕಕ್ಕೆ ದೊರಕಿಸಿಕೊಟ್ಟ ಮಹತ್ವ ಅಕಾಡೆಮಿಗೆ ಸಲ್ಲುತ್ತದೆ.

ದೃಶ್ಯಕಲಾ ವಲಯವನ್ನು ಶ್ರೀಮಂತಗೊಳಿಸಿ, ಘನತೆ ಹೆಚ್ಚಿಸಿದ ಕಲಾ ಚೇತನಗಳ ಜನ್ಮಶತಮಾನೋತ್ಸವಗಳನ್ನು ಅಕಾಡೆಮಿಯು ೨೦೧೪ರಿಂದ ಆಚರಿಸುತ್ತಾ ಬಂದಿದ್ದು, ಮೂವರು ಗಣ್ಯರಿಗೆ ಪ್ರತಿಷ್ಠಿತ ಗೌರವ ಪ್ರಶಸ್ತಿಗಳನ್ನು ವಾರ್ಷಿಕ ತಲಾ ಹತ್ತು ಮಂದಿಯಂತೆ ನಲವತ್ತು ಮಂದಿ ಯುವ ಪ್ರತಿಭಾವಂತ ಕಲಾವಿದರಿಗೆ ವಾರ್ಷಿಕ ಕಲಾಪ್ರದರ್ಶನದ ಬಹುಮಾನ ವಿತರಿಸಿದೆ. ಹತ್ತು ಕಲಾವಿದರಿಗೆ 'ಸುವರ್ಣ ಸಂಭ್ರಮ'ದ ವಿಶೇಷ ಕಲಾ ಪುರಸ್ಕಾರದ ಬಹುಮಾನಗಳನ್ನು ನೀಡಿದೆ.

ಹಲವು ವರ್ಷಗಳಿಂದಲೂ ನೆನೆಗುದಿಗೆ ಬಿದ್ದು ನಿಸ್ತೇಜವಾಗಿದ್ದ ಗ್ರಾಫಿಕ್ ಕಲಾಕೇಂದ್ರವನ್ನು ಡಾ. ಎಂ. ಎಸ್. ಮೂರ್ತಿಯವರ ಅಧ್ಯಕ್ಷರ ಅವಧಿಯಲ್ಲಿ ಸಾಕಾರಗೊಂಡಿದ್ದು ವಿಶೇಷ. ಗ್ರಾಫಿಕ್ ಸ್ಟುಡಿಯೋ ಸ್ಥಾಪನೆಗಿದ್ದ ಆಡಳಿತಾತ್ಮಕ ತೊಡಕುಗಳನ್ನು ಒಂದೊಂದಾಗಿ ನಿವಾರಿಸಿ ಸತತ ಪ್ರಯತ್ನದಿಂದ ಅಧಿಕಾರಿಶಾಹಿಯನ್ನು ಬೆನ್ನತ್ತಿದ ಪರಿಣಾಮ ಗ್ರಾಫಿಕ್ ಕಲಾಕೇಂದ್ರ ನಿರ್ಮಾಣದ ಕನಸು ಈಡೇರುವಂತಾಯಿತು. ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿರುವ ಕಲಾಗ್ರಾಮದಲ್ಲಿನ ನಾಲ್ಕು ಎಕರೆಯ ವಿಶಾಲವಾದ ಜಾಗದಲ್ಲಿ ಗ್ರಾಫಿಕ್ ಸ್ಟುಡಿಯೋ ಸ್ಥಾಪನೆಯಾಗುತ್ತಿದ್ದು ಈ ಕಲಾ ಕೇಂದ್ರದ ನಿರ್ಮಾಣಕ್ಕೆ ೨೦೧೭ರ ಜುಲೈ ೩೧ ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀಮತಿ ಉಮಾಶ್ರೀ ಅವರು ಶಿಲಾನ್ಯಾಸ ನೆರವೇರಿಸುವುದರೊಂದಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸುವರ್ಣ ಸಂಭ್ರಮಕ್ಕೆ ಹೆಮ್ಮೆಯ ಗುರಿ ಮೂಡುವಂತಾಯಿತು.

ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಸುವರ್ಣಸಂಭ್ರಮದ ಆಚರಣೆ ಸಂದರ್ಭದಲ್ಲಿ ಜಾರಿಗೆ ತಂದ ಅನೇಕ ಹೊಸ ಯೋಜನೆಗಳಲ್ಲಿ ಅತಿ ಮುಖ್ಯವಾದುವುಗಳಲ್ಲಿ 'ಕಲಾಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ'ವೂ ಒಂದು. ತನ್ನ ಇತಿಹಾಸದಲ್ಲೇ ಇದೇ ಪ್ರಥಮ ಬಾರಿಗೆ ರಾಷ್ಟ್ರೀಯ ಕಲಾ ಪ್ರದರ್ಶನವನ್ನು ಆಯೋಜಿಸುವ ಮೂಲಕ ಅಕಾಡೆಮಿಯ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಬರೆಯಲಾಗಿದೆ. ಈ ನಡೆಯಿಂದ ಸುವರ್ಣ ಸಂಭ್ರಮಕ್ಕೆ ವಜ್ರದ ಹೊಳಪು ದೊರೆತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ೫೦ನೇ ವರ್ಷದ 'ಸುವರ್ಣ ಸಂಭ್ರಮ'ದ ಸಂದರ್ಭದಲ್ಲಿ ದೃಶ್ಯಕಲೆಯನ್ನು ಪುನಃಶ್ಚೇತನಗೊಳಿಸುವ ಉದ್ದೇಶದಿಂದ ರೂಪಿಸಲಾದ

ಪ್ರಮುಖ ಯೋಜನೆಗಳಲ್ಲಿ ಕಲಾಸಂಚಾರವೂ ಒಂದು. ಈ ಯೋಜನೆಯಡಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ರಾಜ್ಯದ ವಿವಿಧ ಭಾಗಗಳ ಸುಮಾರು ೫೨ ಕಲಾವಿದರನ್ನು ಆಯ್ಕೆ ಮಾಡಿ, ತಲಾ ತಂಡಕ್ಕೆ ನಾಲ್ವರು ಕಲಾವಿದರಂತೆ ವಿವಿಧ ಗುಂಪುಗಳನ್ನು ಕಲಾವಿದರ ಇಚ್ಛೆಗನು ಗುಣವಾಗಿ ವಿಂಗಡಿಸಿ, ರಾಜ್ಯದ ಹಂಪಿ, ಬೇಲೂರು, ಹಳೇಬೀಡು, ಪಟ್ಟದಕಲ್ಲು, ಅಜಂತಾ, ಎಲ್ಲೋರಾ, ಲಕ್ಕುಂಡಿ, ಲಕ್ಷ್ಮೇಶ್ವರ, ಸೋಮನಾಥಪುರ, ಐಹೊಳೆ, ನೆರೆಯ ತಮಿಳುನಾಡಿನ ಮಧುರೈ, ಉತರ್ತರ ಭಾರತದ ಖಜರಾಹೋ, ಸೂರ್ಯನಾರಾಯಣ ಟೆಂಪಲ್, ಕೈಲಾಸನಾಥ್ ಟೆಂಪಲ್ ಮತ್ತಿತರೆಡೆ ಕಳುಹಿಸಿದ್ದು, ಅಲ್ಲಿ ಪ್ರತಿ ಕಲಾವಿದರು ತಲಾ ೨೫ ರೇಖಾಚಿತ್ರಗಳನ್ನು ರಚಿಸಿಕೊಟ್ಟರು. ಚಾರಿತ್ರಿಕವಾದ 'ಕಲಾಸಂಚಾರ'ದಲ್ಲಿ ತೆರೆದುಕೊಂಡ ೨೦೦ಕ್ಕೂ ಹೆಚ್ಚು ಕಲಾಕೃತಿಗಳ ಪೈಕಿ ಕೇವಲ ಒಂದು ಸಾವಿರ ರೂಪಾಯಿಗಳಿಗೆ ಒಂದು ರೇಖಾಚಿತ್ರದಂತೆ ಮಾರಾಟ ಮಾಡಿ ಬಂದ ಹಣವನ್ನು ತಲಾ ೨೫ ಸಾವಿರ ರೂಪಾಯಿ ಗೌರವ ಧನವನ್ನು ಕಲಾವಿದರಿಗೆ ನೀಡಲಾಯಿತು. ಆ ಎಲ್ಲಾ ರೇಖಾಚಿತ್ರಗಳನ್ನು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪ್ರದರ್ಶಿಸಲಾಯಿತು.

ಆಧುನಿಕ ಕಲಾವಿದರನ್ನು ಮತ್ತೆ 'ರೇಖಾಚಿತ್ರ'ಗಳ ರಚನೆಯತ್ತ ಅಭಿಮುಖ ಮಾಡುವ ಮೂಲಕ ಕಲಾಸಮುದಾಯವನ್ನು ಹೊಸ ದಿಕ್ಕಿಗೆ ಕರೆದೊಯ್ಯುವ ಅಕಾಡೆಮಿಯ ಕಲಾ ಸಂಚಾರದ ಪ್ರಯತ್ನ ಫಲಿಸಿದ್ದು, ಈ ಯೋಜನೆಯಿಂದ ಭಾರತ ನೆಲದ ಸಂಸ್ಕೃತಿಯ ಬಗ್ಗೆ ಯುವ ಕಲಾವಿದರ ಸಮೂಹ ಆಸಕ್ತಿ, ಕುತೂಹಲ ಹೆಚ್ಚಿಸಿಕೊಂಡಿರುವುದು ದೃಶ್ಯಕಲಾ ವಲಯಕ್ಕೆ ಬಹುದೊಡ್ಡ ಲಾಭವಾಗಿದ್ದು ಮತ್ತು ಅಕಾಡೆಮಿಯ ಪ್ರಯತ್ನ ಸಾರ್ಥಕವಾಗಿದೆ.

ಮಹಾನಗರ ಮತ್ತು ಪಟ್ಟಣವಾಸಿಗಳಾಗಿರುವ ಕಲಾವಿದರಿಗೆ ಅವಕಾಶಗಳು ಹಾಗೂ ವೇದಿಕೆಗಳು ದೊರೆಯುವುದು ಸಾಮಾನ್ಯ ವಾಡಿಕೆ. ಆದರೆ, ಹಳ್ಳಿಮಕ್ಕಳ ಸ್ಥಿತಿ ಬೇರೆ. ಅವಕಾಶಗಳಿಂದ ವಂಚಿತವಾದ ಅದೆಷ್ಟೋ ಗ್ರಾಮೀಣ ಪ್ರತಿಭೆಗಳು ಕಮರಿ ಹೋಗಿರುವ ಇತಿಹಾಸವಿದೆ. ಈ ಹಿನ್ನೆಲೆಯಲ್ಲಿ ಹಳ್ಳಿಮಣ್ಣಿನ ನೈಜ ಪ್ರತಿಭೆಗಳನ್ನು ಬೆಳಕಿಗೆ ತರುವ ಹಿನ್ನೆಲೆಯಲ್ಲಿ 'ತಿಂಗಳ ಚಿತ್ರ' ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಅಕಾಡೆಮಿಯು ಹಮ್ಮಿಕೊಂಡು ಈಗಾಗಲೇ ಹಲವಾರು ತಿಂಗಳ ಚಿತ್ರಗಳನ್ನು ಯಶಸ್ವಿಯಾಗಿ ನೆರವೇರಿಸಿದೆ.

ಮಾಹಿತಿಯುಗದ ಈ ಕಾಲದಲ್ಲಿ ವೆಬ್‌ಸೈಟ್‌ಗಳು ಮಾಹಿತಿಕೋಶವಾಗಿದ್ದು ಸರ್ಕಾರದ ಯೋಜನೆಗಳು ಹೆಚ್ಚು ಜನರು ಅದರಲ್ಲೂ ಯುವಜನರನ್ನು ಮುಟ್ಟಲು ವೆಬ್‌ಸೈಟ್ ಅತ್ಯುತ್ತಮವಾದ ವಾಹಕವಾಗಿದೆ. ಆ ದೆಸೆಯಲ್ಲಿ ಅಕಾಡೆಮಿಯ ಸುವ್ಯವಸ್ಥಿತ

ವೆಬ್‌ಸೈಟ್ ರೂಪಿಸಬೇಕೆಂದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಂದಿನ ಅಧ್ಯಕ್ಷರಾದ ಡಾ. ಎಂ. ಎಸ್. ಮೂರ್ತಿ ಅವರ ಕಲ್ಪನೆಯಾಗಿತ್ತು. ಈ ಹಿಂದೆಯೇ ಲಲಿತಕಲಾ ಅಕಾಡೆಮಿಯು ವೆಬ್‌ಸೈಟ್ ಅನ್ನು ಹೊಂದಿದಾದರೂ ಅದು ಕಾಲಕಾಲಕ್ಕೆ ಅಪ್‌ಡೇಟ್ ಆಗದೇ ಹೊಸ ಮಾಹಿತಿಗಳೇ ಇಲ್ಲದಂತಾಗಿದ್ದು ನಿಷ್ಪ್ರಯೋಜಕವಾಗಿತ್ತು. ಅಕಾಡೆಮಿಯ ಸಕಲ ಚಟುವಟಿಕೆ, ಆಶಯ ಮತ್ತು ಕನಸನ್ನು ತೆರೆದಿಡಬೇಕಿದ್ದ ವೆಬ್‌ಸೈಟ್ ನಿಸ್ತೇಜವಾಗಿತ್ತು. ಇದನ್ನು ಮನಗಂಡ ಅಕಾಡೆಮಿ ಅಧ್ಯಕ್ಷರು ತಾವು ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ವೆಬ್‌ಸೈಟ್‌ಗೆ ಕಾಯಕಲ್ಪ ನೀಡಲು ನಿರ್ಧರಿಸಿ ಅದನ್ನು ಸಾಕಾರಗೊಳಿಸಿದರು. ಇದೀಗ ಲಲಿತಕಲಾ ಅಕಾಡೆಮಿಯು ಅತ್ಯಂತ ಸುಧಾರಿತ ಮತ್ತು ಪ್ರತಿದಿನವು ಹೊಸ ಹೊಸ ಮಾಹಿತಿಗಳಿಂದ ಮೈದುಂಬಿಕೊಳ್ಳುವಂತಹ ವೆಬ್‌ಸೈಟ್ (*www.lalitkalakarnataka.org*) ಹೊಂದಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಕಲಾವಿದರಿಗೆ ಗುರುತಿನ ಚೀಟಿ ವಿತರಿಸುವುದೂ ಒಂದು. ಡಾ. ಎಂ.ಎಸ್. ಮೂರ್ತಿ ನೇತೃತ್ವದ ತಂಡದ ವಿಶಿಷ್ಟ ಸಾಧನೆಗಳಲ್ಲಿ ಪ್ರಮುವಾದುದು ಗುರುತಿನ ಚೀಟಿ ವಿತರಣೆ. ಆ ಮೂಲಕ ದೇಶದಲ್ಲಿಯೇ ಮೊದಲ ಬಾರಿಗೆ ಅರ್ಹ ಕಲಾವಿದರಿಗೆ ಗುರುತಿನ ಚೀಟಿ ನೀಡಿದ ಹೆಗ್ಗಳಿಕೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಭಾಜನವಾಗಿದೆ.

ಬಡತನದಲ್ಲಿ ಅರಳಿದ ಪ್ರತಿಭೆಗಳಿಗೆ ಕಲಾಪ್ರದರ್ಶನ ಗಗನಕುಸುಮವಾಗಬಾರದು ಎಂಬ ಸದುದ್ದೇಶದಿಂದ ಕರ್ನಾಟಕ ಲಲಿತಕಲಾ ಅಕಾಡಮಿಯು 'ಪಡಸಾಲೆ' ಆರ್ಟ್ ಗ್ಯಾಲರಿಯನ್ನು ಆರಂಭಿಸಿದ್ದು, ಇದೊಂದು ಅಪೂರ್ವ ಪರಿಕಲ್ಪನೆಯಾಗಿದ್ದು ದಿನವೊಂದಕ್ಕೆ ಕೇವಲ ೧೦೦ ರೂಪಾಯಿ ಬಾಡಿಗೆಗೆ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ನೀಡುವುದು ಈ ಯೋಜನೆಯ ಹಿರಿಮೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯು ರಾಜ್ಯದ ವಿವಿಧೆಡೆ ಕಲಾಶಿಬಿರಗಳನ್ನು ಏರ್ಪಡಿಸುವುದರ ಜೊತೆಗೆ 'ದೃಶ್ಯಕಲೆ'ಯಲ್ಲಿ ಅನೇಕ ಸಾಧ್ಯತೆಗಳು ಮತ್ತು ಮಹತ್ವಗಳ ಕುರಿತು ಅನೇಕ ವಿಚಾರಸಂಕಿರಣಗಳನ್ನು ಹಮ್ಮಿಕೊಂಡಿದೆ ಮತ್ತು ಹಮ್ಮಿಕೊಳ್ಳುತ್ತಿದೆ.

ದೃಶ್ಯಕಲಾ ವಲಯದಲ್ಲಿನ ಸಾಹಿತ್ಯ ರಚನೆಯ ಪ್ರಮಾಣ ಸಾಧಾರಣವಾಗಿಯೇ ಮುಂದುವರೆದಿದ್ದು ಈ ಕಲಾಸಾಹಿತ್ಯ ರಚನೆಯನ್ನು ಹೆಚ್ಚಿಸುವ ಸಲುವಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರತಿ ವರ್ಷ ಉತ್ತಮ ಕಲಾಸಾಹಿತ್ಯವನ್ನೊಳಗೊಂಡ ಪುಸ್ತಕಕ್ಕೆ ವಾರ್ಷಿಕ ಪುಸ್ತಕ ಬಹುಮಾನವನ್ನು ನೀಡುತ್ತಾ ಬಂದಿದೆ.

ದೃಶ್ಯಕಲಾವಿದರ ಬದುಕು ಮತ್ತು ಸಾಧನೆಯನ್ನು ದಾಖಲಿಸುವ ಮಹತ್ವದ ಯೋಜನೆಯಾದ ಸಾಕ್ಷ್ಯಚಿತ್ರಗಳ ನಿರ್ಮಾಣ ಯೋಜನೆ ಡಾ. ಎಂ. ಎಸ್. ಮೂರ್ತಿಯವರ ಅವಧಿಯಲ್ಲಿ ಅನುಷ್ಠಾನಗೊಂಡಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರೂಪಿಸಿರುವ ಈ ಯೋಜನೆಯಡಿ ಆಯಾ ಅಕಾಡೆಮಿಗಳು, ಆಯಾ ಕ್ಷೇತ್ರದಲ್ಲಿನ ಸಾಧಕರ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ನೆರವಾಗಬೇಕಿದ್ದು, ಈ ಸರಣಿಯಲ್ಲಿ ಹಿರಿಯ ಕಲಾವಿದರಾದ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಕೆ.ಜಿ. ಸುಬ್ರಮಣ್ಯನ್, ಎಂ.ಬಿ. ಪಾಟೀಲ್, ಕೆ.ಟಿ. ಶಿವಪ್ರಸಾದ್, ಬಿ. ಮಾರುತಿ, ಬಿ.ವಿ.ಕೆ. ಶಾಸ್ತ್ರಿ, ಬಸವರಾಜು ಎಲ್. ಜಾನೆ ಮತ್ತು ಬಾಬುರಾವ್ ನಡೋಣಿ ಅವರನ್ನೊಳಗೊಂಡಂತೆ ಒಟ್ಟು ಏಳು ಮಂದಿ ಸಾಧಕರ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ.

ಇವುಗಳಲ್ಲದೇ ಅನಾರೋಗ್ಯದಿಂದ ಬಳಲುತ್ತಿರುವ ಕಲಾವಿದರಿಗೆ ಆರ್ಥಿಕವಾಗಿ ಸಹಾಯಕ ಮಾಡುವ ಒಂದು ಮಹತ್ವದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇಲ್ಲಿಯವರೆಗೂ ೧೨ ಮಂದಿ ಸಂತ್ರಸ್ಥ ಕಲಾವಿದರಿಗೆ ವೈದ್ಯಕೀಯ ನೆರವಿಗೆ ಕೈಜೋಡಿಸಿ, ಅಕಾಡೆಮಿ ತನ್ನ ಕರ್ತವ್ಯವನ್ನು ಸಮರ್ಥವಾಗಿ ನೆರವೇರಿಸಿದೆ.

ಅಕಾಡೆಮಿಯ ಪ್ರಕಟಣೆಗಳಲ್ಲಿ ಪ್ರಮುಖವಾಗಿ ಕೆಲವು ಕಲಾಮಾಲಿಕೆಗಳು ಹೊರತಂದಿರುವುದರ ಮೂಲಕ ಕನ್ನಡ ನಾಡಿನ ಹಲವು ಕಲೆಗಳ ಪರಿಚಯವು ಮತ್ತು ಅವುಗಳ ಮರುಜನ್ಮ ಪ್ರಾಪ್ತಿಯಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಅಕಾಡೆಮಿಯು ೨೦೦೪ರಲ್ಲಿ ಜನಪ್ರಿಯ ದೇಶಿ ಕಲಾಮಾಲೆಯನ್ನು ಆರಂಭಿಸಿ, ಅವುಗಳ ಅಡಿಯಲ್ಲಿ ಒಟ್ಟು ಹತ್ತು ಕೃತಿಗಳನ್ನು ಡಾ. ಎಸ್. ಸಿ. ಪಾಟೀಲರವರ ಸಂಪಾದನೆಯಲ್ಲಿ ಹೊರತಂದಿದ್ದು ಒಂದು ಮಹತ್ವದ ಕಾರ್ಯವಾಗಿದೆ. ಇಲ್ಲಿ ೧೦ ಕೃತಿಗಳೂ ಜನಪದ ಕಲಾಪ್ರಕಾರಗಳನ್ನು ಒಳಗೊಂಡಿದ್ದು, ಸಂಶೋಧನಾತ್ಮಕ ಹಿನ್ನೆಲೆಯಲ್ಲಿ ಈ ಎಲ್ಲ ಗ್ರಂಥಗಳು ಮೂಡಿದ್ದು, ಕಲಾವಿದ್ಯಾರ್ಥಿಗಳಿಗೆ, ಕಲಾಸಕ್ತರಿಗೆ, ಕಲಾಭಿಮಾನಿಗಳಿಗೆ ಹಾಗೂ ಇತರೆ ಕ್ಷೇತ್ರದವರಿಗೂ ಉತ್ತಮ ಕೃತಿಗಳಾಗಿವೆ.

ಒಟ್ಟಾರೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನದೇ ಆದ ಹಲವು ಜನಪ್ರಿಯ ಯೋಜನೆಗಳ, ಕಾರ್ಯಕ್ರಮಗಳ ಮೂಲಕ ಕನ್ನಡ ಮತ್ತು ಕನ್ನಡೇತರ ಕಲಾವಲಯದಲ್ಲಿನ ಹಲವು ತಜ್ಞರ, ಕಲಾವಿದರ, ಕಲಾಸಾಹಿತಿಗಳ, ಕಲಾವಿದ್ಯಾರ್ಥಿಗಳಿಗೆ ಒಂದು ಉತ್ತಮ ಅಂಕಣ ಎಂದು ಹೇಳಬಹುದು. ಪ್ರಾರಂಭದಲ್ಲಿ ಶಿಖರದ ಮಟ್ಟಕ್ಕೆ ಮುಟ್ಟಿ ಮಧ್ಯದಲ್ಲಿ ತಟಸ್ಥನಕ್ಕೆ ಬಂದು ಇದೀಗ ಮತ್ತೇ ಕೆಲವು ಅಧ್ಯಕ್ಷರ ಆಡಳಿತಕ್ಕೆ ಸಿಕ್ಕಿ ಮೊದಲಿನ ಮಟ್ಟಕ್ಕೆ

ಉನ್ನತಿಯನ್ನು ಹೊಂದಿರುವ ನಮ್ಮ ಹೆಮ್ಮೆಯ ಕರ್ನಾಟಕ ಲಲಿತಕಲಾ ಅಕಾಡೆಮಿಯ ಕುರಿತು ಅಧ್ಯಯನವಾಗಿರುವ ಈ ಪ್ರಬಂಧವು ಪ್ರಾಥಮಿಕ ಆಕರ ಸಾಮಗ್ರಿಯೆಂದರೂ ತಪ್ಪಾಗಲಾರದು. ಅಕಾಡೆಮಿಯ ಕುರಿತು ಇನ್ನೂ ಅನೇಕ ಪ್ರಬಂಧಗಳು ರಚನೆಗೊಳ್ಳುವಷ್ಟು ಅದರ ವ್ಯಾಪ್ತಿಯಿದ್ದು, ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವು ಎಂ.ಫಿಲ್ ಪ್ರಬಂಧದ ನಿಯಮಕ್ಕೊಳಪಟ್ಟು ರಚನೆ ಮಾಡಲಾಗಿದೆ.

❑❑❑

ಅನುಬಂಧ

೧. ಸಂಕ್ಷೇಪಗಳು

೨. ಗ್ರಂಥಋಣ

೩. ಮಾಹಿತಿ ನೀಡಿದ ವಕ್ತೃಗಳು

೪. ಛಾಯಾಚಿತ್ರ

ಅನುಬಂಧ - ೧

ಸಂಕ್ಷೇಪಗಳು

೦೧. ಸಂ	–	ಸಂಪಾದಕರು
೦೨. ಪ್ರ.ಸಂ	–	ಪ್ರಧಾನ ಸಂಪಾದಕರು
೦೩. ಪು.ಸಂ	–	ಪುಟ ಸಂಖ್ಯೆ
೦೪. ಕಿ.ಪ್ರ.	–	ಕಿರುಪ್ರಬಂಧ
೦೫. ಸಂ.ಪ್ರ	–	ಸಂಪ್ರಬಂಧ
೦೬. ಮ.ಪ್ರ	–	ಮಹಾಪ್ರಬಂಧ
೦೭. ಚಿ.ಸಂ.	–	ಚಿತ್ರಸಂಖ್ಯೆ
೦೮. ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೦೯. ಮ.ವಿ.ವಿ	–	ಮಂಗಳೂರು ವಿಶ್ವವಿದ್ಯಾಲಯ
೧೦. ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೧. ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨. ಕ.ವಿ.ವಿ	–	ಕರ್ನಾಟಕ ವಿಶ್ವವಿದ್ಯಾಲಯ
೧೩. ಗು.ವಿ.ವಿ	–	ಗುಲ್ಬರ್ಗಾ ವಿಶ್ವವಿದ್ಯಾಲಯ
೧೪. ಕ.ಲ.ಅ.ಬೆಂ	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೫. ಅ.ಪ್ರ	–	ಅಪ್ರಕಟಿತ
೧೬. ಪ್ರ	–	ಪ್ರಕಟಿತ

೧೭. ಯೋ.ವ – ಯೋಜನಾ ವರದಿ

೧೮. ಕ.ಸಾ.ಪ – ಕನ್ನಡ ಸಾಹಿತ್ಯ ಪರಿಷತ್

೧೯. ಕ್ರಿ.ಪೂ – ಕ್ರಿಸ್ತ ಪೂರ್ವ

೨೦. ಕ್ರಿ.ಶ. – ಕ್ರಿಸ್ತಶಕ

೨೧. ಅನು – ಅನುವಾದ

೨೨. ಪ್ರೊ – ಪ್ರೊಫೇಸರ್

❑❑❑

ಅನುಬಂಧ - ೨

ಗ್ರಂಥಋಣ

೧. ಕನ್ನಡ ಗ್ರಂಥಗಳು

೦೧.	**ಅಪ್ಪಾಸಾಹೇಬ ಬಿ. ಕಾಡಾಪುರಕರ್** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೧೧	**ಪಿ. ಬಿ. ಗವಾನಿ**
೦೨.	**ಅಬ್‌ಸ್ಟ್ರಾಕ್ಟ್ ಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	**ಆರ್. ಎ. ಶಾಂತರಾಜ್**
೦೩.	**ಆರ್. ಎಂ. ಹಡಪದ್** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭	**ಎಂ. ಎಚ್. ಕೃಷ್ಣಯ್ಯ**
೦೪.	**ಇಂಪ್ರೆಷನಿಸಂ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	**ಡಾ. ಅ.ಲ. ನರಸಿಂಹನ್**
೦೫.	**ಇನ್‌ಸ್ಟಾಲೇಷನ್ ಕಲಾಪ್ರಪಂಚ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮	**ಕೆ. ವಿ. ಸುಬ್ರಹ್ಮಣ್ಯಂ**
೦೬.	**ಎಚ್. ಎಸ್. ಇನಾಮತಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪	**ಎಲ್. ಶಿವಲಿಂಗಪ್ಪ**
೦೭.	**ಎಫ್. ಎಂ. ಸೂಫಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೮	**ಪಿ. ಆರ್. ತಿಪ್ಪೇಸ್ವಾಮಿ**

೦೮. ಎಂ. ರಾಮನರಸಯ್ಯ — ರಾಮದಾಸ ಅಡ್ಯಂತಾಯ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

೦೯. ಎಂ. ಆರ್. ಬಾಳೀಕಾಯಿ — ಸುರೇಶ ಡಿ. ಹಾಲಭಾವಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೧೦. ಎಂ.ಜೆ. ಶುದ್ಧೋದನ — ಎಚ್. ಎಂ. ಪರಮೇಶ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೧೧. ಎಂ. ಟಿ. ಭೋಪಲೆ — ಡಿ. ಎನ್. ಅಕ್ಕಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೯

೧೨. ಎಂ. ಬಿ. ಪಾಟೀಲ್ — ಬಿ.ಎಸ್. ವೆಂಕಟಲಕ್ಷ್ಮೀ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

೧೩. ಎಂ. ಬಿ. ಲೋಹಾರ್ — ಡಾ. ಶಿವಾನಂದ ಎಚ್. ಬಂಟನೂರು
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೧೨

೧೪. ಎಸ್. ಕಾಳಪ್ಪ — ಎಲ್. ಶಿವಲಿಂಗಪ್ಪ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೧೫. ಎಸ್. ಜಿ. ವಾಸುದೇವ — ಕೆ. ವಿ. ಸುಬ್ರಹ್ಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೧

೧೬. ಎಸ್. ಎಂ. ಪಂಡಿತ್ — ವಿ. ಟಿ. ಕಾಳೆ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೬

೧೭. ಎಸ್. ಎಸ್. ಕುಕ್ಕೆ — ವಿ. ಟಿ. ಎಸ್. ರಾವ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೭

೧೮. ಎಸ್. ಎಸ್. ಮುನೋಳಿ — ಮಮತ ಜಿ. ಸಾಗರ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೮

೧೯. **ಕರ್ನಾಟಕ ಭಿತ್ತಿಚಿತ್ರ ಪರಂಪರೆ** — **ಡಾ. ಆ.ಲ. ನರಸಿಂಹನ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೯೮

೨೦. **ಕರ್ನಾಟಕದ ಭಿತ್ತಿಚಿತ್ರಗಳು** — **ಬಿ.ವಿ.ಕೆ. ಶಾಸ್ತ್ರಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೯೮೩

೨೧. **ಕರ್ನಾಟಕದ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ** — **(ಸಂ.) ಡಾ. ಎಸ್. ಪಿ. ಪಾಟೀಲ**
ಅಪ್ರಕಟಿತ ಗ್ರಂಥ, ರಾಷ್ಟ್ರೀಯ ದೃಶ್ಯಕಲಾ
ಅಕಾಡೆಮಿ, ಧಾರವಾಡ

೨೨. **ಕಲಾಕೋಶ** — **ಪ್ರಸಂ. ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೨೩. **ಕಲಾ ಸಂಪುಟ–೧ ರಿಂದ ೬** — **(ಸಂ) ಡಾ. ಎಂ. ಎಸ್. ಮೂರ್ತಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೧೬

೨೪. **ಕಲಾ ಸಂವೇದನೆಯ ಒಳನೋಟಗಳು,** — **ಕೆ.ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು,
೧೯೯೭

೨೫. **ಕಲೆ ಮತ್ತು ರಸಸ್ವಾಧನೆ** — **ಪ್ರೊ. ಎಂ. ಎಚ್. ಕೃಷ್ಣಯ್ಯ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೨೬. **ಕಸೂತಿ ಚಿತ್ರಕಲೆ** — **ಎಂ. ಎಂ. ಜಗತಾಪ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೨೭. **ಕೆ. ಕೆ. ಹೆಬ್ಬಾರ** — **ಎನ್. ಮರಿಶಾಮಾಚಾರ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೨೮. **ಕೆ. ಕೇಶವಯ್ಯ** — **ಎಸ್. ವೆಂಕಟೇಶ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೨೯. **ಕೆ. ಟಿ. ಶಿವಪ್ರಸಾದ್** — **ಎಚ್. ಎ. ಅನಿಲ್‌ಕುಮಾರ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

೩೦. **ಗ್ರಾಫಿಕ್ ಕಲೆ** — **ರವಿಕುಮಾರ ಕಾಶಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೩೧. **ಚಿತ್ರಕಲಾ ದರ್ಪಣ** — **ವಿ. ಟಿ. ಕಾಳೆ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭

೩೨. **ಚಿತ್ರಕಲಾ ಪ್ರಪಂಚ** — **ಪ್ರಸಂ. ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೩೩. **ಚಿತ್ರಕಲೆ ಮತ್ತು ಮನೋವಿಕಾಸ** — **ಡಾ. ಸಿ. ಅರ್. ಚಂದ್ರಶೇಖರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೩೪. **ಚಿತ್ರಕಲೆ ಮತ್ತು ಸಂವಹನ** — **ಜೆ. ಮಲ್ಲಿಕಾರ್ಜುನ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೩೫. **ಚಿತ್ತಾರ ಬೊಂಬೆ ಚಿತ್ರಕಲೆ** — **ಡಾ. ಟಿ. ಗೋವಿಂದರಾಜು**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೩೬. **ಜನಪದ ಕಲೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೩೭. **ಜಿ.ವಿ. ಸುಭಾಷಿಣಿದೇವಿ** — **ಎಲ್. ಶಿವಲಿಂಗಪ್ಪ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭

೩೮. **ಜಿ. ವೈ. ಹುಬ್ಳೀಕರ್** — **ಕೋಟಿ ಕುಮಾರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೩೯. **ಜೆ. ಎಸ್. ಖಂಡೇರಾವ್** — **ಕುಪ್ಪಣ್ಣ ಕಂದಗಲ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೯

೪೦. **ಟಿ.ವಿ. ಗಣೇಶಗುಡಿ** — **ಚಂದ್ರಕಾಂತ ಕುಸನೂರು**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೧೦

೪೧.	**ಡಾ. ಬಿ.ಕೆ. ಹಿರೇಮಠ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮	**ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ**
೪೨.	**ದೃಗ್ದರ್ಶನ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೧೬	**ಡಾ. ಎಂ. ಎಸ್. ಮೂರ್ತಿ**
೪೩.	**ದೃಶ್ಯಕಲಾ ವಿಮರ್ಶೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦	**ಎಚ್. ಶಂಕರಪ್ಪ**
೪೪.	**ದೃಶ್ಯಕಲೆಗಳ ಗುಣಗ್ರಹಣ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	**ಡಾ. ಅ.ಲ. ನರಸಿಂಹನ್**
೪೫.	**ದೃಶ್ಯಧ್ಯಾನ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೧೭	**ಕೆ. ವಿ. ಸುಬ್ರಹ್ಮಣ್ಯಂ**
೪೬.	**ದೃಶ್ಯಾನುಭವ** ಅನ್ನಪೂರ್ಣ ಪ್ರಕಾಶನ, ಬೀದರ ೨೦೧೦	**ಡಾ. ಮೋಹನರಾವ್ ಪಂಚಾಳ**
೪೭.	**ದೇವಲಕುಂದ ವಾದಿರಾಜ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭	**ಎಚ್. ಎನ್. ಸುರೇಶ**
೪೮.	**ನಾಗರಾಧನೆ ಚಿತ್ರಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪	**ಉಪಾಧ್ಯಾಯ ಮೂಡುಬೆಳ್ಳೆ**
೪೯.	**ನೋಟ ಪಲ್ಲಟ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮೭	**ಎಚ್. ಎ. ಅನಿಲ್ ಕುಮಾರ್**
೫೦.	**ಪರಿಚಯ ಮಾಹಿತಿ ಸಂಗ್ರಹ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦	**(ಸಂ) ವಿ. ಜಿ. ಅಂದಾನಿ**
೫೧.	**ಪಾಪ್‌ಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	**ರವಿಕುಮಾರ ಕಾಶಿ**

೫೨.	**ಪಾಪ್ ಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭	ರವಿಕುಮಾರ ಕಾಶಿ
೫೩.	**ಪುರುಷೋತ್ತಮ ಕಾರಂತ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪	ಬಿ. ಗಣೇಶ
೫೪.	**ಪ್ರೊ. ಎಸ್. ಸಿ. ಪಾಟೀಲರ ದೃಶ್ಯಕಲಾ ಸಾಹಿತ್ಯಾವಲೋಕನ** ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ. ೨೦೧೬	ಯುವರಾಜ ಆರ್. ಎಸ್.
೫೫.	**ಫೋಟೋ ರಿಯಲಿಸಂ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	ಕೆ. ವಿ. ಸುಬ್ರಹ್ಮಣ್ಯಂ
೫೬.	**ಪೋಸ್ಟ್ ಮಾಡರ್ನಿಸಂ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	ನೇಮಿರಾಜ ಶೆಟ್ಟಿ
೫೭.	**ಬಸವರಾಜ ಹಳಿಜೋಳ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೦	ಆರ್. ಜಿ. ರಾಯ್ಕರ್
೫೮.	**ಬಾನಯ್ಯ ಗುರಡಾದ್ರಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೫	ಬಸವರಾಜ ಉಪ್ಪಿನ್
೫೯.	**ಬಾರೋಕ್ ಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೯	ಡಾ. ಎಸ್. ಸಿ. ಪಾಟೀಲ
೬೦.	**ಬಿ. ಕೆ. ಹುಬಳಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೯	ಡಿ. ಎಸ್. ಚೌಗಲೆ
೬೧.	**ಬಿದರಿ ಚಿತ್ರಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪	ಡಾ. ವಿ. ಎಂ. ಬಾಗಾಯತ
೬೨.	**ಬೆಳದಿಂಗಳ ಚಿತ್ರಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೪	ಡಾ. ಆನಂದ ಕೆ. ಪೂಜಾರ

೬೩. **ಭಾರತೀಯ ಕಲೆ** — **ಎನ್. ಮರಿಶಾಮಾಚಾರ್**
ಸಿ. ಎಂ. ಎನ್. ಪ್ರಕಾಶನ್, ಬೆಂಗಳೂರು
೨೦೦೧

೬೪. **ಭಾರತೀಯ ಚಿತ್ರಕಲೆ** — **ಅನು. ಪಿ.ಆರ್. ತಿಪ್ಪೇಸ್ವಾಮಿ**
ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್
ಇಂಡಿಯಾ, ಹೊಸದೆಹಲಿ, ೧೯೯೮

೬೫. **ಭಾರತೀಯ ಚಿತ್ರಕಲೆ** — **ಡಾ. ಶಿವರಾಮ ಕಾರಂತ**
ಕರ್ನಾಟಕ ಸರಕಾರ ಕನ್ನಡ ಪುಸ್ತಕ
ಪ್ರಾಧಿಕಾರ, ಬೆಂಗಳೂರು

೬೬. **ಮ. ಈ. ಗುರು** — **ಎಲ್. ಶಿವಲಿಂಗಪ್ಪ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭

೬೭. **ಮಧ್ಯಪ್ರದೇಶದ ಕಲೆ** — **ಕೆ. ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೬೮. **ಮುಖಗಳೊಂದಿಗೆ ಮುಖಾಮುಖಿ** — **ಕೆ. ವಿ. ಸುಬ್ರಹ್ಮಣ್ಯಂ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೬೯. **ಮೂಡುಗೋಡು ಹಿರಣ್ಣಪ್ಪ** — **ನಾ. ಡಿಸೋಜಾ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೭೦. **ಯಕ್ಷಗಾನ ಚಿತ್ರಕಲೆ** — **ಉಪಾಧ್ಯಾಯ ಮೂಡುಬೆಳ್ಳೆ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೭೧. **ಯೂಸೂಫ್ ಅರಕ್ಕಲ್** — **ಚಿ. ಸು. ಕೃಷ್ಣಸೆಟ್ಟಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೯

೭೨. **ರಂಗೋಲಿ ಚಿತ್ರಕಲೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೭೩. **ರುಮಾಲೆ ಚನ್ನಬಸವಯ್ಯ** — **ಕೆ.ಎಸ್. ಶ್ರೀನಿವಾಸಮೂರ್ತಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೭೪. ರೇಖಾಚಿತ್ರ — ಬಿ.ವಿ.ಕೆ. ಶಾಸ್ತ್ರೀ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೭೫. ಲಲಿತಕಲಾ-೩೦ ಅಂದು-ಇಂದು-ಮುಂದು — (ಸಂ) ಡಾ.ಎಂ.ಎಸ್. ಮೂರ್ತಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೧೮

೭೬. ವಿಜಯ ಸಿಂಧೂರ — ಕೆ. ವಿ. ಸುಬ್ರಹ್ಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

೭೭. ವಿ.ಜಿ. ಅಂದಾನಿ — ಡಾ. ಶಿವಾನಂದ ಎಚ್. ಬಂಟನೂರು
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೭೮. ವಿ.ಟಿ. ಕಾಳೆ — ಡಾ. ಎಸ್. ಸಿ. ಪಾಟೀಲ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೭೯. ವೆಂಕಟಪ್ಪ : ಸಮಕಾಲೀನ ಪುನರಾವಲೋಕನ — ಕೆ. ವಿ. ಸುಬ್ರಹ್ಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೮೦. ವೈ. ಸುಬ್ರಮಣ್ಯ ರಾಜು — ಎಂ. ಎಸ್. ಚಂದ್ರಶೇಖರ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭

೮೧. ಶಂಕರಗೌಡ ಬೆಟ್ಟದೂರು — ಎಚ್. ಎ. ಅನಿಲ್ ಕುಮಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭

೮೨. ಶಾಂತಲಿಂಗಪ್ಪ ಪಾಟೀಲ — ಹನಮಂತ ಮಂತಟ್ಟಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

೮೩. ಶಿಲ್ಪಿ ಸಿಂಗಣ್ಣಾಚಾರ್ಯ — ಜಿ. ವಿ. ಗಣೇಶಯ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೮೪. ಶೀಗಿಯ ಚಿತ್ರಕಲೆ — ಡಾ. ಯಾದಪ್ಪ ಪರದೇಶಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

೮೫. **ಸರ್ರಿಯಲಿಸಂ** — **ಎನ್. ಮರಿಶಾಮಾಚಾರ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೮೬. **ಸಿ. ಪಿ. ನಾಗೌಡ** — **ಡಾ. ಲಕ್ಷ್ಮೀದೇವಿ ಗವಾಯಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೮

೮೭. **ಸುವರ್ಣ ಕಲಾವಿದರು** — **(ಸಂ) ಡಾ.ಎಂ.ಎಸ್. ಮೂರ್ತಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

೮೮. **ಸೋಮಶೇಖರ ಎಂ. ಸಾಲಿ** — **ಡಾ. ಬಿ. ಕೆ. ಹಿರೇಮಠ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೯

೮೯. **ಸೌಂದರ್ಯಶಾಸ್ತ್ರ** — **ಅನು. ಡಾ. ಕಾಶೀನಾಥ ಅಂಬಲಗೆ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೯೦. **ಹಚ್ಚೆ ಚಿತ್ರಕಲೆ** — **ಡಾ. ಎಸ್. ಸಿ. ಪಾಟೀಲ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೪

❑❑❑

೨. ಇಂಗ್ಲೀಷ್ ಗ್ರಂಥಗಳು

01. **A History of Fine Arts in India and west** — **Edith Tomory**
Orient Logman Limited,
Madras– 1992

02. **An Early Document of Indian Art** — **B. N. Goswamy**
Manohar book service, Delhi
1976

03. **Abhilashitartha Chintamani** — **(edt) R. Shama Sastri**
Mysore Sanskrit Series, Mysore
1926

04. **Ajanta (4 Volumes)** — **G. Yazdani**
Oxford University Press,
Oxford – 1930-1958

05. **Chitralakshana of Nagnajit** — **B. N. Goswamy**
Manohar book service, Delhi
1976

06. **Colour and Meaning** — **Mariciahall**
Cambridge Univeristy Press,
Cambridge. 1992

07. **Fundamental of Indian Art** — **S. N. Dasgupta**
Bharatiya Vidya Bhavan, Bombay
1983

08. **Hand book of Indian Art** — **E. B. Havell**
Murry, London
1920

09. **Indian Painting** — **Percy Brown**
Y.M.C.A Publishing House,
Culcutta. 1960

10. **Indian Miniature Paintings** — **Anjan Chakravarthy**
Roli Book,
1996

11. **Mural Paintings in India** — **J.C.Nagpal**
Gain Publication,
Delhi – 1987

12. **Techniques in Indian Mural Painting** — **Jayanth Chakravarthi**
K.P.Bagachi & Co., Kolkotta
1980

13. **The Artist's Hand Book** — **Ray Smith**
Jain Book Depot,
2009

14. **The Cambridge Encyclopedia**
Cambridge Univeristy Press,
Cambridge. U.K. 1987

15. **The New Encyclopedia Britannica-VIII**
Encyclopedia Britannica (India) Pvt. Ltd,
New Delhi.

❑❑❑

ಅನುಬಂಧ - ೩

ಮಾಹಿತಿ ನೀಡಿದ ವಕ್ತೃಗಳು

೦೧.	ಡಾ. ಸಿ. ಚಂದ್ರಶೇಖರ ಹಿರಿಯ ಕಲಾವಿದರು, ಬೆಂಗಳೂರು.	ಮಾಜಿ ಅಧ್ಯಕ್ಷರು
೦೨.	ಡಾ. ವಿ. ಜಿ. ಅಂದಾನಿ ಹಿರಿಯ ಕಲಾವಿದರು, ಕಲಬುರ್ಗಿ	ಮಾಜಿ ಅಧ್ಯಕ್ಷರು
೦೩.	ಡಾ. ಜೆ. ಎಸ್. ಖಂಡೇರಾವ್ ಹಿರಿಯ ಕಲಾವಿದರು, ಕಲಬುರ್ಗಿ	ಮಾಜಿ ಅಧ್ಯಕ್ಷರು
೦೪.	ಡಾ. ಎಂ. ಎಸ್. ಮೂರ್ತಿ ಚಿತ್ರಕಲಾವಿದರು, ಬೆಂಗಳೂರು	ಮಾಜಿ ಅಧ್ಯಕ್ಷರು
೦೫.	ಡಾ. ಎಂ. ಜೆ. ಕಮಲಾಕ್ಷಿ ಹಿರಿಯ ಕಲಾವಿದರು, ಬೆಂಗಳೂರು	ಮಾಜಿ ಅಧ್ಯಕ್ಷರು
೦೬.	ಪ್ರೊ. ಎಸ್. ಸಿ. ಪಾಟೀಲ ಹಿರಿಯ ಚಿತ್ರಕಲಾವಿದರು ಮತ್ತು ಕಲಾಸಾಹಿತಿ, ಧಾರವಾಡ	ಮಾಜಿ ಸದಸ್ಯರು
೦೭.	ಡಾ. ವಿಶ್ವೇಶ್ವರಿ ತಿವಾರಿ ಚಿತ್ರಕಲಾವಿದರು ಕಲಬುರ್ಗಿ	ಮಾಜಿ ಸದಸ್ಯರು

೦೮.	ಶ್ರೀ. ಯೋಗಿಶ ಚ. ಮಠದ ಚಿತ್ರಕಲಾವಿದರು, ಬೀದರ	ಮಾಜಿ ಸದಸ್ಯರು
೦೯.	ಶ್ರೀ. ಬಿ. ಕೆ. ಬಡಿಗೇರ ಚಿತ್ರಕಲಾವಿದರು, ಬೀದರ	ಮಾಜಿ ಸದಸ್ಯರು
೧೦.	ಶ್ರೀ. ಎಫ್. ವಿ. ಚಿಕ್ಕಮಠ ಚಿತ್ರಕಲಾವಿದರು, ಧಾರವಾಡ	ಮಾಜಿ ಸದಸ್ಯರು
೧೧.	ಶ್ರೀ. ಆಯಾಜುದ್ದೀನ ಪಟೇಲ ಚಿತ್ರಕಲಾವಿದರು, ಕಲಬುರ್ಗಿ	ಮಾಜಿ ಸದಸ್ಯರು
೧೨.	ಡಾ. ಸುರೇಂದ್ರನಾಥ ಡಿ. ಆರ್. ಚಿತ್ರಕಲಾವಿದರು, ಚಿತ್ರದುರ್ಗ	ಮಾಜಿ ಸದಸ್ಯರು
೧೩.	ಶ್ರೀ. ಅಬಿಲಾಷ ಡಿ. ಚಿತ್ರಕಲಾವಿದರು, ಮಂಡ್ಯ	ಮಾಜಿ ಸದಸ್ಯರು
೧೪.	ಶ್ರೀ. ಮಾಶಾಳ್ಕರ ಕಲಬುರ್ಗಿ	ಕಲಾವಿದರು
೧೫.	ಶ್ರೀ. ರಾಘವೇಂದ್ರ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು	ಸಿಬ್ಬಂದಿ
೧೬.	ಶ್ರೀ. ವೆಂಕಟೇಶ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು	ಸಿಬ್ಬಂದಿ
೧೭.	ಶ್ರೀ. ಗಂಗಾಧರ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು	ಸಿಬ್ಬಂದಿ
೧೮.	ಶ್ರೀ. ಶಿವು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು	ಸಿಬ್ಬಂದಿ

೧೯. ಭವ್ಯಾ | ಸಿಬ್ಬಂದಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೨೦. ವನಜಾಕ್ಷಿ | ಸಿಬ್ಬಂದಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೨೧. ಶ್ರೀ. ಮಾರಿಮುತ್ತು | ಸಿಬ್ಬಂದಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೨೨. ಶ್ರೀ. ಎಂ. ಬಿ. ಕಂಬಾರ | ಕಲಾವಿದರು
ಬೆಂಗಳೂರು

೨೩. ಶ್ರೀ. ಎ. ಎಸ್. ಪಾಟೀಲ | ಹಿರಿಯ ಚಿತ್ರಕಲಾವಿದರು
ಕಲಬುರ್ಗಿ

ಛಾಯಾಚಿತ್ರಗಳ ಋಣ

೧. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಸಂಗ್ರಹಣೆ

೨. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಂದು–ಇಂದು–ಮುಂದು ಎಂಬ ಪುಸ್ತಕದಿಂದ ಸಂಗ್ರಹಣೆ

೩. www.karnatakalalitkla academy.org

❑❑❑



ಜನ್ಮಶತಮಾನೋತ್ಸವ ಸಮಾರಂಭದ ದೃಶ್ಯ



ಜನ್ಮಶತಮಾನೋತ್ಸವದಲ್ಲಿ ಕಲಾವಿದರಿಗೆ ಹೂವಿನಿಂದ ಗೌರವ ಸಲ್ಲಿಸುತ್ತಿರುವುದು



ಬೆಂಗಳೂರಿನ ಕಲಾಗ್ರಾಮದಲ್ಲಿ ಗ್ರಾಫಿಕ್ ಕಲಾಕೇಂದ್ರ ನಿರ್ಮಾಣ ಕಾಮಗಾರಿಕೆ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀಮತಿ ಉಮಾಶ್ರೀ ಅಧ್ಯಕ್ಷರು ಡಾ ಎಂ.ಎಸ್.ಮೂರ್ತಿ ಹಾಗೂ ಗಣ್ಯರಿಂದ ಅಂಕಿತ.



ಗ್ರಾಫಿಕ್ ಕಲಾ ಕೇಂದ್ರ ಶಿಲಾನ್ಯಾಸ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀಮತಿ ಉಮಾಶ್ರೀ ಅಧ್ಯಕ್ಷರು ಡಾ ಎಂ.ಎಸ್.ಮೂರ್ತಿ ಹಾಗೂ ಪ್ರೊ ಎಂ.ಜೆ ಕಮಲಾಕ್ಷಿ ಹಾಗೂ ಮತ್ತಿತರು.









ಬೆಳಗಾವಿಯಲ್ಲಿ ಸುವರ್ಣ ಸಂಭ್ರಮ ಆಚರಣೆಯಲ್ಲಿ ಉದ್ಘಾಟನೆ ಸಮಾರಂಭ ಅಕಾಡೆಮಿಯ
ಮಾಜಿ ಅಧ್ಯಕ್ಷರುಗಳಾದ ಡಾ.ಸಿ.ಚಂದ್ರಶೇಖರ್, ವಿ.ಜಿ.ಅಂದಾನಿ, ವಿ.ಟಿ. ಕಾಳೆ,
ಜೆ.ಎಸ್.ಖಂಡೇರಾವ್, ಚಿ.ಸು ಕೃಷ್ಣಶೆಟ್ಟಿ ಮತ್ತು ಡಾ.ಎಂ.ಎಸ್.ಮೂರ್ತಿ ಹಾಗೂ ಇನ್ನಿತರರು.



ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಕೆ. ಜಿ ಸುಬ್ರಮಣ್ಯನ್ ಅವರಿಗೆ ಅಧ್ಯಕ್ಷರಿಂದ ಗೌರವ ಸಲ್ಲಿಸುತ್ತಿರುವುದು



ಹಿರಿಯ ಕಲಾಚೇತನ ಪೀಟರ್ ಲೂಯಿಸ್ ಅವರಿಗೆ ಅಧ್ಯಕ್ಷರಿಂದ ಗೌರವ ಸಲ್ಲಿಸುತ್ತಿರುವುದು



ದೃಶ್ಯ ಕಲಾ ಸಾಹಿತ್ಯ ಮತ್ತು ವಿಮರ್ಶೆ ವಿಚಾರ ಸಂಕಿರಣ ಕಾರ್ಯಕ್ರಮ, ಬೆಂಗಳೂರು



ವಿಚಾರ ಸಂಕಿರಣದ ಕುರಿತು ಮಾತನಾಡುತ್ತಿರುವ ಎಂ.ಹೆಚ್. ಕೃಷ್ಣಯನವರು



ರಾಷ್ಟ್ರೀಯ ವಿಚಾರ ಸಂಕಿರಣ ಕಲಾಶಿಕ್ಷಣ, ಕಲಬುರಗಿ



ರಾಷ್ಟ್ರೀಯ ವಿಚಾರ ಸಂಕಿರಣ, ಮಂಗಳೂರು


















ಬೆಂಗಳೂರಿನಲ್ಲಿ ನಡೆದ 'ಕಲಾ ಚಿಂತನ' ವಿಚಾರ ಸಂಕಿರಣದ ಚಿತ್ರವಳಿ ಗಣ್ಯರ ಮಾತುಕತೆ ಹಾಗೂ ವಿಚಾರಿ ಸಂಕಿರ್ಣದಲ್ಲಿ ಅಧ್ಯಕ್ಷರು ಹಿರಿಯ ಕಲಾವಿದರು ಹಾಗೂ ವಿಚಾರ ಸಂಕಿರಣದಲ್ಲಿ ಶಿಬಿರಾರ್ಥಿಗಳು.



ಮಕ್ಕಳ ಚಿತ್ರಕಲೆ ಕಾರ್ಯಕ್ರಮ, ಬೆಂಗಳೂರು



ಮಕ್ಕಳು ಚಿತ್ರ ಬಿಡಿಸುತ್ತಿರುವ ದೃಶ್ಯ



ಶ್ರವಣಬೆಳಗೊಳದ ಭಿತ್ತಿಚಿತ್ರಗಳ ವಿಶೇಷ ಕ್ಯಾಲೆಂಡರ್ ಬಿಡುಗಡೆ


ಬೆಂಗಳೂರು: 'ಪರಂಪರೆಯ ಸ್ಪರ್ಶ ಇಲ್ಲದ ಕಲೆ ಮತ್ತು ಕಲಾವಿದನಿಂದ ಹೊಸತನದ ಸೃಷ್ಟಿ ಅಸಾಧ್ಯ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಅರವಿಂದ ಮಾಲಗತ್ತಿ ಅಭಿಪ್ರಾಯಿಸಿದರು. ನಗರದ ನಯನ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಹಾ



ಕಲಾಗ್ರಾಮದಲ್ಲಿ ಗ್ರಾಫಿಕ್ ಸ್ಟುಡಿಯೋ



ಕರ್ನಾಟಕ ಲಲಿತಕಲಾ ಅಕಾಡೆಮಿ ಮಹಾಮಸ್ತಕಾಭಿಷೇಕ ಮಹೋತ್ಸವದ ಸವಿನೆನಪಿಗಾಗಿ ಹೊರತಂದಿರುವ ಶ್ರವಣಬೆಳಗೊಳದ ಭಿತ್ತಿಚಿತ್ರಗಳ ವಿಶೇಷ ಕ್ಯಾಲೆಂಡರ್ ಅನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಅರವಿಂದ ಮಾಲಗತ್ತಿ ಬಿಡುಗಡೆ ಮಾಡಿದರು.




ಚಿತ್ರಕಲಾವಿದರಿಗೆ ಅರ್ಜಿ ಆಹ್ವಾನ

ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿವಿಧ ಕಾರ್ಯಕ್ರಮಗಳಿಗೆ ಚಿತ್ರ ಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ಚಿತ್ರಕಲಾ ಶಿಬಿರ, ಕಾರ್ಯಾಗಾರ,



ಕುಂಚದಲ್ಲಿ ಮೂಡಿದ ಭಾವದ ಅಲೆಗಳು



ರಾಷ್ಟ್ರೀಯ ಕಲಾಪ್ರದರ್ಶನ, 15 ಮಂದಿಗೆ ಪ್ರಶಸ್ತಿ


ಕರ್ನಾಟಕ ಲಲಿತಕಲಾ ಅಕಾಡೆಮಿಯ ಕುರಿತು ಪತ್ರಿಕೆಯಲ್ಲಿ ಪ್ರಕಟಿತ ಲೇಖನಗಳು



ಬೇಕಿದೆ ಮೌಲ್ಯ ಬಿತ್ತುವ ಶಿಕ್ಷಣ: ಡಾ| ಪಿ.ಚಂದ್ರಶೇಖರ್



ಕಲಾಕೃತಿಯು ಜೀವನ ದೃಷ್ಟಿಯ ಭಾಗವಾಗಲಿ



ವಿಜಯ ಕರ್ನಾಟಕ

ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪ್ರಕಟ



ಗರುಡಾದ್ರಿ ಕಲೆಗೆ

ಕಲಾವಿದರ ಮೆರುಗು...



THE HINDU • TUESDAY, NOVEMBER

Artists get identity card

"This is a pioneering effort of the academy that will ultimately recognise nearly 400 artists of the State to express gratitude to them for having brought value addition to the cultural scene," said M.S. Mur

(L-R) Artists S.G. Vasudev, Bhaskar Rao, Chandranath ... M.B. Patil, and V.T. Kale displaying their new identity c... Bengaluru on Monday. Chairman of Karnataka Lalithal... Academy M.S. Murthy (second from left) is seen.



ವಿಜಯ ಕರ್ನಾಟಕ

ಲಲಿತಕಲಾ ಅಕಾಡೆಮಿಯಿಂದ ವಿತರಣೆ

ಕಲಾವಿದರಿಗೆ ಗುರುತಿನ ಚೀಟಿ

ಕರ್ನಾಟಕ ಲಲಿತಕಲಾ ಅಕಾಡೆಮಿಯ ಕುರಿತು ಪತ್ರಿಕೆಯಲ್ಲಿ ಪ್ರಕಟಿತ ಲೇಖನಗಳು


ಬೇಕಿದೆ ಮೌಲ್ಯ ಬಿತ್ತುವ ಶಿಕ್ಷಣ: ಡಾ। ಸಿ.ಚಂದ್ರಶೇಖರ್


Bidri art workshop inaugurated


ವಿಜಯ ಕರ್ನಾಟಕ

ಸುವರ್ಣ ಗೌರವ ಫೆಲೋಶಿಪ್‌ಗೆ ಎಚ್.ಜಿ.ವಾಸುದೇವ್ ಆಯ್ಕೆ

ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರಕಟ


ಜಿಲ್ಲೆಯಲ್ಲಿ 16 ವರ್ಷದ ನಂತರ ಕಲಾಶಿಬಿರ!


ಸಂಯುಕ್ತ ಕರ್ನಾಟಕ

ಕಲಾವಿದರ ಖಾತೆಗೆ ಸಂಭಾವನೆ


ದೇಶೀಯ ಕಲೆಗಳಿಗೆ ಪ್ರಚಾರ ಅಗತ್ಯ

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪತ್ರಿಕೆಯ ಪ್ರಕಟಿತ ಲೇಖನಗಳು

ಜೈನ ಧರ್ಮದ ಇತಿಹಾಸ ಸಾರುವ ಕಲಾ



ವಿಜಯ ಕರ್ನಾಟಕ VK

ಮಂಗಳವಾರ, 10 ನವೆಂಬರ್ 2015, ಬೆಂಗಳೂರು

ಲಲಿತಕಲಾ ಅಕಾಡೆಮಿಯಿಂದ ವಿತರಣೆ


ಕಲಾವಿದರಿಗೆ ಗುರುತಿನ ಚೀಟಿ




www.lalithakalakarnataka.org

ಕಲಾವಿದರ ಕುಂಚದಲ್ಲಿ ಅರಳಿದ ಜೈನ ಇತಿಹಾಸ





ಸಾಮಾಜಿಕ ಸ್ಪಂದನೆ ಇಲ್ಲದ ಕಲೆ ವ್ಯ



1970ರ ಕಾಲದಲ್ಲಿ ರಚನೆಯಾದ ಅಪರೂಪದ ಕಲಾಕೃತಿಗಳ ಪ್ರದರ್ಶನ

ಚಿತ್ರಕಲಾಕೃತಿ ಪ್ರದರ್ಶನಕ್ಕೆ ಚಾಲನೆ



ಕನ್ನಡಪ್ರಭ




Bengaluru
Page No. 4 Jan 24 2016
Powered by: erelego.com





ಅಮಂತ್ರಣ ಪತ್ರಿಕೆ ಮತ್ತು ಪ್ರಮಾಣ ಪತ್ರಗಳು



ಕರ್ನಾಟಕ ಲಲಿತಕಲಾ ಅಕಾಡೆಮಿ
Karnataka Lalithakala Academy